ಮಂಗಳವಾರ, ಜುಲೈ 15, 2025 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಜಡೇಜ ಮಿಂಚು

ಭಾರತದ ರವೀಂದ್ರ ಜಡೇಜ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಸತತ ನಾಲ್ಕನೇ ಅರ್ಧಶತಕ ದಾಖಲಿಸಿದರು. ಮೂರನೇ ಪಂದ್ಯವನ್ನು 22 ರನ್‌ಗಳಿಂದ ಇಂಗ್ಲೆಂಡ್ ಗೆದ್ದಿತು

ರನ್: 61* | ಎಸೆತ: 181





'ಶಕ್ತಿ' ಸಂಭ್ರಮ..

'ಶಕ್ತಿ' ಯೋಜನೆಯಡಿ ಸಾಂಕೇತಿಕವಾಗಿ 500ನೇ ಕೋಟಿಯ ಟಿಕೆಟ್ ಅನ್ನು ಮಹಿಳೆಯರಿಗೆ ಸೋಮವಾರ ವಿತರಿಸಿದ ವೇಳೆ ಕಂಡುಬಂದ ಸಂಭ್ರಮ

विशेष गहन पुनरीक्षण 2025

क्या आप बिहार के मतदाता हैं?

भारत निर्वाचन आयोग Election Commission of India

क्या आप अस्थाई रूप से राज्य से बाहर हैं?

अगर आपके पास अभी मोबाइल फोन है, तो आप गणना प्रपत्र तुरंत भर सकते हैं।



कृपया QR Code Scan करें।

https://voters.eci.gov.in/

ऑनलाइन गणना प्रपत्र आसानी से भरें।

1. "Fill Enumeration Form Online" बटन पर क्लिक करें।
2. मोबाइल नंबर या ईपिक के माध्यम से OTP का प्रयोग कर लॉगिन करें।
3. स्क्रीन पर दिखाई देने वाले फॉर्म में अपनी विवरणी जैसे नाम, जन्मतिथि एवं अन्य जानकारी भरें।
4. एक सादे सफेद कागज़ पर अपने हस्ताक्षर या बाएं हाथ के अंगूठे का निशान बनाएं एवं मोबाइल से उसकी स्पष्ट फोटो खींचकर अपलोड करें।
5. घोषणा (Declaration) पढ़ें और बॉक्स में टिक करें।
6. Preview में सभी जानकारी जांच लें, फिर "Submit Enumeration Form......." बटन पर क्लिक करें।
7. गणना प्रपत्र सफलतापूर्वक जमा होने की सूचना SMS के माध्यम से मिल जाएगी।
8. उसके बाद, अपनी फोटो और दस्तावेज़ जमा करने के लिए दिए गए लिंक पर क्लिक करें।
9. आवश्यक दस्तावेजों की मोबाइल से फोटो लें और अपलोड करें।
10. आपकी फोटो और दस्तावेज़ भी सफलतापूर्वक जमा हो जाएंगे।

ऑफलाइन माध्यम

अस्थायी रूप से स्थानांतरित (माइग्रेटेड) मौजूदा मतदाता वेबसाइट https://voters.eci.gov.in से पूर्व-भरा हुआ गणना प्रपत्र डाउनलोड कर सकते हैं।

ऐसे मतदाता गणना प्रपत्र को प्रिंट कर हस्ताक्षरित कर सकते हैं और 25 जुलाई 2025 से पहले अपने बीएलओ तक, अपने पारिवारिक सदस्यों के माध्यम से या किसी भी ऑनलाइन माध्यम (जैसे व्हाट्सऐप आदि) द्वारा भेज सकते हैं, ताकि उनका नाम प्रारूप वोटर लिस्ट में सम्मिलित किया जा सके।

CBC 52101/13/0003/2526

- यदि आप आवश्यक दस्तावेज उपलब्ध करा देते हैं तो निर्वाचक निबंधन पदाधिकारी (ERO) को आवेदन को प्रोसेस करने में आसानी रहेगी।
- यदि आप आवश्यक दस्तावेज उपलब्ध नहीं करा पाते हैं तो निर्वाचक निबंधन पदाधिकारी(ERO) द्वारा स्थानीय जाँच या अन्य दस्तावेज के साक्ष्य के आधार पर निर्णय लिया जा सकेगा।
- 2003 की मतदाता सूची दिए गए लिंक https://voters.eci.gov.in/bh_2003_eroll पर उपलब्ध है।

अधिक जानकारी के लिए हेल्पलाइन नंबर 1950 पर कॉल करें

मुख्य निर्वाचन पदाधिकारी, बिहार

1950

https://ceoelection.bihar.gov.in | Follow us on: BiharCEO CEOBihar Bihar_CEO | https://voters.eci.gov.in

‘ಸುರಂಗ ರಸ್ತೆ; ಹಣ ಲೂಟಿ ಮಾಡುವ ಯೋಜನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರ ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ‘ಸುರಂಗ ರಸ್ತೆ’ ಯೋಜನೆ ಸಾರ್ವಜನಿಕರ ಹಣವನ್ನು ಲೂಟಿ ಮಾಡುವ ಯೋಜನೆಯಾಗಿದೆ’ ಎಂದು ಆರೋಪಿಸಿದ ಸಂಸದ ತೇಜಸ್ವಿ ಸೂರ್ಯ, ‘ಯಾವುದೇ ಕಾರಣಕ್ಕೂ ಈ ಯೋಜನೆಯನ್ನು ಅನುಷ್ಠಾನ ಮಾಡಲು ಬಿಜೆಪಿ ಬಿಡುವುದಿಲ್ಲ’ ಎಂದು ಎಚ್ಚರಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಪ್ಪುಪಟ್ಟಿಗೆ ಸೇರಿದ ಕಂಪನಿಯಿಂದ ಸುರಂಗ ರಸ್ತೆ ಯೋಜನೆಯ ಡಿಪಿಆರ್ ಸಿದ್ಧಪಡಿಸಲಾಗಿದೆ. ಈ ಯೋಜನೆಯ ಡಿಪಿಆರ್‌ನಲ್ಲಿ ಬೆಂಗಳೂರು ಮೆಟ್ರೊ ಯೋಜನೆ ಎಂದಿದೆ. ಡಿಪಿಆರ್‌ಗಾಗಿ ₹9.5 ಕೋಟಿ ಖರ್ಚು ಮಾಡಿದೆ. ಮೆಟ್ರೊಗೆ ಸಂಬಂಧಿಸಿದ ಯೋಜನೆಯನ್ನೇ ಕಾಪಿ ಆ್ಯಂಡ್ ಪೇಸ್ಟ್ ಮಾಡಿ, ಸುರಂಗ ರಸ್ತೆ ಯೋಜನೆಯನ್ನು ತಯಾರಿಸಲಾಗಿದೆ. ಇದು ಕಾಂಗ್ರೆಸ್‌ನ ಜೇಬು ತುಂಬಿಸುವ ಯೋಜನೆ’ ಎಂದರು.

‘ಬೆಂಗಳೂರಿನಲ್ಲಿ 9 ಸಾವಿರ ಬಸ್‌ಗಳ ಕೊರತೆ ಇದೆ. ಬಸ್ ಸಂಖ್ಯೆ ಹೆಚ್ಚಿಸಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳುತ್ತಿಲ್ಲ. ಉಪ ನಗರ ರೈಲ್ವೆ ಯೋಜನೆ, ನಾಲ್ಕು ಕಾರಿಡಾರ್‌ಗಳ ಯೋಜನೆಗಳು ನನೆಗುದಿಗೆ ಬಿದ್ದಿವೆ. 2031ರ ಒಳಗೆ ಮೆಟ್ರೊ ಜಾಲ 317 ಕಿ.ಮೀ. ಇರಬೇಕು. ಆದರೆ, ಈಗ ಕೇವಲ 78 ಕಿ.ಮೀ. ಇದೆ. ನಾಲ್ಕು ವರ್ಷಗಳಿಂದ ನಡೆಯುತ್ತಿರುವ ಹಳದಿ ಮಾರ್ಗ ಸಿದ್ಧವಾಗಿದ್ದರೂ ರೈಲು ಸಂಚಾರ ಆರಂಭವಾಗಿಲ್ಲ. ಎರಡೂವರೆ ಕಿ.ಮೀ. ಉದ್ದದ ಈಜಿಪುರ ಮೇಲ್ಸೇತುವೆ ಅರ್ಧಕ್ಕೆ ನಿಂತಿದೆ. ಆದರೆ, ಸುರಂಗ ರಸ್ತೆ ಯೋಜನೆಗೆ ಮುಂದಾಗಿದ್ದೀರಿ’ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ರಾಜ್ಯ ಕಾರ್ಯದರ್ಶಿ ಅಂಬಿಕಾ ಹುಲಿನಾಯ್ಕರ್, ಶಾಸಕ ಧೀರಜ್ ಮುನಿರಾಜು ಉಪಸ್ಥಿತರಿದ್ದರು.

ಬಿಬಿಎಂಪಿ: 23 ತಿಂಗಳ ಬಿಲ್ ಬಾಕಿ

12 ತಿಂಗಳ ಎಲ್‌ಒಸಿಯನ್ನಾದರೂ ಶೀಘ್ರ ಬಿಡುಗಡೆ ಮಾಡಲು ಗುತ್ತಿಗೆದಾರರ ಮನವಿ



ಬಿಬಿಎಂಪಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಮಹೇಶ್ವರ್ ರಾವ್ ಅವರಿಗೆ ಮನವಿ ಸಲ್ಲಿಸಿದರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪ್ಯಾಕೇಜ್ ಟೆಂಡರ್ ಕೈಬಿಡುವಂತೆ ಕೋರಿಕೆ
- ಶೇ 25ರಷ್ಟು ತಡೆಹಿಡಿದಿರುವ ಬಿಲ್ ಪಾವತಿಸಲು ಆಗ್ರಹ
- ಐದು ಬೇಡಿಕೆ ಈಡೇರಿಸಲು ಬಿಬಿಎಂಪಿ ಆಯುಕ್ತರಿಗೆ ಮನವಿ

ಬೆಂಗಳೂರು: ‘ಬಿಬಿಎಂಪಿ ಅನುದಾನದಲ್ಲಿ ಪೂರ್ಣಗೊಳಿಸಿರುವ ಕಾಮಗಾರಿಗೆ 2023ರ ಆಗಸ್ಟ್‌ನಿಂದ ಬಿಲ್ ಪಾವತಿಯಾಗಿಲ್ಲ. ಕನಿಷ್ಠ 12 ತಿಂಗಳ ಎಲ್‌ಒಸಿಯನ್ನಾದರೂ ಶೀಘ್ರ ಬಿಡುಗಡೆ ಮಾಡಿ’ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘ ಮನವಿ ಮಾಡಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರನ್ನು ಸೋಮವಾರ ಭೇಟಿ ಮಾಡಿ ಮನವಿ ಸಲ್ಲಿಸಿದ ಬಿಬಿಎಂಪಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು, ‘2023ರ ಆಗಸ್ಟ್‌ನಿಂದ 2025ರ ಜೂನ್‌ವರೆಗೆ 23 ತಿಂಗಳ ಬಿಲ್ ಪಾವತಿ ಬಾಕಿ ಇದೆ. 2023ರ ಆಗಸ್ಟ್‌ನಿಂದ 12 ತಿಂಗಳ ಎಲ್‌ಒಸಿ ಬಿಡುಗಡೆ ಮಾಡಿ’ ಎಂದರು.

‘₹1 ಕೋಟಿ ಮೀರಿದ ಕಾಮಗಾರಿಗಳಿಗೆ ಗುಣ ನಿಯಂತ್ರಣ ವಿಭಾಗದಿಂದ ಯೋಜನಾ ನಿರ್ವಹಣಾ ಸಲಹೆಗಾರರನ್ನು (ಪಿಎಂಸಿ) ನೇಮಿಸಿಕೊಳ್ಳುತ್ತಿದ್ದು, ಹಿಂದಿನ ಪದ್ಧತಿಯಂತೆ ಕಾರ್ಯಪಾಲಕ ಎಂಜಿನಿಯರ್‌ಗಳು ಪಿಎಂಸಿ ನಿಗದಿಪಡಿಸಿಕೊಳ್ಳಲು ಆದೇಶಿಸಬೇಕು’ ಎಂದು ಕೋರಿದ್ದಾರೆ.

‘ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತದಿಂದ (ಕೆಆರ್‌ಐಡಿಎಲ್) ಆರೇಳು ವರ್ಷಗಳ ಹಿಂದೆ ನಡೆಸಿರುವ ಕಾಮಗಾರಿಯ ಬಿಲ್‌ನಲ್ಲಿ ಶೇ 25ರಷ್ಟನ್ನು ತಡೆಹಿಡಿದಿದ್ದು, ಅದನ್ನು ಬಿಡುಗಡೆ ಮಾಡಬೇಕು. 2019ರ ಜೂನ್‌ನಿಂದ 2023ರ ಮಾರ್ಚ್ ಅಂತ್ಯದವರೆಗೆ ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್‌ನಲ್ಲಿ ತಡೆಹಿಡಿದಿರುವ ಶೇ 10ರಷ್ಟು ಭದ್ರತಾ ಠೇವಣಿಯನ್ನು ಪಾವತಿಸಬೇಕು’ ಎಂದಿದ್ದಾರೆ.

‘ವಾರ್ಡ್ ಮಟ್ಟದ ಕಾಮಗಾರಿಗಳನ್ನು ವಿಭಾಗ ಮಟ್ಟದಲ್ಲಿ ಒಟ್ಟುಗೂಡಿಸಿ ಪ್ಯಾಕೇಜ್ ಟೆಂಡರ್ ಮಾಡಲಾಗುತ್ತಿದೆ. ಇದರಿಂದ ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿದ್ದು, ಪ್ಯಾಕೇಜ್ ಪದ್ಧತಿಯನ್ನು ರದ್ದುಪಡಿಸಬೇಕು’ ಎಂದು ಮನವಿ ಮಾಡಿದ್ದಾರೆ.

₹2,150 ಕೋಟಿ ಬಾಕಿ: ನಂದಕುಮಾರ್

‘ಬಿಬಿಎಂಪಿ ಅನುದಾನದಲ್ಲಿ ಪೂರ್ಣಗೊಳಿಸಿರುವ ಕಾಮಗಾರಿಗಳ ಬಿಲ್‌ಗಳು 2023ರ ಆಗಸ್ಟ್‌ನಿಂದ ಬಾಕಿ ಉಳಿದಿದ್ದು, ಇದರ ಮೊತ್ತ ಸುಮಾರು ₹2,150 ಕೋಟಿ’ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ನಂದಕುಮಾರ್ ತಿಳಿಸಿದರು.

‘ನಾವು 12 ತಿಂಗಳ ಎಲ್‌ಒಸಿ ಕೇಳುತ್ತಿದ್ದು, ಇದು ಸುಮಾರು ₹600 ಕೋಟಿಯಾಗಲಿದೆ. ಬಿಬಿಎಂಪಿಯಲ್ಲಿ ಸಂಗ್ರಹವಾಗುವ ತೆರಿಗೆಯಿಂದಲೇ ಈ ಹಣವನ್ನು ಪಾವತಿಸಬೇಕಾಗಿದೆ. ಈಗಾಗಲೇ ಸುಮಾರು ₹2,500 ಕೋಟಿಗೂ ಹೆಚ್ಚು ತೆರಿಗೆ ಸಂಗ್ರಹವಾಗಿದ್ದು, ಅದರಲ್ಲಿ ₹600 ಕೋಟಿಯನ್ನು ಪಾವತಿಸಿದರೆ ಗುತ್ತಿಗೆದಾರರು ಸ್ವಲ್ಪಮಟ್ಟಿಗೆ ಆರ್ಥಿಕ ಸಂಕಷ್ಟದಿಂದ ಪಾರಾಗುತ್ತಾರೆ. ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ನಮ್ಮ ಮನವಿಗೆ ಸ್ಪಂದಿಸಿದ್ದು, ಶೀಘ್ರ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ’ ಎಂದರು.

ಜಂಕ್ಷನ್‌ಗಳ ಸಮಗ್ರ ಅಭಿವೃದ್ಧಿಗೆ ಸೂಚನೆ

ಭೂಸ್ವಾಧೀನ ಪ್ರಕ್ರಿಯೆ ಶೀಘ್ರ ಪೂರ್ಣಗೊಳಿಸಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಮುಖ ಜಂಕ್ಷನ್‌ಗಳ ಸಮಗ್ರ ಅಭಿವೃದ್ಧಿಗೆ ವಿನ್ಯಾಸ ರೂಪಿಸಲು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.



ಮಹೇಶ್ವರ್ ರಾವ್

ಸೋಮವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ನಗರದಲ್ಲಿ ಈಗಾಗಲೇ ಹಲವಾರು ಜಂಕ್ಷನ್‌ಗಳ ಅಭಿವೃದ್ಧಿ ನಡೆಯುತ್ತಿದೆ. ಎಲ್ಲ ಜಂಕ್ಷನ್‌ಗಳ ಅಭಿವೃದ್ಧಿಗೂ ಸಮಗ್ರ ಯೋಜನೆ ರೂಪಿಸಿ’ ಎಂದರು.

ನಗರದಲ್ಲಿ 53 ಪ್ರವಾಹ ಪೀಡಿತ ಪ್ರದೇಶಗಳಿದ್ದು, ನಾಲ್ಕು ಕಡೆ ಸಮಸ್ಯೆ ಬಗೆಹರಿದಿದೆ. 49 ಕಡೆ ಸಮಸ್ಯೆ ಬಗೆಹರಿಸಬೇಕಿದ್ದು, ವಿಶ್ವಬ್ಯಾಂಕ್ ಅನುದಾನದಿಂದ 22 ಪ್ರದೇಶಗಳಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಎಲ್ಲಿಯೂ ಯಾವುದೇ ರೀತಿಯ ಸಮಸ್ಯೆ ಆಗದಂತೆ ತಾತ್ಕಾಲಿಕ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.

‘ಅನಧಿಕೃತ ಕಟ್ಟಡಗಳ ನಿರ್ಮಾಣ ಮಾಡುವವರ ಮೇಲೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ನಕ್ಷೆಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡುವುದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬೇಕು. ಪತ್ರ ಪಡೆದು ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆ ಬೆಸ್ಕಾಂಗೆ ಮನವಿ ಮಾಡಿ’ ಎಂದರು.

‘ರಸ್ತೆಗಳು, ಮೇಲ್ಸೇತುವೆ, ಕೆಳಸೇತುವೆ ಸೇರಿದಂತೆ ಇನ್ನಿತರೆ ಯೋಜನೆಗಳಿಗಾಗಿ ಟಿಡಿಆರ್ ನೀಡಿ ಭೂಸ್ವಾಧೀನ ಪಡಿಸಿಕೊಳ್ಳಬೇಕಿರುವ ಕುರಿತು ಆಯಾ ವಲಯಗಳಿಂದ ಕ್ರಮ ಕೈಗೊಳ್ಳಬೇಕು. ಎಲ್ಲೆಲ್ಲಿ ಭೂಸ್ವಾಧೀನದ ಅಗತ್ಯವಿದೆಯೋ ಅದನ್ನು ಪಟ್ಟಿ ಮಾಡಿಕೊಂಡು ಆಸ್ತಿ ಮಾಲೀಕರಿಗೆ ಟಿಡಿಆರ್ ನೀಡಿ, ಜಾಗವನ್ನು ಸ್ವಾಧೀನಪಡಿಸಿಕೊಂಡು ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು’ ಎಂದು ಸೂಚಿಸಿದರು.

ಗುಂಡಿ ಮುಚ್ಚಿ: ನಗರದಲ್ಲಿ ನಿರಂತರವಾಗಿ ರಸ್ತೆ ಗುಂಡಿಗಳನ್ನು ಮುಚ್ಚಬೇಕು. ರಸ್ತೆ ಗುಂಡಿ ಗಮನ ತಂತ್ರಾಂಶದಲ್ಲಿ ಬರುವ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಿ ಇತ್ಯರ್ಥಪಡಿಸಬೇಕು. ಮುಖ್ಯರಸ್ತೆ ಹಾಗೂ ಉಪ ಮುಖ್ಯರಸ್ತೆಗಳು ಗುಂಡಿ ಮುಕ್ತವಾಗಬೇಕು. ಪಾದಚಾರಿಗಳ ಒತ್ತುವರಿ ತೆರವಾಗಬೇಕು ಎಂದು ಆದೇಶಿಸಿದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಕೆ. ಹರೀಶ್ ಕುಮಾರ್, ವಲಯ ಆಯುಕ್ತರಾದ ಸತೀಶ್, ಕರೀಗೌಡ, ರಮ್ಯಾ, ರಮೇಶ್, ಸ್ನೇಹಲ್, ದಿಗ್ವಿಜಯ್ ಬೋಡ್ಕೆ ಉಪಸ್ಥಿತರಿದ್ದರು.

₹2,966 ಕೋಟಿ ತೆರಿಗೆ ಸಂಗ್ರಹ

‘2025-26ನೇ ಸಾಲಿನಲ್ಲಿ ₹6,256 ಕೋಟಿ ಆಸ್ತಿ ತೆರಿಗೆ ಸಂಗ್ರಹ ಗುರಿ ಹೊಂದಿದ್ದು, ಇದುವರೆಗೆ ₹2,966 ಕೋಟಿ ಸಂಗ್ರಹಿಸಲಾಗಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

‘ಪಾಲಿಕೆಯ 8 ವಲಯಗಳಲ್ಲಿ ಆಸ್ತಿ ತೆರಿಗೆ ಸಂಗ್ರಹಿಸಲು ಹೆಚ್ಚು ಗಮನ ನೀಡಬೇಕು. ಜೊತೆಗೆ ಹೊಸ ಇ-ಖಾತಾ ವಿತರಣೆಗೆ ಆದ್ಯತೆ ನೀಡಿ, ಮೇಲ್ವಿಚಾರಣೆ ಮಾಡಬೇಕು. ಇದರಿಂದ ಪಾಲಿಕೆಗೆ ಹೆಚ್ಚು ಆದಾಯ ಬರಲಿದೆ’ ಎಂದು ವಲಯ ಅಧಿಕಾರಿಗಳಿಗೆ ಸೂಚಿಸಿದರು.

ಕನ್ನಡ, ಸಂಸ್ಕೃತಿ ಇಲಾಖೆ ನಿರ್ದೇಶಕಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾವಿದರೊಬ್ಬರಿಗೆ ಜಾತಿ ನಿಂದನೆ ಮಾಡಿದ ಆರೋಪದ ಅಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯತ್ರಿ ವಿರುದ್ಧ ಎಸ್.ಜೆ.ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಲಾವಿದ ಜೋಗಿಲ ಸಿದ್ದರಾಜು ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಮೂರು ವರ್ಷಗಳಿಂದ ಬಾಕಿ ಇರುವ ಪ್ರಾಯೋಜಿತ ತಂಡಗಳ ಸಂಭಾವನೆ ಕೇಳುವುದಕ್ಕೆ ಜುಲೈ 11ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹೋಗಿದ್ದೆ. ಆಗ ಗಾಯತ್ರಿ ಅವರು ಜಾತಿ ನಿಂದನೆ ಮಾಡಿ ದೌರ್ಜನ್ಯ ಎಸಗಿದ್ದಾರೆ’ ಎಂದು ಸಿದ್ದರಾಜು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಮೇಜಿನ ಮೇಲಿದ್ದ ಕಂಪ್ಯೂಟರ್, ಮೌಸ್ ಪ್ಯಾಡ್ ಎಸೆದು ಹಲ್ಲೆ ನಡೆಸಿದ್ದಾರೆ. ಸಹ ಕಲಾವಿದ ಕೆ.ಎನ್.ನಾಗೇಶ್ ಅವರು ಘಟನೆಯ ವಿಡಿಯೊ ಮಾಡಿಕೊಳ್ಳುತ್ತಿದ್ದರು. ಕೋಪಗೊಂಡ ಗಾಯತ್ರಿ ಅವರು ನಾಗೇಶ್ ಮೇಲೂ ಹಲ್ಲೆ ನಡೆಸಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಪ್ರತಿಭಟನೆ...

ಪ್ರಜಾವಾಣಿ ಚಿತ್ರ:



ಪ್ರದರ್ಶನದ ಸಂಭಾವನೆ ಪಾವತಿಸಿಲ್ಲ ಎಂದು ಆರೋಪಿಸಿ ಕನ್ನಡ ಭವನದ ಎದುರು ಸೋಮವಾರ ಕಲಾವಿದರು ಪ್ರತಿಭಟನೆ ನಡೆಸಿದರು

ಸಂಚಾರ ದಟ್ಟಣೆ: ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಏರ್‌ಪೋರ್ಟ್ ಸಂಚಾರ ಪೊಲೀಸ್‌ಠಾಣಾ ವ್ಯಾಪ್ತಿಯ ದೇವರಬೀಸನಹಳ್ಳಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ತೀವ್ರಗೊಂಡಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ.

ಪ್ರಾಯೋಗಿಕವಾಗಿ ವಾಹನ ಸಂಚಾರ ಮಾರ್ಪಾಡು ಮಾಡಲಾಗಿದ್ದು, ಸೋಮವಾರದಿಂದಲೇ ಜಾರಿಗೆ ಬಂದಿದೆ.

ಸಂಚಾರ ನಿರ್ಬಂಧ: ಸಕ್ರಾ ಆಸ್ಪತ್ರೆ ಕಡೆಯಿಂದ ದೇವರಬೀಸನಹಳ್ಳಿ–ಇಕೋ ವರ್ಲ್ಡ್–ಇಂಟೆಲ್– ಇಕೊಸ್ಪೇಸ್ ಕಡೆಗೆ ನೇರ ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ದೇವರಬೀಸನಹಳ್ಳಿ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು. ಕಾಡಬೀಸನಹಳ್ಳಿ ಕಡೆಯ ಸರ್ವಿಸ್ ರಸ್ತೆಯ ಮೂಲಕ ವಾಹನಗಳು ಸಾಗಿ ಕಾಡಬೀಸನಹಳ್ಳಿಯಲ್ಲಿ ‘ಯು’ ತಿರುವು ಪಡೆದುಕೊಳ್ಳಬೇಕು. ದೇವರಬೀಸನಹಳ್ಳಿ ಕಡೆಯ ಮಧ್ಯದಲ್ಲಿರುವ ಸರ್ವಿಸ್ ರಸ್ತೆ, ಹೊರವರ್ತುಲ ರಸ್ತೆ ಮೂಲಕ ದೇವರಬೀಸನಹಳ್ಳಿ ಕಡೆಯ ಸರ್ವಿಸ್ ರಸ್ತೆಗೆ ಹೋಗಿ ಜಂಕ್ಷನ್ ಮೂಲಕ ಸಂಚರಿಸಬಹುದು.

ಬೆಳ್ಳಂದೂರು ಕಡೆಯಿಂದ ಪಾಸ್‌ಪೋರ್ಟ್ ಸರ್ವಿಸ್ ರಸ್ತೆಯ ಮೂಲಕ ಮಾರತ್‌ಹಳ್ಳಿ ಕಡೆ ಸಂಚರಿಸುವ ವಾಹನಗಳು ದೇವರಬೀಸನಹಳ್ಳಿ ಜಂಕ್ಷನ್‌ನಲ್ಲಿ, ಕಾಡಬೀಸನಹಳ್ಳಿ ಕಡೆಗೆ ಹೋಗುವ ಮಧ್ಯಭಾಗದ ಸರ್ವಿಸ್ ರಸ್ತೆಯ ಮೂಲಕ ನೇರವಾಗಿ ಮಾರತ್‌ಹಳ್ಳಿ ಕಡೆಗೆ ಸಂಚರಿಸಬಹುದು.

ಬೆಳ್ಳಂದೂರು ಕಡೆಯಿಂದ ಪಾಸ್‌ಪೋರ್ಟ್ ಸರ್ವಿಸ್ ರಸ್ತೆಯ ಮೂಲಕ ದೇವರಬೀಸನಹಳ್ಳಿ ರಸ್ತೆ ಕಡೆ ಸಂಚರಿಸುವ ವಾಹನಗಳು, ದೇವರಬೀಸನಹಳ್ಳಿ ಜಂಕ್ಷನ್ ಮೂಲಕ ಮಧ್ಯಭಾಗದ ಸರ್ವಿಸ್ ರಸ್ತೆಯಲ್ಲಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು. ಕಾಡಬೀಸನಹಳ್ಳಿ ಸರ್ವಿಸ್ ರಸ್ತೆಯ ಮೂಲಕ ಕಾಡಬೀಸನಹಳ್ಳಿ ಜಂಕ್ಷನ್‌ನಲ್ಲಿ ‘ಯು’ ತಿರುವು ಪಡೆದುಕೊಂಡು, ದೇವರಬೀಸನಹಳ್ಳಿ ಕಡೆಯ ಮಧ್ಯದಲ್ಲಿರುವ ಸರ್ವಿಸ್ ರಸ್ತೆ, ಹೊರವರ್ತುಲ ರಸ್ತೆಯ ಮೂಲಕ ದೇವರಬೀಸನಹಳ್ಳಿ ಕಡೆಯ ಸರ್ವಿಸ್ ರಸ್ತೆಗೆ ಹೋಗಿ ದೇವರಬೀಸನಹಳ್ಳಿ ಜಂಕ್ಷನ್ ಮೂಲಕ ಸಂಚರಿಸಬಹುದು.

ಇಕೋವರ್ಲ್ಡ್ (ಆರ್‌ಎಂಝಡ್) ಕಡೆಯಿಂದ ಮಾರತ್‌ಹಳ್ಳಿ ಕಡೆಗೆ ಸಂಚರಿಸುವ ವಾಹನಗಳು ದೇವರಬೀಸನಹಳ್ಳಿ ಜಂಕ್ಷನ್‌ನಲ್ಲಿ ನೇರವಾಗಿ ಚಲಿಸಿ ಪಾಸ್‌ಪೋರ್ಟ್ ಸರ್ವಿಸ್ ರಸ್ತೆಯಲ್ಲಿ ಬಲಕ್ಕೆ ತಿರುವು ಪಡೆದುಕೊಳ್ಳಬೇಕು. ಎಂದು ಸಂಚಾರ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ನ್ಯಾಕ್ಸ್ ಮೇಲೆ ಸಕ್ಕರೆ, ಎಣ್ಣೆ ಪ್ರಮಾಣ ಮುದ್ರಿಸಿ: ಸೂಚನೆ

ನವದೆಹಲಿ (ಪಿಟಿಐ): ಬೊಜ್ಜು ಹಾಗೂ ಸಾಂಕ್ರಾಮಿಕವಲ್ಲದ ರೋಗಗಳನ್ನು ನಿಯಂತ್ರಿಸಿ, ಆರೋಗ್ಯಯುತ ಜೀವನಶೈಲಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಮೋಸಾ, ಕಚೋರಿ ಹಾಗೂ ಪಿಜ್ಜಾ ಸೇರಿದಂತೆ ಎಲ್ಲ ಕುರುಕಲು ತಿಂಡಿ ಹೊಂದಿರುವ ‘ಎಣ್ಣೆ’ ಹಾಗೂ ‘ಸಕ್ಕರೆ’ ಪ್ರಮಾಣವನ್ನು ಪೊಟ್ಟಣಗಳ ಮೇಲೆ ಪ್ರದರ್ಶಿಸಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಎಲ್ಲ ಸಚಿವಾಲಯ ಹಾಗೂ ವಿಭಾಗಗಳಿಗೆ ಸೂಚನೆ ಕಳುಹಿಸಿದೆ.

ಬೊಜ್ಜು ವಿರುದ್ಧ ಹೋರಾಡುವ ನಿಟ್ಟಿನಲ್ಲಿ ಲೆಟರ್‌ಹೆಡ್, ನೋಟ್‌ಪ್ಯಾಡ್, ಫೋಲ್ಡರ್‌ಗಳಲ್ಲಿಯೂ ಆರೋಗ್ಯಕ್ಕೆ ಸಂಬಂಧಿಸಿದ ಸಂದೇಶಗಳನ್ನು ಪ್ರಕಟಿಸಬೇಕು ಎಂದು ಹೇಳಿದೆ.

ಮಹಾರಾಷ್ಟ್ರದಲ್ಲಿ ಮಾದಕ ದ್ರವ್ಯ ಸಾಗಣೆ ಆರೋಪ: ಬಂಧನ

ಕಲಬುರಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಮಹಾರಾಷ್ಟ್ರದ ಠಾಣೆ ನಗರದಲ್ಲಿ ಮಾದಕ ದ್ರವ್ಯ ಸಾಗಣೆ ಆರೋಪದಲ್ಲಿ ಬಂಧಿತನಾಗಿರುವ, ಕಲಬುರಗಿ ದಕ್ಷಿಣ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಿಂಗರಾಜ ಅಲಗೂಡ (ಕಣ್ಣಿ) ಅವರನ್ನು ಸೋಮವಾರ ಪಕ್ಷದಿಂದ ಉಚ್ಚಾಟಿಸಲಾಗಿದೆ.



ಲಿಂಗರಾಜ ಕಣ್ಣಿ

ಅಲ್ಲಿನ ಬಜಾರ್‌ಪೇಟ್ ಠಾಣೆ ಪೊಲೀಸರು ಲಿಂಗರಾಜ ಸೇರಿ ಮೂವರನ್ನು ಮಾದಕ ದ್ರವ್ಯ ಸಾಗಣೆ ಆರೋಪದಲ್ಲಿ ಈಚೆಗೆ ಬಂಧಿಸಿರುವುದು ಭಾನುವಾರ ಚರ್ಚೆಗೆ ಆಸ್ಪದವಾಗಿತ್ತು. ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ನಡೆಯುತ್ತಿದೆ.

‘ಲಿಂಗರಾಜ ಕಣ್ಣಿ ಅವರು ಮಾದಕ ದ್ರವ್ಯ ಸಾಗಣೆಯಲ್ಲಿ ಭಾಗಿಯಾಗಿರುವ ಆರೋಪ ಕೇಳಿ ಬಂದಿದೆ. ಅವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ’ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ ಆಗಿರುವ ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಬಿಐ ತನಿಖೆಗೆ ಒಪ್ಪಿಸಿ: ‘ಲಿಂಗರಾಜ ಅವರು ಮಾದಕ ದ್ರವ್ಯಸಾಗಣೆ ಮಾಡಿ ಸಿಕ್ಕಿ ಬಿದ್ದಿರುವ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಲು ಕೋರಿ ಅಲ್ಲಿನ ಸಿ.ಎಂ, ಡಿಸಿಎಂಗೂ ಮನವಿ ಸಲ್ಲಿಸುತ್ತೇನೆ’ ಎಂದು ಆಂದೋಲಾ ಸಿದ್ದಲಿಂಗ ಸ್ವಾಮೀಜಿ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಲಿಂಗರಾಜ ಅವರು ಎಐಸಿಸಿ ಅಧ್ಯಕ್ಷ, ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕರೊಂದಿಗೆ ಗುರುತಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

‘ಕಾಫ್ ಸಿರಪ್ ಹೆಸರಲ್ಲಿ ಬಿಜೆಪಿ ಕೆಮ್ಮುತ್ತಿದೆ’

‘₹27 ಸಾವಿರ ಮೌಲ್ಯದ ಕಾಫ್ ಸಿರಪ್ ವಿಷಯದಲ್ಲಿ ಈಗ ಕೆಮ್ಮುತ್ತಿರುವ ಬಿಜೆಪಿಯವರು, ಅದಕ್ಕಿಂತ ಗಂಭೀರ ಪ್ರಕರಣ ಗಳಿರುವ ತಮ್ಮ ಪಕ್ಷದವರ ಬಗ್ಗೆ ಕ್ರಮ ಕೈಗೊಳ್ಳುವ ನೈತಿಕತೆಯನ್ನು ಯಾವಾಗ ತೋರುತ್ತಾರೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ‘ಎಕ್ಸ್’ನಲ್ಲಿ ಪ್ರಶ್ನಿಸಿದ್ದಾರೆ.



ಪ್ರಿಯಾಂಕ್ ಖರ್ಗೆ

‘ಈ ಪ್ರಕರಣದಲ್ಲಿ ನಿಷ್ಪಕ್ಷಪಾತವಾಗಿ ತನಿಖೆ ನಡೆಸಲು ಪೊಲೀಸರು ಸ್ವತಂತ್ರರಿದ್ದಾರೆ. ಪ್ರಕರಣ ದಾಖಲಾಗುತ್ತಿದ್ದಂತೆಯೇ ಕಾಂಗ್ರೆಸ್ ಪಕ್ಷದಿಂದ ಅವರನ್ನು ಉಚ್ಚಾಟಿಸಲಾಗಿದೆ. ಕಾಂಗ್ರೆಸ್ ಪಕ್ಷವಾಗಲಿ, ಸರ್ಕಾರವಾಗಲಿ ಇದನ್ನು ಸಮರ್ಥಿಸುವುದಿಲ್ಲ’ ಎಂದು ಪ್ರತಿಕ್ರಿಯಿಸಿದ್ದಾರೆ.

‘ಪೋಕ್ಸೊ ಪ್ರಕರಣದ ಆರೋಪಿಯನ್ನು, ಪುತ್ತೂರಿನಲ್ಲಿ ಯುವತಿಯೊಬ್ಬರಿಗೆ ವಂಚನೆ ಮಾಡಿದವರನ್ನು, ಮಹಿಳೆಯರ ಮೇಲೆ ಅತ್ಯಾಚಾರವೆಸಗಿದ ಶಾಸಕರನ್ನು ಯಾವಾಗ ಉಚ್ಚಾಟಿಸಲಾಗುತ್ತದೆ’ ಎಂದು ಬಿಜೆಪಿಯನ್ನು ಪ್ರಶ್ನಿಸಿದ್ದಾರೆ.

ಮಂಗಳವಾರ, ಜುಲೈ 15, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 195 | ಪುಟ 14

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರೈಲು ಬೋಗಿಗೆ ಬೆಂಕಿ

ತಿರುಪತಿಯ ರೈಲು ನಿಲ್ದಾಣದಲ್ಲಿ ರೈಲಿನ ಬೋಗಿಯೊಂದರಲ್ಲಿ ಸೋಮವಾರ ಬೆಂಕಿ ಕಾಣಿಸಿಕೊಂಡಿದ್ದು, ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದರು. ಯಾವುದೇ ಜೀವಹಾನಿಯಾಗಿಲ್ಲ.



ಸಿಂಧು ಕಣಕ್ಕೆ

ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಅವರು ಮಂಗಳವಾರ ಆರಂಭವಾಗಲಿರುವ ಜಪಾನ್ ಓಪನ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ



ಸೆನ್ಸೆಕ್ಸ್ 82,253 | ನಿಫ್ಟಿ 25,082 | $/₹ 85.92 | ಚಿನ್ನ (Std. 10g) ₹1,03,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,21,100 (ಬೆಂಗಳೂರು)

ಬಡ್ತಿ: ಸಿ.ಎಂ.ಗೆ ಖರ್ಗೆ ಪತ್ರ

ಒಂಬತ್ತು ಇಲಾಖೆಗಳಲ್ಲಿ ಎಸ್‌ಸಿ, ಎಸ್‌ಟಿ ಸಿಬ್ಬಂದಿಗೆ ಮುಂಬಡ್ತಿಯಲ್ಲಿ ವಂಚನೆ: ನೌಕರರ ಸಂಘದಿಂದ ದೂರು

• ರಾಜೇಶ್ ರೈ ಚಟ್ಲ

ಕೆಲವು ಇಲಾಖೆಗಳ ಹಿರಿಯ ಅಧಿಕಾರಿಗಳು ಮೀಸಲಾತಿ ರೋಸ್ಟರ್ ನಿಯಮ ಉಲ್ಲಂಘಿಸಿದ್ದರಿಂದ ಎಸ್‌ಸಿ, ಎಸ್‌ಟಿ ವರ್ಗದ ನೌಕರರು ಮುಂಬಡ್ತಿಯಿಂದ ವಂಚಿತ ರಾಗಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತರಲಾಗಿದೆ

ಡಿ.ಚಂದ್ರಶೇಖರಯ್ಯ, ಅಧ್ಯಕ್ಷರು, ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ

ಬೆಂಗಳೂರು: 'ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡಗಳ (ಎಸ್‌ಟಿ) ಅಧಿಕಾರಿ, ನೌಕರರಿಗೆ ಮುಂಬಡ್ತಿ ನೀಡುವ ವಿಷಯದಲ್ಲಿ ಸರ್ಕಾರ ಹೊರಡಿಸಿರುವ ಆದೇಶ ಹಾಗೂ ಸುತ್ತೋಲೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಕ್ರಮ ಕೈಗೊಳ್ಳಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿಗೆ ಪತ್ರ ಬರೆದಿರುವ ಖರ್ಗೆ ಅವರು, 'ಮುಂಬಡ್ತಿ ನೀಡುವಾಗ ಎಸ್‌ಸಿ, ಎಸ್‌ಟಿ ನೌಕರರಿಗೆ ಅನ್ಯಾಯವಾಗುತ್ತಿದೆ. ಈ ವಿಚಾರದಲ್ಲಿ ಸರ್ಕಾರ ಹೊರಡಿಸುವ ಆದೇಶಗಳನ್ನು ಪಾಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡದೇ ಇದ್ದರೆ, ಎಸ್‌ಸಿ ಮತ್ತು ಎಸ್‌ಟಿ ವರ್ಗದ ಅಧಿಕಾರಿಗಳ ಮಟ್ಟದಲ್ಲಿ ಅಸಮಾಧಾನ ಉಂಟಾಗಿ ಸರ್ಕಾರದ ಕೆಲಸಗಳು ಸುಲಲಿತವಾಗಿ ನಡೆಯಲು ಕಷ್ಟ ಆಗಲಿದೆ. ಈ ವಿಚಾರದಲ್ಲಿ ತಕ್ಷಣ ಗಮನಹರಿಸಿ ಬಂದಿರುವ ತೊಡಕುಗಳನ್ನು ನಿವಾರಣೆ ಮಾಡಬೇಕು' ಎಂದು ತಿಳಿಸಿದ್ದಾರೆ.

ವಿವಿಧ ಒಂಬತ್ತು ಇಲಾಖೆಗಳಲ್ಲಿ ಮೀಸಲಾತಿ ರೋಸ್ಟರ್ ಬಿಂದುಗಳನ್ನು (ವಿವಿಧ ಮೀಸಲು ವರ್ಗದ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಬಿಂದು) ಪಾಲಿಸದೆ ವಂಚಿಸಲಾಗಿದೆ ಎಂದು ದಾಖಲೆಗಳ ಸಹಿತ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘವು ಖರ್ಗೆ ಅವರ ಗಮನಕ್ಕೆ ತಂದಿತ್ತು. ಅಲ್ಲದೆ, ಮುಖ್ಯಮಂತ್ರಿಗೆ ಅದಾಗಲೇ ಬರೆದಿದ್ದ ಪತ್ರದ ಪ್ರತಿಯನ್ನೂ ನೀಡಿತ್ತು. ಅದಕ್ಕೆ ತಕ್ಷಣ ಸ್ಪಂದಿಸಿ ಮುಖ್ಯಮಂತ್ರಿಗೆ ಪತ್ರ ಬರೆದಿರುವ ಖರ್ಗೆ ಅವರು ಕೆಲವು ಸಲಹೆ ನೀಡಿದ್ದಾರೆ.

'ಪವಿತ್ರ- 1' ಪ್ರಕರಣದಲ್ಲಿ 'ಬಡ್ತಿ ಮೀಸಲು ಕಾಯ್ದೆ -2002' ಅನ್ನು ರದ್ದುಪಡಿಸಿ ಸುಪ್ರೀಂ ಕೋರ್ಟ್ 2017ರಲ್ಲಿ ನೀಡಿದ್ದ ತೀರ್ಪು ಜಾರಿಯಿಂದ ಜ್ಯೇಷ್ಠತೆ ಬದಲಾವಣೆ ಆಗಿತ್ತು. ಪರಿಣಾಮ, ಎಸ್‌ಸಿ, ಎಸ್‌ಟಿ ವರ್ಗದ 3,798 ಅಧಿಕಾರಿ, ನೌಕರರು ಹಿಂಬಡ್ತಿಗೆ ಒಳಗಾಗಿದ್ದರು. 65 ಸಾವಿರಕ್ಕೂ ಹೆಚ್ಚು ನೌಕರರ ಜ್ಯೇಷ್ಠತೆಯ ಮೇಲೆ ಪರಿಣಾಮ ಉಂಟಾಗಿತ್ತು. ಹೀಗೆ ಹಿಂಬಡ್ತಿಗೆ ಒಳಗಾಗಿದ್ದ ನೌಕರರ ಹಿತರಕ್ಷಣೆಗೆ ರಾಜ್ಯ ಸರ್ಕಾರ 'ತತ್ಪರಿಣಾಮದ ಜ್ಯೇಷ್ಠತೆ ವಿಸ್ತರಿಸುವ ಕಾಯ್ದೆ-2017' ಅನ್ನು ರೂಪಿಸಿತ್ತು. ಈ ಕಾಯ್ದೆಯನ್ನು 'ಪವಿತ್ರ- 2' ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸಿಂಧುಗೊಳಿಸಿದ್ದರಿಂದ ಹಿಂಬಡ್ತಿಗೆ ಒಳಗಾಗಿದ್ದ ನೌಕರರನ್ನು ಹಿಂಬಡ್ತಿಗೆ ಪೂರ್ವದಲ್ಲಿದ್ದ ಹುದ್ದೆಗೆ ಮರು ನಿಯುಕ್ತಿಗೊಳಿಸಲಾಗಿತ್ತು.

▶7

'80 ಉಪನ್ಯಾಸಕರಿಗೆ ಸಿಗದ ಪ್ರಾಂಶುಪಾಲ ಹುದ್ದೆ'


'ಪದವಿಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ಎಸ್‌ಸಿ 67 ಮತ್ತು ಎಸ್‌ಟಿ ವರ್ಗದ 13 ಸೇರಿ ಒಟ್ಟು 80 ಬ್ಯಾಕ್‌ಲಾಗ್ ಅಭ್ಯರ್ಥಿಗಳಿಗೆ ಮುಂಬಡ್ತಿ ನೀಡುವ ಕುರಿತು ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ವರದಿ ಸಲ್ಲಿಸಿದ್ದರು. ಬ್ಯಾಕ್‌ಲಾಗ್ ಅಭ್ಯರ್ಥಿಗಳಿಗೆ ಆದ್ಯತೆಯ ಮೇಲೆ ಮುಂಬಡ್ತಿ ನೀಡುವಂತೆಯೂ ಸೂಚನೆ ನೀಡಿದ್ದರು.

ಅಲ್ಲದೆ, ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿ, ರೋಸ್ಟರ್ ನಿರ್ವಹಿಸುವವರೆಗೆ ಸಾಮಾನ್ಯ ಮುಂಬಡ್ತಿ ಪ್ರಕ್ರಿಯೆ ಕೈಗೊಳ್ಳಬಾರದು ಎಂದು ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಸ್ಪಷ್ಟ ಸೂಚನೆ ನೀಡಿತ್ತು.

▶7

ನಟಿ ಬಿ.ಸರೋಜಾದೇವಿ ನಿಧನ

ಪ್ರಜಾವಾಣಿ ವಾರ್ತೆ



7-1-1938 14-7-2025

ಬೆಂಗಳೂರು: ಚತುರ್ಭಾಷಾ ತಾರೆ, 'ಅಭಿನಯ ಸರಸ್ವತಿ' ಬಿ.ಸರೋಜಾದೇವಿ (87) ಸೋಮವಾರ (ಜುಲೈ 14) ಬೆಳಿಗ್ಗೆ ನಿಧನರಾದರು.

'ಮಂಗಳವಾರ (ಜುಲೈ 15) ಮಧ್ಯಾಹ್ನದ ಮೇಲೆ ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ದಶವಾರ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ಮಂಗಳವಾರ ಬೆಳಿಗ್ಗೆ 11.30ರವರೆಗೂ ಮಲ್ಲೇಶ್ವರದ ನಿವಾಸದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶವಿದೆ' ಎಂದು ಸರೋಜಾದೇವಿಯವರ ಪುತ್ರ ಗೌತಮ್ ತಿಳಿಸಿದ್ದಾರೆ.

ಬಿ.ಸರೋಜಾದೇವಿ ಜನಿಸಿದ್ದು ಬೆಂಗಳೂರಿನಲ್ಲಿ. ಚಾಮರಾಜಪೇಟೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ ಇವರು 1953ರಲ್ಲಿ 'ಶ್ರೀರಾಮ ಪೂಜಾ' ಚಿತ್ರದಲ್ಲಿ ಪುಟ್ಟ ಪಾತ್ರವೊಂದರ ಮೂಲಕ ಚಿತ್ರರಂಗ ಪ್ರವೇಶಿಸಿದರು. ಹೊನ್ನಪ್ಪ ಭಾಗವತರ್ ಅವರ 'ಮಹಾಕವಿ ಕಾಳಿದಾಸ' ಚಿತ್ರಕ್ಕೆ 12ನೇ ವಯಸ್ಸಿನಲ್ಲಿ ನಾಯಕಿಯಾಗಿ ಮೊದಲ ಹೆಜ್ಜೆ ಇಟ್ಟರು. ಸುಮಾರು 200 ಚಿತ್ರಗಳಲ್ಲಿ ನಟಿಸಿದ್ದಾರೆ. ನಾಲ್ಕು ಭಾಷಾ ಚಿತ್ರರಂಗದಲ್ಲಿ ಇವರು ಛಾಪು ಮೂಡಿಸಿದ್ದಾರೆ.

1961ರಲ್ಲಿ ತೆರೆಕಂಡ 'ಕಿತ್ತೂರು ಚೆನ್ನಮ್ಮ' ಚಿತ್ರದಲ್ಲಿನ ಅವರ ಪಾತ್ರ ಇಂದಿಗೂ ಜನಮಾನಸದಲ್ಲಿದೆ. ಕನ್ನಡದ ಮೊದಲ ವರ್ಣಮಯ ಚಿತ್ರ 'ಅಮರಶಿಲ್ಪಿ ಜಕಣಾಚಾರಿ' ಚಿತ್ರದಲ್ಲೂ ಇವರೇ ನಾಯಕಿಯಾಗಿದ್ದರು. 'ಭಾಗ್ಯವಂತರು', 'ಬಬ್ರುವಾಹನ', 'ಅಣ್ಣತಂಗಿ', 'ಮಲ್ಲಮ್ಮನ ಪವಾಡ', 'ಕಥಾಸಂಗಮ' ಹೀಗೆ ಹಲವಾರು ಕನ್ನಡ ಚಿತ್ರಗಳನ್ನು ಸರೋಜಾದೇವಿ ಮಾಡಿದ್ದಾರೆ. ತಮಿಳು ಚಿತ್ರರಂಗದಲ್ಲಿ ಇವರ ಸಾಧನೆ ಇನ್ನೂ ಹಿರಿದಾಗಿದೆ. ಈ ರಂಗ ಇವರನ್ನು 'ಕನ್ನಡದ ಗಿಣಿ' ಎಂದೇ ಕರೆಯುತ್ತದೆ. ನಟ ಸೂರ್ಯ ನಟನೆಯ ತಮಿಳು ಸಿನಿಮಾವೊಂದರ ಹಾಡಿನಲ್ಲಿ ಇವರನ್ನು 'ಕನ್ನಡದ ಬ್ಯೂಟಿ' ಎಂದೇ ಹೊಗಳಲಾಗಿದೆ. ತಮಿಳು ಚಿತ್ರರಂಗದಲ್ಲಿ ನಟ ಎಂಜಿಆರ್ ಜೊತೆ ಜೋಡಿಯಾಗಿ 26 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ನಟ ಶಿವಾಜಿ ಗಣೇಶನ್ ಅವರೊಂದಿಗೆ 22 ಚಿತ್ರಗಳಲ್ಲಿ ನಟಿಸಿರುವ ಇವರು ಹಿಂದಿಯಲ್ಲಿ ದಿಲೀಪ್ ಕುಮಾರ್, ರಾಜೇಂದ್ರ ಕುಮಾರ್, ಶಮ್ಮಿ ಕಪೂರ್, ಸುನಿಲ್‌ದತ್ ಅವರ ಜೊತೆಗೂ ನಾಯಕಿಯಾಗಿ ನಟಿಸಿದ್ದಾರೆ.

ಸುಮಾರು ಏಳು ದಶಕ ಚಿತ್ರರಂಗದಲ್ಲಿದ್ದುಕೊಂಡು ಪದ್ಮಭೂಷಣ ಪುರಸ್ಕಾರ ಪಡೆದ ಇವರು ಮೂರು ದಶಕಗಳಲ್ಲಿ ಸತತವಾಗಿ ನೂರೈವತ್ತಕ್ಕೂ ಅಧಿಕ ಸಿನಿಮಾಗಳಲ್ಲಿ ನಾಯಕಿಯಾಗಿ ನಟಿಸಿದ್ದು ದಾಖಲೆ.

ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಚಿತ್ರರಂಗದ ಗಣ್ಯರು ನಿವಾಸಕ್ಕೆ ಭೇಟಿ ನೀಡಿ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.

ಇನ್ನಷ್ಟು ಸುದ್ದಿಗಳು ▶7 9

ಚುಟುಕು ಸುದ್ದಿ

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ವಿಭು ಬಖ್ರು

ನವದೆಹಲಿ: ಕರ್ನಾಟಕ, ಮಧ್ಯಪ್ರದೇಶ, ಜಾರ್ಖಂಡ್, ಗುವಾಹಟಿ ಮತ್ತು ಪಟ್ನಾ ಹೈಕೋರ್ಟ್‌ಗಳಿಗೆ ನೂತನ ಮುಖ್ಯ ನ್ಯಾಯಮೂರ್ತಿಗಳ (ಸಿಜೆ) ನೇಮಕಕ್ಕೆ ಕೇಂದ್ರ ಸರ್ಕಾರ ಸೋಮವಾರ ಅನುಮೋದನೆ ನೀಡಿದೆ.



ವಿಭು ಬಖ್ರು

ವಿಭು ಬಖ್ರು ಅವರು ಈ ಹಿಂದೆ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದರು. ಐವರು ಮುಖ್ಯ ನ್ಯಾಯಮೂರ್ತಿಗಳ ನೇಮಕಕ್ಕೆ ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಕೊಲಿಜಿಯಂ ಶಿಫಾರಸು ಮಾಡಿತ್ತು.

ಮುಖ್ಯ ನ್ಯಾಯಮೂರ್ತಿಗಳು

ಕರ್ನಾಟಕ	ವಿಭು ಬಖ್ರು
ಮಧ್ಯಪ್ರದೇಶ	ಸಂಜೀವ್ ಸಚ್‌ದೇವ
ಜಾರ್ಖಂಡ್	ತರ್ಲೋಕ್ ಸಿಂಗ್ ಚೌಹಾಣ್
ಗುವಾಹಟಿ	ಅಶುತೋಷ್ ಕುಮಾರ್
ಪಟ್ನಾ	ವಿಪುಲ್ ಮನುಭಾಯಿ ಪಂಚೋಲಿ

ಐಎಫ್‌ಎಸ್ ಅಧಿಕಾರಿ ಅಮಾನತು

ಚಾಮರಾಜನಗರ: ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಈಚೆಗೆ ನಡೆದಿದ್ದ ಐದು ಹುಲಿಗಳ ಅಸಹಜ ಸಾವಿನ ಪ್ರಕರಣದಲ್ಲಿ ಐಎಫ್‌ಎಸ್ ಅಧಿಕಾರಿ, ಎಂ.ಎಂ.ಹಿಲ್ಸ್ ವನ್ಯಜೀವಿ ವಿಭಾಗದ ಡಿಸಿಎಫ್ ವೈ.ಚಕ್ರಪಾಣಿ ಅವರನ್ನು ಸರ್ಕಾರ ಸೋಮವಾರ ಅಮಾನತುಗೊಳಿಸಿದೆ.



ವೈ.ಚಕ್ರಪಾಣಿ

'ಕರ್ತವ್ಯ ಲೋಪ ಎಸಗಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ತಿಳಿಸಲಾಗಿದೆ.

▶7

ಶುಕ್ಲಾ ಮರುಪ್ರಯಾಣ ಆರಂಭ

ಐಎಸ್‌ಎಸ್‌ನಿಂದ ಬೇರ್ಪಟ್ಟ 'ಡ್ರ್ಯಾಗನ್' ಬಾಹ್ಯಾಕಾಶ ಕೋಶ

ನವದೆಹಲಿ (ಪಿಟಿಐ): ಭಾರತದ ಗಗನಯಾತ್ರಿ ಶುಭಾಂಶು ಶುಕ್ಲಾ ಮತ್ತು 'ಆ್ಯಕ್ಸಿಯಂ-4' ಕಾರ್ಯಕ್ರಮದ ಭಾಗವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ತೆರಳಿದ್ದ ಇತರ ಮೂವರು ಭೂಮಿಯತ್ತ ಸೋಮವಾರ ಪ್ರಯಾಣ ಆರಂಭಿಸಿದರು.

ನಾಲ್ವರನ್ನು ಹೊತ್ತ 'ಡ್ರ್ಯಾಗನ್' ಬಾಹ್ಯಾಕಾಶ ಕೋಶ ಸೋಮವಾರ ಸಂಜೆ 4.45ಕ್ಕೆ (ಭಾರತೀಯ ಕಾಲಮಾನ) ಐಎಸ್‌ಎಸ್‌ನಿಂದ ಯಶಸ್ವಿಯಾಗಿ ಬೇರ್ಪಟ್ಟು (ಅನ್‌ಡಾಕ್) ಭೂಮಿಯತ್ತ ಪಯಣ ಬೆಳೆಸಿದೆ. ನಿಗದಿಪಡಿಸಿದ್ದ ಸಮಯಕ್ಕಿಂತ 10 ನಿಮಿಷ ತಡವಾಗಿ ಬೇರ್ಪಡುವಿಕೆ ಪ್ರಕ್ರಿಯೆ ನಡೆದಿದೆ.

ಐಎಸ್‌ಎಸ್‌ನಿಂದ ಬೇರ್ಪಟ್ಟಿರುವ 'ಡ್ರ್ಯಾಗನ್' ಬಾಹ್ಯಾಕಾಶ ಕೋಶ 22 ಗಂಟೆಗಳ ಪ್ರಯಾಣದ ಬಳಿಕ, ಮಂಗಳವಾರ ಮಧ್ಯಾಹ್ನ 3.01ಕ್ಕೆ ಕ್ಯಾಲಿಫೋರ್ನಿಯಾದ ಕರಾವಳಿಯಲ್ಲಿ ಇಳಿಯಲಿದೆ.

'ಆ್ಯಕ್ಸಿಯಂ-4' ಕಾರ್ಯಕ್ರಮದ ಭಾಗವಾಗಿ ಶುಕ್ಲಾ, ಕಮಾಂಡರ್ ಪೆಗ್ಗಿ ವಿಟ್ಸನ್, ಹಂಗರಿಯ ಟಿಬೋರ್‌ಕಾಪು ಹಾಗೂ ಪೋಲೆಂಡ್‌ನ ಸ್ಲಾವೋಸ್ ಯು.ವಿಸ್ನಿವ್ಸ್ಕಿ ಅವರು ಜೂನ್ 26ರಂದು ಐಎಸ್‌ಎಸ್‌ಗೆ ತೆರಳಿದ್ದರು.

▶7



ಭೂಮಿಯತ್ತ ಪ್ರಯಾಣ ಆರಂಭಿಸುವ ಮುನ್ನ ಶುಭಾಂಶು ಶುಕ್ಲಾ ಹಾಗೂ ಇತರ ಗಗನಯಾತ್ರಿಗಳು ಫೋಟೊಕ್ಕೆ ಪೋಸ್ ನೀಡಿದರು —ಪಿಟಿಐ ಚಿತ್ರ

ಶುಭಾಂಶು... ನಿಮಗೆ ಸ್ವಾಗತ... ನೀವು ಭೂಮಿಗೆ ಮರಳುವುದನ್ನು ಇಡೀ ದೇಶ ಕುತೂಹಲದಿಂದ ಎದುರು ನೋಡುತ್ತಿದೆ

ಜಿತೇಂದ್ರ ಸಿಂಗ್, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ

ಅಂಕಿ ಅಂಶಗಳು

433 ಗಂಟೆ
ಶುಕ್ಲಾ ಐಎಸ್‌ಎಸ್‌ನಲ್ಲಿ ಕಳೆದ ಅವಧಿ

288
'ಆ್ಯಕ್ಸಿಯಂ-4' ಗಗನಯಾತ್ರಿಗಳು ಇದ್ದಾಗ ಐಎಸ್‌ಎಸ್ ಭೂಮಿಗೆ ಹಾಕಿರುವ ಸುತ್ತು

76 ಲಕ್ಷ ಕಿ.ಮೀ
ಐಎಸ್‌ಎಸ್‌ನಲ್ಲಿ ಕ್ರಮಿಸಿದ ದೂರ

ಸಾಂಕೇತಿಕವಾಗಿ ಟಿಕೆಟ್ ವಿತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

500 ಕೋಟಿ ಪ್ರಯಾಣ ಕಂಡ 'ಶಕ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿರುವ ಶಕ್ತಿ ಯೋಜನೆಯಡಿ 500 ಕೋಟಿ ಬಾರಿ ಮಹಿಳೆಯರು ಪ್ರಯಾಣಿಸಿದ ಸಂಭ್ರಮದ ಅಂಗವಾಗಿ 500ನೇ ಕೋಟಿ ಉಚಿತ ಟಿಕೆಟ್ ಪಡೆದ ಮಹಿಳೆ ಲತಾ ವಿ.ಎನ್. ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟಿಕೆಟ್ ವಿತರಿಸಿ, ಮರದ ಆನೆ ನೀಡಿ, ಹಾರ ಹಾಕಿ ಸನ್ಮಾನಿಸಿದರು.

'ಶಕ್ತಿ ಯೋಜನೆಯ ಮೈಲುಗಲ್ಲಿನ ಟಿಕೆಟ್ ಪಡೆದವಳು ನಾನು ಎಂಬುದು ಹೆಮ್ಮೆ ಉಂಟು ಮಾಡಿದೆ. ಮುಖ್ಯಮಂತ್ರಿಯವರೇ ಬಂದು ಸನ್ಮಾನಿಸಿದ್ದನ್ನು ಯಾವತ್ತೂ ಮರೆಯಲು ಸಾಧ್ಯವಿಲ್ಲ' ಎಂದು ಲತಾ ಪ್ರತಿಕ್ರಿಯಿಸಿದರು.

ವಿಜಯಪುರದ ಒಡಲ ಧ್ವನಿ ಸ್ತ್ರೀಶಕ್ತಿ ಸಂಘದ ಸದಸ್ಯರು ರೊಟ್ಟಿ, ಹೋಳಿಗೆ ತಯಾರಿಸಿ ಬಸ್‌ಗಳಲ್ಲಿ ಉಚಿತವಾಗಿ ಬೆಂಗಳೂರಿಗೆ ಬಂದು ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದು, ಅವರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಾರಿಗೆ ಸಚಿವರಿಗೆ ಖಡಕ್ ರೊಟ್ಟಿ, ಶೇಂಗಾ ಸಿಹಿ ಹೋಳಿಗೆ ನೀಡಿ ಕೃತಜ್ಞತೆ ಸಲ್ಲಿಸಿದರು.

ಬಸ್‌ನಲ್ಲಿದ್ದ ಎಲ್ಲ ಮಹಿಳೆಯರಿಗೆ ಇಳಕಲ್ ಸೀರೆ, ವಿತರಿಸಲಾಯಿತು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಗ್ಯಾರಂಟಿ ಯೋಜನೆಗಳ ರಾಜ್ಯ ಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ, ರಾಜ್ಯ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಸೌಮ್ಯಾ ರೆಡ್ಡಿ, ಸಾರಿಗೆ ಇಲಾಖೆ ಮತ್ತು ನಿಗಮಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, '2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಲಾಗಿತ್ತು. ಅದರಂತೆ ಶಕ್ತಿ ಯೋಜನೆಗೆ ಆ ವರ್ಷ ಜೂನ್ 11ಕ್ಕೆ ಚಾಲನೆ ನೀಡಲಾಗಿತ್ತು. ಇಲ್ಲಿವರೆಗೆ ಈ ಯೋಜನೆಯಡಿ ಈವರೆಗೆ 500 ಕೋಟಿ ಉಚಿತ ಟಿಕೆಟ್‌ಗಳನ್ನು ಪ್ರಯಾಣಿಕರು ಪಡೆದಿದ್ದಾರೆ' ಎಂದು ತಿಳಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಶಕ್ತಿ ಯೋಜನೆ ದೇಶಕ್ಕೇ ಮಾದರಿಯಾಗಿದೆ. ಎಲ್ಲಿಯವರೆಗೆ ದೇವರು ಶಕ್ತಿ ಹಾಗೂ ಜನ ಅಧಿಕಾರ ನೀಡುತ್ತಾರೋ ಅಲ್ಲಿಯ ತನಕ ಗ್ಯಾರಂಟಿ ಯೋಜನೆಗಳು ಮುಂದುವರಿಯುತ್ತವೆ. ಯಾವುದೇ ಕಾರಣಕ್ಕೂ ಯೋಜನೆಗಳನ್ನು ನಿಲ್ಲಿಸುವುದಿಲ್ಲ' ಎಂದರು.

▶10



ಶಕ್ತಿ ಯೋಜನೆಯಡಿ ಪ್ರಯಾಣಿಸಿದವರ ಸಂಖ್ಯೆ 500 ಕೋಟಿಗೆ ತಲುಪಿದ್ದರಿಂದ ಮೈಲುಗಲ್ಲಿನ ಪ್ರಯಾಣಿಕರಾಗಿರುವ ಲತಾ ವಿ.ಎನ್ ಅವರಿಗೆ ಸಿದ್ದರಾಮಯ್ಯ ಟಿಕೆಟ್ ವಿತರಿಸಿ, ಮರದ ಆನೆ ನೀಡಿ, ಹಾರ ಹಾಕಿ ಸನ್ಮಾನಿಸಿದರು. ಡಿ.ಕೆ.ಶಿವಕುಮಾರ್, ರಾಮಲಿಂಗಾರೆಡ್ಡಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ: ರಂಜು ಪಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸ್ವಯಂ ನಿಯಂತ್ರಣ ಪಾಲಿಸುವಂತೆ ಸುಪ್ರೀಂ ಕೋರ್ಟ್ ಸಲಹೆ

'ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯ ಅರಿತುಕೊಳ್ಳಿ'

ನವದೆಹಲಿ (ಪಿಟಿಐ): 'ನಾಗರಿಕರು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯಗಳನ್ನು ತಿಳಿದುಕೊಳ್ಳ-ಬೇಕು ಹಾಗೂ ಸ್ವಯಂ ನಿಯಂತ್ರಣ ಪಾಲಿಸಬೇಕು' ಎಂದಿರುವ ಸುಪ್ರೀಂ ಕೋರ್ಟ್, ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ನಿಯಂತ್ರಿಸಲು ಮಾರ್ಗಸೂಚಿ ರೂಪಿಸುವುದನ್ನು ಪರಿಗಣಿಸುವುದಾಗಿ ಸೋಮವಾರ ಹೇಳಿದೆ.



ಹಿಂದೂ ದೇವತೆಯ ವಿರುದ್ಧ 'ಎಕ್ಸ್'ನಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಂಚಿಕೊಂಡಿರುವುದಕ್ಕೆ ಪಶ್ಚಿಮ ಬಂಗಾಳ ಸೇರಿದಂತೆ ಹಲವು ರಾಜ್ಯಗಳಲ್ಲಿ ಪ್ರಕರಣ ಎದುರಿಸುತ್ತಿರುವ ವಜಾಹತ್ ಖಾನ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ಪೀಠ ನಡೆಸುತ್ತಿದೆ.

'ನಾಗರಿಕರು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯವನ್ನು ತಿಳಿದಿರಬೇಕು. ಇದು ಉಲ್ಲಂಘನೆಯಾದ ಸಂದರ್ಭದಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬಹುದು. ಸರ್ಕಾರ ಮಧ್ಯ-ಪ್ರವೇಶಿಸಲು ಯಾರೂ ಬಯಸುವುದಿಲ್ಲ' ಎಂದು ನ್ಯಾಯಮೂರ್ತಿ ನಾಗರತ್ನ ಹೇಳಿದರು.

▶11

'ವಾಕ್ ಸ್ವಾತಂತ್ರ್ಯದ ದುರುಪಯೋಗ'

ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು 'ದುರುಪಯೋಗ' ಮಾಡಲಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರ ಆಕ್ಷೇಪಾರ್ಹ ವ್ಯಂಗ್ಯಚಿತ್ರಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಆರೋಪ ಎದುರಿಸುತ್ತಿರುವ ವ್ಯಂಗ್ಯಚಿತ್ರಕಾರ ಸಲ್ಲಿಸಿದ ಅರ್ಜಿಯ ವಿಚಾರಣೆ ವೇಳೆ ಹೀಗೆ ಅಭಿಪ್ರಾಯಪಟ್ಟಿದೆ.

▶11

ಬಹಿರಂಗ ಚರ್ಚೆಗೆ ಬನ್ನಿ: ಬಿಜೆಪಿಗೆ ಪಂಥಾಹ್ವಾನ

ಪ್ರಜಾವಾಣಿ ವಾರ್ತೆ

ವಿಜಯಪುರ: 'ನಮ್ಮದು ಅಭಿವೃದ್ಧಿ ಪರ ಸರ್ಕಾರ. ನಮ್ಮ ಸರ್ಕಾರದ ಎರಡು ವರ್ಷಗಳ ಸಾಧನೆ ಮತ್ತು ಹಿಂದಿನ ಬಿಜೆಪಿ ಸರ್ಕಾರದ ನಾಲ್ಕು ವರ್ಷಗಳ ಸಾಧನೆ ಕುರಿತು ಸಾರ್ವಜನಿಕ ವಾಗಿ ದಾಖಲೆ ಸಹಿತ ಚರ್ಚಿಸೋಣ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಜೆಪಿಗೆ ಪಂಥಾಹ್ವಾನ ನೀಡಿದರು.

ಇಂಡಿ ಪಟ್ಟಣದಲ್ಲಿ ಸೋಮವಾರ ನಡೆದ ಕಾರ್ಯ ಕ್ರಮದಲ್ಲಿ ಮಾತನಾಡಿದ ಅವರು, 'ಪಟ್ಟಣದಲ್ಲಿ ₹4,557 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಲೋಕಾರ್ಪಣೆ ಮಾಡಿರುವುದನ್ನು ವಿರೋಧ ಪಕ್ಷದವರು ಬಂದು ನೋಡಲಿ' ಎಂದರು.

▶10

ಗ್ಯಾರಂಟಿ ಯೋಜನೆಗಳಿಗೆ ಪ್ರತಿ ವರ್ಷ ₹55 ಸಾವಿರ ಕೋಟಿ ಮತ್ತು ₹83 ಸಾವಿರ ಕೋಟಿ ಹಣ ಇತರೆ ಅಭಿವೃದ್ಧಿ ಕಾರ್ಯಗಳಿಗೆ ತೆಗೆದಿರಿಸಿದ್ದೇವೆ. ಅಭಿವೃದ್ಧಿಪರ ಆಡಳಿತ ನೀಡುತ್ತಿದ್ದೇವೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಗ್ಯಾರಂಟಿ ಯೋಜನೆ ದೇಶಕ್ಕೆ ಮಾದರಿ: ಡಿಕೆಶಿ

'ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ದೇಶಕ್ಕೆ ದೊಡ್ಡ ಮಾದರಿಯಾಗಿವೆ. ಬಿಜೆಪಿ ಆಡಳಿತ ರಾಜ್ಯಗಳಲ್ಲಿ ನಮ್ಮ ರಾಜ್ಯದ ಮಾದರಿ ಅನುಸರಿ-ಸಲಾಗುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

▶10

ಆಟೊ ಪ್ರಯಾಣ ದರ ಪ್ರತಿ ಕಿ.ಮೀಗೆ ₹3 ಹೆಚ್ಚಳ

ಕನಿಷ್ಠ ದರ ₹30 ಇದ್ದಿದ್ದು ₹36ಕ್ಕೆ ಏರಿಕೆ ● ಆಗಸ್ಟ್ 1ರಿಂದ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆಟೊ ಪ್ರಯಾಣ ದರವನ್ನು ಹೆಚ್ಚಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಸೋಮವಾರ ಆದೇಶ ಹೊರಡಿಸಿದ್ದು, ಪರಿಷ್ಕೃತ ದರ ಆಗಸ್ಟ್ 1ರಿಂದ ಜಾರಿಗೆ ಬರಲಿದೆ.

ಮೊದಲ ಎರಡು ಕಿ.ಮೀ.ಗೆ ಕನಿಷ್ಠ ₹30 ಇದ್ದ ದರವನ್ನು ₹36ಕ್ಕೆ ಏರಿಸಲಾಗಿದೆ. ಬಳಿಕ ಪ್ರತಿ ಕಿಲೋ ಮೀಟರ್‌ಗೆ ₹15 ಇದ್ದಿದ್ದು ₹18ಕ್ಕೆ ಏರಿದೆ. ಆಟೊದಲ್ಲಿ ಮೂವರು ಅಷ್ಟೇ ಪ್ರಯಾಣಿಸಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ಒಂದೂವರೆ ಪಟ್ಟು ಅಧಿಕ ದರ ವಿಧಿಸಲು ಅವಕಾಶವಿದೆ. ಮೊದಲ ಐದು ನಿಮಿಷ ಕಾಯುವಿಕೆ ಉಚಿತವಾಗಿದ್ದು, ಬಳಿಕ ಪ್ರತಿ 15 ನಿಮಿಷಕ್ಕೆ ₹10 ನೀಡ ಬೇಕಾಗುತ್ತದೆ. 20 ಕೆ.ಜಿ.ವರೆಗಿನ ಲಗೇಜಿಗೆ ಶುಲ್ಕವಿಲ್ಲ. ಅದಕ್ಕಿಂತ ಹೆಚ್ಚಿಗೆ ಇದ್ದರೆ ₹10 ದರ ವಿಧಿಸಬಹುದಾಗಿದೆ. 50 ಕೆ.ಜಿ.ವರೆಗೆ ಮಾತ್ರ ಪ್ರಯಾಣಿಕರು ಆಟೊದಲ್ಲಿ ಲಗೇಜು ಸಾಗಿಸಬಹುದು ಎಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ನಗರ ಜಿಲ್ಲಾಧಿಕಾರಿ ತಿಳಿಸಿದ್ದಾರೆ.



2021ರ ಡಿಸೆಂಬರ್‌ನಲ್ಲಿ ಈ ಹಿಂದೆ ಆಟೊ ದರ ಪರಿಷ್ಕರಣೆಯಾಗಿತ್ತು. ಮೊದಲ ಎರಡು ಕಿಲೋಮೀಟರ್‌ಗೆ ಕನಿಷ್ಠ ದರವನ್ನು ₹40ಕ್ಕೆ ಏರಿಸಬೇಕು. ಆ ನಂತರದ ಪ್ರತಿ ಕಿಲೋ ಮೀಟರ್‌ಗೆ ₹20ಕ್ಕೆ ಏರಿಸಬೇಕು ಎಂದು ವಿವಿಧ ಆಟೊ ಸಂಘಟನೆಗಳು ಈಚೆಗೆ ಒತ್ತಾಯಿಸಿದ್ದವು.

ದರ ಏರಿಕೆ ಬೇಡ. ಬೈಕ್ ಟ್ಯಾಕ್ಸಿಗಳನ್ನು ನಿಷೇಧಿಸಿ ಪ್ರಯಾಣಿಕರು ಆಟೊದಲ್ಲಿ ಬರುವಂತೆ ಮಾಡಿದರೆ ಸಾಕು ಎಂದು ಕೆಲವು ಸಂಘಟನೆಗಳು ಆಗ್ರಹಿಸಿದ್ದವು. ಇದರ ನಡುವೆ ದರ ನಿಗದಿಗಾಗಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಆಟೊ ಸಂಘಟನೆಯವರ ನಡುವೆ ಸಭೆಗಳು ನಡೆದಿದ್ದವು.

ಲೋಕಾರ್ಪಣೆ ಬಳಿಕ ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಘೋಷಣೆ

ಸೇತುವೆಗೆ 'ಸಿಗಂದೂರು ಚೌಡೇಶ್ವರಿ' ಹೆಸರು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಿಲ್ಲೆಯ ಅಂಬಾರಗೋಡ್ಲು-ಕಳಸವಳ್ಳಿ ನಡುವೆ, ಶರಾವತಿ ಹಿನ್ನೀರಿನಲ್ಲಿ ನಿರ್ಮಿಸಿರುವ ನೂತನ ತೂಗು ಸೇತುವೆಗೆ 'ಸಿಗಂದೂರು ಚೌಡೇಶ್ವರಿ' ಹೆಸರು ಇಡಲಾಗುವುದು ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಘೋಷಿಸಿದರು.

ಸೋಮವಾರ ಸೇತುವೆ ಲೋಕಾರ್ಪಣೆ ಬಳಿಕ ಸಾಗರದ ನೆಹರೂ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, 'ಸೇತುವೆ ನಿರ್ಮಾಣ ಕೆಲಸ ನನ್ನಿಂದ ಆಗಿಲ್ಲ. ಬದಲಿಗೆ, ಸಿಗಂದೂರು ಚೌಡೇಶ್ವರಿ ದೇವಿಯ ಆಶೀರ್ವಾದದಿಂದ ಆಗಿದೆ. ಆ ತಾಯಿಯ ಹೆಸರು ಇರಿಸುವ ಮೂಲಕ ಈ ಭಾಗದ ಜನರ ಭಾವನೆಗಳನ್ನು ಗೌರವಿಸಲಾಗುತ್ತಿದೆ' ಎಂದು ಹೇಳಿದರು.

ಸ್ಥಳೀಯರು ಇಲ್ಲಿಯವರೆಗೂ ಲಾಂಚ್‌ಗಳ ಹೊರತಾಗಿ 100 ಕಿ.ಮೀ. ನಷ್ಟು ದೂರ ಕ್ರಮಿಸಿ ಹೊರ ಜಗತ್ತಿನ ಸಂಪರ್ಕ ಪಡೆಯಬೇಕಿತ್ತು. ಸೇತುವೆ ನಿರ್ಮಾಣದಿಂದ ಶಾಶ್ವತವಾಗಿ ಅವರ ಬವಣೆ ನೀಗಿಸಿದ ತೃಪ್ತಿ ಇದೆ ಎಂದರು.

▶4



ಶಿವಮೊಗ್ಗ ಜಿಲ್ಲೆಯ ಅಂಬಾರಗೋಡ್ಲುಕಳಸವಳ್ಳಿ ನಡುವಿನ ಶರಾವತಿ ಹಿನ್ನೀರಿನಲ್ಲಿ ನಿರ್ಮಿಸಿರುವ ಸೇತುವೆಯನ್ನು ಕೇಂದ್ರ ಹೆದ್ದಾರಿ ಹಾಗೂ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ರಿಬ್ಬನ್ ಕತ್ತರಿಸುವ ಮೂಲಕ ಸೋಮವಾರ ಉದ್ಘಾಟಿಸಿದರು. ಸಂಸದ ಬಿ.ವೈ.ರಾಘವೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಉಪಸ್ಥಿತರಿದ್ದರು

'ಶಿಷ್ಟಾಚಾರ ಪಾಲನೆಯಾಗಿಲ್ಲ'

ಬೆಂಗಳೂರು: ತೂಗುಸೇತುವೆ ಉದ್ಘಾಟನಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಶಿಷ್ಟಾಚಾರ ಪಾಲಿಸಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ನನಗೆ ಮಾಹಿತಿ ನೀಡದೇ ನನ್ನ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಹಾಕಿದ್ದಾರೆ. ವಿಜಯಪುರದಲ್ಲಿ ವಿವಿಧ ಕಾರ್ಯಕ್ರಮಗಳು ನಿಗದಿಯಾಗಿರು-ವುದರಿಂದ ಸಾಗರ ತಾಲ್ಲೂಕಿನ ಕಾರ್ಯಕ್ರಮಗಳ ಉದ್ಘಾಟನೆ ಮುಂದೂಡು ವಂತೆ ಕೇಂದ್ರ ಸಚಿವ ನಿತಿನ್ ಗಡ್ಕರಿಯವರಿಗೆ ಪತ್ರವನ್ನು ಬರೆದಿದ್ದೆ. ಕರೆ ಮಾಡಿಯೂ ತಿಳಿಸಿದ್ದೆ. ಅವರು ಮುಂದೂಡಲು ಸಮ್ಮತಿಸಿದ್ದರು. ಆದರೆ, ಇಲ್ಲಿನ ಸ್ಥಳೀಯ ಬಿಜೆಪಿ ನಾಯಕರ ಒತ್ತಡಕ್ಕೆ ಮಣಿದು, ನನ್ನ ಗಮನಕ್ಕೆ ತಾರದೆ ಕಾರ್ಯಕ್ರಮ ಆಯೋಜಿಸಿದ್ದಾರೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಈ ತಿಕ್ಕಾಟವನ್ನು ಕೇಂದ್ರ ಸರ್ಕಾರವೇ ಆರಂಭಿಸಿದೆ. ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ರಾಜ್ಯ ಸರ್ಕಾರದ ಪಾಲೂ ಇರುತ್ತದೆ. ಅಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಎಲ್ಲ ಶಿಷ್ಟಾಚಾರಗಳನ್ನು ತಪ್ಪದೇ ಪಾಲಿಸುತ್ತದೆ' ಎಂದರು.

ಉದ್ಘಾಟನಾ ಕಾರ್ಯಕ್ರಮದ ಬಗ್ಗೆ ರಾಜ್ಯದ ಮುಖ್ಯಮಂತ್ರಿಯವರಿಗೆ ಮುಂಚಿತವಾಗಿ ತಿಳಿಸಬೇಕಾಗಿತ್ತು. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ.

ನಗರದಲ್ಲಿ ಇಂದು

ಕನ್ನಡ ಸಾಹಿತ್ಯ ವೇದಿಕೆಯ ಉದ್ಘಾಟನೆ: ಎಚ್. ಡುಂಡಿರಾಜ್, ಆಯೋಜನೆ ಮತ್ತು ಸ್ಥಳ: ಸೌಂದರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಬೆಳಿಗ್ಗೆ 10

ಡಾ. ಪದ್ಮಿನಿ ಸ್ಮಾರಕ ಉಪನ್ಯಾಸ, ಪ್ರಶಸ್ತಿ, ಫೆಲೋಶಿಪ್ ಪ್ರದಾನ: ಮಂಜುನಾಥ್ ಎಸ್.ಓ., ಪ್ರಶಸ್ತಿ ಸ್ವೀಕರಿಸುವವರು: ರಾಧಾ ಆರ್., ಆನಂದ್‌ರಾಜ್ ದೇಶಪ್ಪ ತವರ್‌ದಾರ್, ವಿಜ್ಞ ವಿನ್ಯಾಸ್, ಫೆಲೋಶಿಪ್ ಸ್ವೀಕರಿಸುವವರು: ನವೀನ್ ಕುಮಾರ್ ಬಿ., ಭವ್ಯ ಎಸ್., ಮಂಜುಳ ಕುಡಗುಂಟಿ, ಸುಬಾಸ್‌ಸಾಬ್, ನಾಗರಾಜ್ ಕೆ., ಗಾಯತ್ರಿ ಪಿ., ಆಯೋಜನೆ: ಚೈಲ್ಡ್ ರೈಟ್ಸ್ ಟ್ರಸ್ಟ್, ಸ್ಥಳ: ಎಸ್‌ಸಿಎಂ ಹೌಸ್, ಅದ್ದ ರಸ್ತೆ, ಸಿಎಸ್‌ಐ ಕಾಂಪೌಂಡ್, ಪಿ. ಕಾಳಿಂಗರಾವ್ ರಸ್ತೆ, ಬೆಳಿಗ್ಗೆ 10.30ರಿಂದ

ಭೂಮಿಕಾ ಆರ್. ಅವರು ಅನುವಾದಿಸಿರುವ 'ಜೊರಾಮಿ' ಪುಸ್ತಕ ಜನಾರ್ಪಣೆ, ಸಂವಾದ: ಪುಸ್ತಕ ಬಿಡುಗಡೆ: ಜಿ. ರಾಮಕೃಷ್ಣ, ಅಧ್ಯಕ್ಷತೆ: ಸಿದ್ದನಗೌಡ ಪಾಟೀಲ, ಪುಸ್ತಕದ ಕುರಿತು: ಶೈಲಜಾ, ಸಂವಾದ: ಮಾಲ್ವಾ ಜೆಕಬ್, ಡಿ. ಉಮಾಪತಿ, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30ರಿಂದ

ಸ್ವಾತಂತ್ರ್ಯೋತ್ಸವ ವಾದನ: ದಿವ್ಯಶ್ರೀ ರಂಗನಾಥನ್, ಪಿಟೀಲು: ಅಭಯ್, ಮೃದಂಗ: ಕಾರ್ತಿಕ್ ಪ್ರಸಾದ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಮಂತ್ರಿ ಮಾಲ್ ಮೆಟ್ರೊ ನಿಲ್ದಾಣದ ಎದುರು, ಶೇಷಾದ್ರಿಪುರ, ಸಂಜೆ 6.30

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಯುವಿಸಿಇ: 86.14ರಷ್ಟು ವಿದ್ಯಾರ್ಥಿಗಳಿಗೆ ಉದ್ಯೋಗ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದಲ್ಲಿ (ಯುವಿಸಿಇ) ಪದವಿಯಲ್ಲಿ ಓದುತ್ತಿರುವ ಶೇಕಡ 86.14ರಷ್ಟು ವಿದ್ಯಾರ್ಥಿಗಳಿಗೆ 'ಕ್ಯಾಂಪಸ್ ಆಯ್ಕೆ' ಮೂಲಕ ಉದ್ಯೋಗ ಲಭ್ಯವಾಗಿದೆ.

2025ನೇ ಸಾಲಿನಲ್ಲಿ 776 ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಲಭ್ಯವಾಗಿದೆ. ಹಿಂದಿನ ಶೈಕ್ಷಣಿಕ ಸಾಲಿಗೆ ಹೋಲಿಸಿದರೆ ಈ ಬಾರಿ ಶೇ 23.25ರಷ್ಟು ಉದ್ಯೋಗಾವಕಾಶ ಹೆಚ್ಚಳವಾಗಿದೆ ಎಂದು ಯುವಿಸಿಇ ತರಬೇತಿ ಮತ್ತು ಉದ್ಯೋಗ ಅಧಿಕಾರಿ ಪ್ರೊ.ಎಸ್.ಎಂ.ದಿಲೀಪ್ ಕುಮಾರ್ ತಿಳಿಸಿದ್ದಾರೆ.

ಯಾವ ವಿಭಾಗ, ಎಷ್ಟು ಪ್ಯಾಕೇಜ್?: ಮಾಹಿತಿ ತಂತ್ರಜ್ಞಾನ ವಿಭಾಗದಲ್ಲಿ ವಾರ್ಷಿಕ ₹9.75 ಲಕ್ಷ, ಕೋರ್ ವಿಭಾಗದಲ್ಲಿ ವಾರ್ಷಿಕ ₹7.77 ಲಕ್ಷ, ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ವಾರ್ಷಿಕ ₹5.28 ಲಕ್ಷ ಹಾಗೂ ಸಿವಿಲ್ ಎಂಜಿನಿಯರಿಂಗ್ ವಿಭಾಗದವರಿಗೆ ವಾರ್ಷಿಕ ₹4.62 ಲಕ್ಷ ನಿಗದಿಯಾಗಿದೆ ಎಂದು ತಿಳಿಸಿದ್ದಾರೆ.

ಪ್ರಮುಖ ಉದ್ಯೋಗದಾತ ಸಂಸ್ಥೆಗಳು: ಒರಾಕಲ್, ಜೀಸ್ಕೇಲರ್, ಎಸ್‌ಎಪಿ ಲ್ಯಾಬ್, ಡಾಯ್ಚ ಬ್ಯಾಂಕ್, ಲಂಡನ್ ಸ್ಟಾಕ್ ಎಕ್ಸ್‌ಚೇಂಜ್ ಗ್ರೂಪ್, ಥೇಲ್ಸ್, ಅಪ್ಲೈಡ್ ಮೆಟೀರಿಯಲ್ಸ್, ಟೆಕ್ಸಸ್ ಇನ್‌ಸ್ಟ್ರುಮೆಂಟ್ಸ್, ಭಾರತ್ ಎಲೆಕ್ಟ್ರಾನಿಕ್ಸ್, ಟಾಟಾ ಮೋಟಾರ್ ಸೇರಿ ಇತರ ಕಂಪನಿಗಳಿವೆ.

ಜೀವಾವಧಿ ಶಿಕ್ಷೆ ಎತ್ತಿಹಿಡಿದ 'ಸುಪ್ರೀಂ'

ಸಾಫ್ಟ್‌ವೇರ್ ಎಂಜಿನಿಯರ್ ಕೊಲೆ

• ಶುಭಾ ಶಂಕರ್, ಇತರರ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಸಾಫ್ಟ್‌ವೇರ್ ಎಂಜಿನಿಯರ್ ಬಿ.ವಿ.ಗಿರೀಶ್ (ಭಾವಿ ಪತಿ) ಅವರನ್ನು ಗೆಳೆಯನ ಸಹಕಾರದಿಂದ ಕೊಲೆ ಮಾಡಿದ್ದಕ್ಕೆ ಶುಭಾ ಶಂಕರ್ ಹಾಗೂ ಇತರ ಮೂವರಿಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ಎತ್ತಿಹಿಡಿದಿದೆ.

ಕರ್ನಾಟಕ ಹೈಕೋರ್ಟ್‌ನ ಆದೇಶವನ್ನು ಎತ್ತಿಹಿಡಿದ ನ್ಯಾಯಮೂರ್ತಿಗಳಾದ ಎಂ.ಎಂ.ಸುಂದರೇಶ್ ಮತ್ತು ಅರವಿಂದ್ ಕುಮಾರ್ ಅವರ ಪೀಠವು, 'ಶುಭಾ ತನ್ನ ಕಾಲೇಜು ಗೆಳೆಯ ಮತ್ತು ಇತರ ಇಬ್ಬರೊಂದಿಗೆ ಸೇರಿ ಕೊಲೆಗೆ ಸಂಚು ರೂಪಿಸಿದ್ದರು' ಎಂದು ತೀರ್ಪಿನಲ್ಲಿ ಹೇಳಿತು.

ಹೈಕೋರ್ಟ್ ತೀರ್ಪಿನ ವಿರುದ್ಧ ಅಪರಾಧಿಗಳು ಸಲ್ಲಿಸಿದ್ದ ವಿಶೇಷ ಮೇಲ್ಮನವಿಗಳನ್ನು ಪೀಠ ವಜಾಗೊಳಿಸಿತು. ಅಪರಾಧಕ್ಕೆ ಕಾರಣವಾದ ಭಾವನಾತ್ಮಕ ಮತ್ತು ಸಾಮಾಜಿಕ ಮೌಲ್ಯದ ಕುಸಿತದ ಬಗ್ಗೆ ಪೀಠವು ತೀವ್ರ ಕಳವಳ ವ್ಯಕ್ತಪಡಿಸಿತು.

'ಬಲವಂತದ ಕೌಟುಂಬಿಕ ನಿರ್ಧಾರದಿಂದಾಗಿ ಮಹತ್ವಾಕಾಂಕ್ಷಿ ಯುವತಿಯ ಮನಸ್ಸಿನಲ್ಲಿ ತೀವ್ರ ಗೊಂದಲ ಸೃಷ್ಟಿಯಾಯಿತು. ಮಾನಸಿಕ ಕ್ಷೋಭೆ ಮತ್ತು ಪ್ರಣಯದ ಅಪವಿತ್ರ ಮೈತ್ರಿಯೇ ಮುಗ್ಧ ಯುವಕನ ಕೊಲೆಗೆ ಕಾರಣವಾಯಿತು. ಅದೇ ಸಮಯದಲ್ಲಿ ಇತರ ಮೂವರ ಜೀವನವೂ ಹಾಳಾಯಿತು' ಎಂದು ಪೀಠವು ತೀರ್ಪಿನಲ್ಲಿ ಹೇಳಿದೆ.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 302 ಮತ್ತು ಸೆಕ್ಷನ್ 120 ಬಿ (ಪಿತೂರಿ) ಅಡಿಯಲ್ಲಿ ಕೊಲೆ ಆರೋಪದಡಿಯಲ್ಲಿ ಶುಭಾ, ಆಕೆಯ ಪ್ರಿಯಕರ ಅರುಣ್, ಸಹ ಆರೋಪಿಗಳಾದ ದಿನಕರನ್ ಮತ್ತು ವೆಂಕಟೇಶ್ ಅವರನ್ನು ದೋಷಿಗಳೆಂದು ಪ್ರಕಟಿಸಿದ ಹೈಕೋರ್ಟ್ ತೀರ್ಪನ್ನು ನ್ಯಾಯಪೀಠವು ದೃಢಪಡಿಸಿತು. ಸೆಕ್ಷನ್ 201ರ ಅಡಿಯಲ್ಲಿ ಸಾಕ್ಷ್ಯ ನಾಶ ಮಾಡಿದ್ದಕ್ಕಾಗಿ ಶುಭಾ ವಿರುದ್ಧ ಪ್ರತ್ಯೇಕ ಶಿಕ್ಷೆಯನ್ನು ಎತ್ತಿಹಿಡಿಯಿತು.



ಆದಾಗ್ಯೂ, ಯುವತಿಯ ಮೇಲೆ ಹೇರಲಾದ ಬಲವಂತದ ವಿವಾಹವೇ ಅಪರಾಧಕ್ಕೆ ಕಾರಣ ಎಂಬುದನ್ನು ಗಮನಿಸಿರುವ ನ್ಯಾಯಾಲಯವು, ಘಟನೆಗೆ ಕಾರಣವಾದ ಸಂದರ್ಭವನ್ನು ಗಮನದಲ್ಲಿ ರಿಸಿಕೊಂಡು, ಅಪರಾಧಿ ಶುಭಾಳಿಗೆ ಕರ್ನಾಟಕ ರಾಜ್ಯಪಾಲರ ಮುಂದೆ ಕ್ಷಮಾದಾನಕ್ಕೆ ಅರ್ಜಿ ಸಲ್ಲಿಸಲು ಅನುಮತಿ ನೀಡಿತು. ಇದಕ್ಕೆ ಅರ್ಜಿ ಸಲ್ಲಿಸಲು ಎಂಟು ವಾರಗಳ ಕಾಲಾವಕಾಶವನ್ನು ಪೀಠ ನೀಡಿತು.

ರಾಜ್ಯದಾದ್ಯಂತ ಚರ್ಚೆಗೆ ಕಾರಣವಾಗಿದ್ದ ಕೊಲೆ ಪ್ರಕರಣದಲ್ಲಿ ಬೆಂಗಳೂರಿನ ಸೆಷನ್ಸ್ ನ್ಯಾಯಾಲಯವು ನಾಲ್ವರಿಗೆ ಶಿಕ್ಷೆ ವಿಧಿಸಿತ್ತು. ಈ ಜೈಲು ಶಿಕ್ಷೆಯನ್ನು ಹೈಕೋರ್ಟ್ ಎತ್ತಿ ಹಿಡಿದಿತ್ತು.

ಇಂಟೆಲ್ ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಗಿರೀಶ್ ಹಾಗೂ ಕಾನೂನು ವಿದ್ಯಾರ್ಥಿನಿಯಾಗಿದ್ದ ಶುಭಾ ನಿಶ್ಚಿತಾರ್ಥವು 2003ರ ನವೆಂಬರ್‌ನಲ್ಲಿ ನಡೆದಿತ್ತು. ಅವರ ವಿವಾಹವು ಐದು ತಿಂಗಳಲ್ಲಿ ನಡೆಯಬೇಕಿತ್ತು. ಕಾನೂನು ಕಾಲೇಜಿನಲ್ಲಿ ತಮ್ಮ ಜೂನಿಯರ್ ಆಗಿದ್ದ ಅರುಣ್‌ನನ್ನು ಶುಭಾ ಪ್ರೀತಿಸುತ್ತಿದ್ದಳು. ಈ ಇಬ್ಬರೂ ಸಹಚರರ ಜತೆಗೂಡಿ ಕೊಲೆ ಮಾಡಿದ್ದಾರೆಂದು ಆರೋಪಪಟ್ಟಿಯಲ್ಲಿ ತಿಳಿಸಲಾಗಿತ್ತು.

ಮಗಳ ಪ್ರೇಮ ಪ್ರಸಂಗವು ತಂದೆ ಶಂಕರನಾರಾಯಣ ಅವರಿಗೆ ಗೊತ್ತಾಯಿತು. ಇದನ್ನು ತಪ್ಪಿಸಲು ಬನಶಂಕರಿ ನಿವಾಸಿ ಗಿರೀಶ್ ಅವರೊಂದಿಗೆ ವಿವಾಹ ಮಾಡಲು ನಿಶ್ಚಯಿಸಿದರು. ಮದುವೆ ನಿಶ್ಚಯವಾದ ಬಳಿಕ ಗಿರೀಶ್ ಅವರೊಂದಿಗೆ ಊಟಕ್ಕೆ ತೆರಳಿದ್ದ ಶುಭಾ, ವಿಮಾನ ನಿಲ್ದಾಣದ ರಿಂಗ್ ರಸ್ತೆಯಲ್ಲಿ ವಿಮಾನ ಇಳಿಯುವುದನ್ನು ಹಾಗೂ ಮೇಲೇರುವುದನ್ನು ತೋರಿ ಸುತ್ತಿದ್ದಳು. ಈ ವೇಳೆ, ಉಳಿದ ಮೂವರು ಹಿಂದಿನಿಂದ ಬಂದು ಗಿರೀಶ್ ಮೇಲೆ ರಾಡ್‌ನಿಂದ ದಾಳಿ ಮಾಡಿದ್ದರು. ಗಿರೀಶ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಕೃತ್ಯಕ್ಕೆ ಮುನ್ನ ಉಳಿದ ಅಪರಾಧಿಗಳೊಂದಿಗೆ ಶುಭಾ ನಿರಂತರ ಸಂಪರ್ಕದಲ್ಲಿದ್ದರು. ಗಿರೀಶ್ ಓಡಾಟದ ಇಂಚಿಂಚೂ ಮಾಹಿತಿ ಒದಗಿಸಿದ್ದಳು. ಈ ಬಗ್ಗೆ ಸಿಡಿಆರ್ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು.

'ಒಬ್ಬ ಮುಗ್ಧ ಯುವಕ ಜೀವ ಕಳೆದುಕೊಳ್ಳಲು ಕಾರಣವಾದ ಆಕೆಯ ಕೃತ್ಯವನ್ನು ನಾವು ಕ್ಷಮಿಸಲು ಸಾಧ್ಯವಿಲ್ಲ. ತನ್ನ ಸಮಸ್ಯೆ ಬಗೆಹರಿಸಿಕೊಳ್ಳಲು ಆಕೆ ತಪ್ಪು ಕೃತ್ಯ ಎಸಗಿದ್ದಾಳೆ. ಅಪರಾಧ ಸಂಭವಿಸಿ ಎರಡು ದಶಕಗಳು ಕಳೆದಿವೆ. ಘಟನೆಯ ಸಮಯದಲ್ಲಿ ನಾಲ್ವರು ಅಪರಾಧಿಗಳ ಪೈಕಿ ಇಬ್ಬರು ಹದಿಹರೆಯದವರು ಆಗಿದ್ದರು. ನ್ಯಾಯಾಲಯವು ಈ ವಿಷಯವನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಲು ಬಯಸುತ್ತದೆ. ಆಕೆಗೆ ಹೊಸ ಜೀವನ ನಡೆಸಲು ಅವಕಾಶ ನೀಡುವ ಸಲುವಾಗಿ ಮಾತ್ರ ಕ್ಷಮಾದಾನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ನೀಡುತ್ತದೆ' ಎಂದು ಪೀಠದ ಪರವಾಗಿ ನ್ಯಾಯಮೂರ್ತಿ ಸುಂದರೇಶ್ ಅವರು 132 ಪುಟಗಳ ತೀರ್ಪಿನಲ್ಲಿ ತಿಳಿಸಿದ್ದಾರೆ.



ಸಾಂಸ್ಕೃತಿಕ ಪರಿಚಾರಕ ಕೆ.ರೇವಣ್ಣ ದಂಪತಿಯನ್ನು ಭಾನುವಾರ ಸನ್ಮಾನಿಸಲಾಯಿತು

ಸರ್ಕಾರಿ ಇಲಾಖೆಯಲ್ಲಿ ಗುತ್ತಿಗೆ ವ್ಯವಸ್ಥೆ ತೊಲಗಲಿ: ಕೆ.ಎಂ. ಮರುಳಸಿದ್ದಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಸೇರಿದಂತೆ ಹಲವು ಇಲಾಖೆಗಳಲ್ಲಿ ಇರುವ ಗುತ್ತಿಗೆ ಆಧಾರಿತ ನೌಕರಿ ವ್ಯವಸ್ಥೆ ತೊಲಗಬೇಕು ಎಂದು ಸಂಸ್ಕೃತಿ ಚಿಂತಕ ಕೆ.ಎಂ. ಮರುಳಸಿದ್ದಪ್ಪ ಆಗ್ರಹಿಸಿದರು.

ಸಾಂಸ್ಕೃತಿಕ ಪರಿಚಾರಕ ಕೆ.ರೇವಣ್ಣ ಅಭಿನಂದನಾ ಸಮಿತಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೆ. ರೇವಣ್ಣ ದಂಪತಿಯನ್ನು ಸನ್ಮಾನಿಸಿ ಅವರು ಮಾತನಾಡಿದರು.

ಸರ್ಕಾರಿ ಇಲಾಖೆಯಲ್ಲಿ ರೇವಣ್ಣ ಗುತ್ತಿಗೆ ನೌಕರನಾಗಿ ಸೇರಿ ಗುತ್ತಿಗೆ ನೌಕರನಾಗಿಯೇ ನಿವೃತ್ತಿ ಹೊಂದುತ್ತಿದ್ದಾರೆ. ಇದು ಶೋಚನೀಯ ಮತ್ತು ಖಂಡನೀಯ ಎಂದರು.

ನಾಟಕ ಅಕಾಡೆಮಿಯಲ್ಲಿ ಹಂಗಾಮಿ ನೌಕರನಾಗಿ ಕೆಲಸ ಮಾಡುತ್ತಲೇ ಸಾಂಸ್ಕೃತಿಕ ಲೋಕದಲ್ಲಿ 'ಭಾಗವತರು' ಮೂಲಕ ಸಾರ್ಥಕ ಕೆಲಸಗಳನ್ನು ಮಾಡಿ ಸಂಸ್ಕೃತಿ ಪರಿಚಾರಿಕೆಗೆ ಮಾದರಿಯಾಗಿದ್ದಾರೆ ಎಂದು ಬಣ್ಣಿಸಿದರು.

ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷೆ ಮಾಲತಿ ಸುಧೀರ್ ಮಾತನಾಡಿ, 'ಮಲ್ಲಿಗೆ ಹೂವನ್ನು ಎಲ್ಲೇ ಬಚ್ಚಿಟ್ಟರೂ ಅದರ ಸುಗಂಧ ಹರಡುತ್ತದೆ. ರೇವಣ್ಣ ಮಲ್ಲಿಗೆ ಹೂವಿನಂತೆ. ಅವರ ಸಾಧನೆ, ಸೇವೆ, ಸಾಂಸ್ಕೃತಿಕ ಚಟುವಟಿಕೆಗಳು ಎಲ್ಲೆಡೆ ಪಸರಿಸಿವೆ' ಎಂದರು.

ಲೇಖಕಿ ವಿಜಯಾ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಎಲ್. ಹನುಮಂತಯ್ಯ 'ರಂಗಭಾಗವತ' ಕೃತಿ ಜನಾರ್ಪಣೆ ಮಾಡಿದರು. ಅಭಿನಂದನಾ ಸಮಿತಿಯ ಅಧ್ಯಕ್ಷ ಜಿ.ಎನ್.ಮೋಹನ್, ರಂಗಕರ್ಮಿ ಬಿ.ವಿ. ರಾಜಾರಾಂ, ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಶೇಖ್ ಮಾಸ್ತರ್, ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಅಭಿನಂದನಾ ಗ್ರಂಥದ ಸಂಪಾದಕ ರಾಜು ಮಳವಳ್ಳಿ, ಕೀರ್ತನಕಾರ ಲಕ್ಷ್ಮಣ ದಾಸ್ ಉಪಸ್ಥಿತರಿದ್ದರು.

ಪ್ರತಿಭಟನೆ

ಪ್ರಜಾವಾಣಿ ಚಿತ್ರ



ಬೀದಿಬದಿಯ ವ್ಯಾಪಾರಿಗಳನ್ನು ತೆರವು ಮಾಡುತ್ತಿರುವ ಬಿಬಿಎಂಪಿ ಹಾಗೂ ಪೊಲೀಸರ ಕ್ರಮವನ್ನು ಖಂಡಿಸಿ ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಸೋಮವಾರ ವ್ಯಾಪಾರಿಗಳು ಪ್ರತಿಭಟನೆ ನಡೆಸಿದರು

ಕಾರು ಅಪಘಾತ: ಇಬ್ಬರ ಸಾವು

ಕೋಲಾರ: ಜಿಲ್ಲೆಯ ಮಾಲೂರು ಬಳಿ ಚೆನ್ನೈ-ಬೆಂಗಳೂರು ಎಕ್ಸ್‌ಪ್ರೆಸ್ ಕಾರಿಡಾರ್‌ನಲ್ಲಿ ಸೋಮವಾರ ಕಾರುಗಳ ನಡುವೆ ಅಪಘಾತ ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಈಶ್ವರ್ ಹಾಗೂ ಜನನಿ ಮೃತರು ಎಂದು ಗುರುತಿಸಲಾಗಿದೆ. ಇವರಿಬ್ಬರೂ ಕಾರಿನಲ್ಲಿ ಬೆಂಗಳೂರಿನತ್ತ ತೆರಳುತ್ತಿದ್ದರು. ಬೆಂಗಳೂರಿನಿಂದ ಬರುತ್ತಿದ್ದ ಕಾರಿನಲ್ಲಿದ್ದ ಕೆಲವರಿಗೆ ಗಾಯಗಳಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. ಹಾಗೂ ಮಾಲೂರು ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ವಸಂತ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಮಾಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ವಾರ್ತೆ

ಶ್ರೀಧರ ದೀಕ್ಷಿತ್



ಬೆಂಗಳೂರು: ಧರ್ಮರಾಯ-ಸ್ವಾಮಿ ದೇವಸ್ಥಾನ ಸಮೀಪವಿರುವ ಮುಜರಾಯಿ ಇಲಾಖೆಗೆ ಸೇರಿದ ಜಲಕಂಠೇಶ್ವರಸ್ವಾಮಿ ದೇವಾಲಯದ ಅರ್ಚಕ ಎಸ್.ಶ್ರೀಧರ ದೀಕ್ಷಿತ್ (40) ಅವರು ದೇವಾಲಯ ಆವರಣದಲ್ಲಿ ಹೃದಯಾಘಾತದಿಂದ ಸೋಮವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಸೋಮವಾರ ಸಂಜೆ ನಾಲ್ಕು ಗಂಟೆ ಸುಮಾರಿಗೆ ದೇವಾಲಯದ ಹೊರವಲಯದ ಆವರಣದಲ್ಲಿನ ಅಶ್ವತ್ಥ ಕಟ್ಟೆ ಬಳಿ ಭಕ್ತರೊಟ್ಟಿಗೆ ಪೂಜೆ ಕುರಿತು ಮಾತನಾಡುತ್ತಿದ್ದಾಗ ಶ್ರೀಧರ ದೀಕ್ಷಿತ್ ಹಠಾತ್ ಕುಸಿದುಬಿದ್ದರು. ಆಸ್ಪತ್ರೆಗೆ ಕೊಂಡೊಯ್ಯುವ ಮಾರ್ಗದಲ್ಲಿ ಅವರು ಮೃತಪಟ್ಟಿದ್ದಾರೆ. ಕೆಂಗೇರಿ ಉಪನಗರದಲ್ಲಿರುವ ಸಾರ್ವಜನಿಕ ಚಿತಾಗಾರದಲ್ಲಿ ಮಂಗಳವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೊಲೀಸ್ ಸಮವಸ್ತ್ರ ಖರೀದಿಸಿದ್ದ ಶಂಕಿತರು

ಉಗ್ರರ ನಂಟು: ನ್ಯಾಯಾಂಗ ಬಂಧನಕ್ಕೆ ಮೂವರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಾಸಿರ್‌ಗೆ ಪೊಲೀಸ್ ವಸ್ತ್ರ ಧರಿಸಿ ಬಾಂಗ್ಲಾಗೆ ಕಳಿಸಲು ಯೋಜನೆ
- ಪ್ರೇಯಸಿ ಹೆಸರಿನಲ್ಲಿ ಮೊಬೈಲ್ ಖರೀದಿಸಿ ಕೈದಿಗಳಿಗೆ ಪೂರೈಕೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಲಷ್ಕರ್ ಎ ತಯಬಾ(ಎಲ್‌ಇಟಿ) ಸಂಘಟನೆಯ ಮುಖಂಡ ಟಿ.ನಾಸಿರ್‌ಗೆ ನೆರವು ನೀಡಿದ್ದ ಆರೋಪದಡಿ ಬಂಧನಕ್ಕೆ ಒಳಗಾಗಿರುವ ಮೂವರು ಶಂಕಿತರನ್ನು ರಾಷ್ಟ್ರೀಯ ತನಿಖಾ ದಳದ ವಿಶೇಷ ನ್ಯಾಯಾಲಯವು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಸೋಮವಾರ ಆದೇಶಿಸಿತು.

ಕಾರಾಗೃಹದ ಮನೋವೈದ್ಯ ನಾಗರಾಜ್, ಶಂಕಿತ ಉಗ್ರ ಜುನೈದ್ ಅಹಮದ್ ತಾಯಿ ಅನೀಸ್ ಫಾತಿಮಾ ಹಾಗೂ ಎಎಸ್‌ಐ ಚಾಂದ್ ಪಾಷಾ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಬಿಗಿ ಭದ್ರತೆ ನಡುವೆ ಮೂವರನ್ನೂ ಕಾರಾಗೃಹಕ್ಕೆ ಕಳುಹಿಸಲಾಗಿದೆ.

ಉಗ್ರರ ಜತೆಗೆ ನಂಟು ಹೊಂದಿದ್ದ ಆರೋಪದ ಮೇರೆಗೆ ಮೂವರನ್ನು ಜುಲೈ 8ರಂದು ಎನ್‌ಐಎ ಬಂಧಿಸಿ, ಹೆಚ್ಚಿನ ವಿಚಾರಣೆಗೆ ಆರು ದಿನ ಕಸ್ಟಡಿಗೆ ಪಡೆದುಕೊಂಡಿತ್ತು. ಕಸ್ಟಡಿ ಅವಧಿ ಮುಕ್ತಾಯವಾದ ಮೇರೆಗೆ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು.

ಬಾಂಗ್ಲಾದೇಶಕ್ಕೆ ಕಳುಹಿಸಲು ಯತ್ನ: 'ಮೂವರನ್ನೂ ಆರು ದಿನ ವಿಚಾರಣೆ ನಡೆಸಿದಾಗ ಕೆಲವೊಂದು ಸ್ಫೋಟಕ ಮಾಹಿತಿಗಳು ಬಹಿರಂಗವಾಗಿವೆ' ಎಂದು ಎನ್‌ಐಎ ಮೂಲಗಳು ತಿಳಿಸಿವೆ.

'ಮೂವರ ಮೊಬೈಲ್ ಜಪ್ತಿ ಮಾಡಿಕೊಂಡು ಕರೆಗಳ ವಿವರ ಪರಿಶೀಲನೆ ನಡೆಸಲಾಗಿದೆ. ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಉಗ್ರ ಟಿ.ನಾಸಿರ್‌ನನ್ನು ನ್ಯಾಯಾಲಯಕ್ಕೆ ಕರೆದೊಯ್ಯುವಾಗ ಗ್ರೆನೇಡ್ ಸ್ಫೋಟಿಸಿ ಪೊಲೀಸರ ಕೈಯಿಂದ ತಪ್ಪಿಸಿಕೊಂಡು ಹೋಗುವಂತೆ ಯೋಜನೆ ರೂಪಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.


ಚಾಂದ್ ಪಾಷಾ


ನಾಗರಾಜ್


ಫಾತಿಮಾ

'ನಾಸಿರ್‌ಗೆ ಪೊಲೀಸ್ ಸಮವಸ್ತ್ರ ಧರಿಸಿ ಬಾಂಗ್ಲಾದೇಶಕ್ಕೆ ಕಳುಹಿಸಲು ಸಂಚು ರೂಪಿಸಲಾಗಿತ್ತು. ಅದಕ್ಕಾಗಿ ಆರೋಪಿಗಳು 10 ಜೊತೆ ಪೊಲೀಸ್ ಸಮವಸ್ತ್ರ ಖರೀದಿಸಿದ್ದರು. ಸಮವಸ್ತ್ರಗಳನ್ನು ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

'ಪೊಲೀಸ್ ಸಮವಸ್ತ್ರ ಖರೀದಿಗೆ ಎಎಸ್‌ಐ ಚಾಂದ್ ಪಾಷಾ ಸಹಾಯ ಮಾಡಿದ್ದ. ಚಾಂದ್ ಪಾಷಾ ಸೂಚನೆ ಮೇರೆಗೆ ಆರೋಪಿಗಳು ಶಿವಾಜಿನಗರದಲ್ಲಿ ಸಮವಸ್ತ್ರ ಖರೀದಿ ಮಾಡಿದ್ದರು. ನಾಸಿರ್‌ನನ್ನು ನ್ಯಾಯಾಲಯಕ್ಕೆ ಕರೆದೊಯ್ಯುವ ಜವಾಬ್ದಾರಿಯನ್ನು ಚಾಂದ್ ಪಾಷಾಗೆ ನೀಡಲಾಗಿತ್ತು. ನಾಸಿರ್‌ನನ್ನು ನ್ಯಾಯಾಲಯಕ್ಕೆ ಕರೆದೊಯ್ಯಲು ನಿವೃತ್ತಿ ಅಂಚಿನಲ್ಲಿರುವ ಸಿಬ್ಬಂದಿಯನ್ನು ಚಾಂದ್ ಪಾಷಾ ನೇಮಕ ಮಾಡಿದ್ದ. ಇದು ನಾಸಿರ್ ಪರಾರಿಯಾಗಲು ಮಾಡಿದ್ದ ಸಂಚಿನ ಭಾಗವಾಗಿತ್ತು. ದಾರಿ ಮಧ್ಯೆ ಗ್ರೆನೇಡ್ ಸ್ಫೋಟಿಸಿ ತಪ್ಪಿಸಿಕೊಳ್ಳುವಂತೆ ಮಾಡುವುದು, ಕೇರಳಕ್ಕೆ ಕರೆದೊಯ್ದು ಅಲ್ಲಿಂದ ಪಶ್ಚಿಮ ಬಂಗಾಳಕ್ಕೆ ಕಳುಹಿಸುವುದು, ನಂತರ ಬಾಂಗ್ಲಾದೇಶಕ್ಕೆ ಕಳುಹಿಸಲು ಯೋಜನೆ ಸಿದ್ಧ ಪಡಿಸಿಕೊಳ್ಳಲಾಗಿತ್ತು' ಎಂದು ಎನ್‌ಐಎ ಮೂಲಗಳು ತಿಳಿಸಿವೆ.

ಪ್ರೇಯಸಿ ಹೆಸರಿನಲ್ಲಿ ಮೊಬೈಲ್ ಖರೀದಿ: ಶಂಕಿತ ನಾಗರಾಜ್, ತನ್ನ ಪ್ರೇಯಸಿ ಪವಿತ್ರಾ ಹೆಸರಿನಲ್ಲಿ ವಾರಕ್ಕೆ ಎರಡು ಮೊಬೈಲ್ ಖರೀದಿಸಿ, ಅವುಗಳನ್ನು ಜೈಲಿನಲ್ಲಿರುವ ಕೈದಿಗಳಿಗೆ ಪೂರೈಸಿದ್ದ. ವಿದೇಶದಲ್ಲಿ ತಲೆಮರೆಸಿಕೊಂಡಿರುವ ಜುನೈದ್ ಅಹಮದ್ ಜತೆಗೆ ಫಾತಿಮಾ, ಚಾಂದ್ ಪಾಷಾ ಸಿಗ್ನಲ್ ಆ್ಯಪ್ ಮೂಲಕ ಮಾತನಾಡಿದ್ದಾರೆ. ಶಂಕಿತರ ಧ್ವನಿಯ ಮಾದರಿ ಸಂಗ್ರಹಿಸಲಾಗಿದ್ದು, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಮೂಲಗಳು ಹೇಳಿವೆ.

ತಪ್ಪೊಪ್ಪಿಗೆ ಹೇಳಿಕೆ ದಾಖಲಿಸಲು ಎಂಟು ಮಂದಿ ಅರ್ಜಿ

ಕಾರಾಗೃಹದಿಂದಲೇ ಉಗ್ರ ಕೃತ್ಯಕ್ಕೆ ಸಂಚು ರೂಪಿಸಿದ್ದ ಪ್ರಕರಣದಲ್ಲಿ ಈ ಹಿಂದೆ ಬಂಧಿತರಾಗಿರುವ ಎಲ್‌ಇಟಿ ಉಗ್ರ ಟಿ. ನಾಸಿರ್ ಸೇರಿ 8 ಮಂದಿ ಶಂಕಿತರು ತಪ್ಪೊಪ್ಪಿಗೆ ಹೇಳಿಕೆ ದಾಖಲಿಸುವುದಾಗಿ ಎನ್‌ಎಎ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯ ವಿಚಾರಣೆ ನಡೆಸಿರುವ ನ್ಯಾಯಾಲಯವು ಜುಲೈ 16ಕ್ಕೆ ವಿಚಾರಣೆ ಮುಂದೂಡಿದೆ.

ಟಿ.ನಾಸಿರ್, ಸೈಯದ್ ಸುಹೈಲ್, ಮೊಹಮದ್ ಉಮರ್, ಜಹೀದ್ ತಬ್ರೇಜ್, ಸೈಯದ್ ಮುದಾಸಿರ್ ಪಾಷಾ, ಮಹಮದ್ ಫೈಸಲ್, ಸಲ್ಮಾನ್ ಖಾನ್ ಮತ್ತು 2021ರಲ್ಲಿ ದೆಹಲಿಯ ವಿಶೇಷ ತನಿಖಾ ತಂಡದಿಂದ ಬಂಧನಕ್ಕೆ ಒಳಗಾಗಿದ್ದ ವಿಕ್ರಮ್ ಕುಮಾರ್ ಅಲಿಯಾಸ್ ಛೋಟಾ ಉಸ್ಮಾನ್ ತಪ್ಪೊಪ್ಪಿಗೆ ಹೇಳಿಕೆ ನೀಡುವುದಾಗಿ ಜುಲೈ 8ರಂದು ಅರ್ಜಿ ಸಲ್ಲಿಸಿದ್ದಾರೆ. ಸ್ವಯಂ ಪ್ರೇರಿತವಾಗಿ ಅರ್ಜಿ ಸಲ್ಲಿಸಿರುವುದಾಗಿ ಉಲ್ಲೇಖಿಸಿದ್ದಾರೆ.

ಆತ್ಮಹತ್ಯೆಗೆ ಫಾತಿಮಾ ಯತ್ನ

ಶಂಕಿತರ ಪೈಕಿ ಅನೀಸ್ ಫಾತಿಮಾ ಎನ್‌ಐಎ ವಿಚಾರಣೆಗೆ ಅಸಹಕಾರ ತೋರಿದ್ದಾಳೆ. ಜೈಲಿನಲ್ಲಿದ್ದಾಗ ಶೌಚಾಲಯಕ್ಕೆ ಹೋಗಿ ಹಾರ್ಪಿಕ್ ಸೇವಿಸಿ, ಆತ್ಮಹತ್ಯೆಗೆ ಯತ್ನಿಸಿದ್ದಳು. ತಕ್ಷಣವೇ ಆಕೆಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಮಾರಕಾಸ್ತ್ರಗಳಿಂದ ಹಲ್ಲೆ: ತುಂಡಾದ ಕಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರುದ್ರಪ್ಪ ಗಾರ್ಡನ್‌ನ ಬಾರ್‌ವೊಂದರಲ್ಲಿ ಪಾರ್ಟಿ ನಡೆಸುತ್ತಿದ್ದ ವೇಳೆ ನಡೆದ ಗಲಾಟೆಯಲ್ಲಿ ಯುವಕನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಲಾಗಿದ್ದು, ಹಲ್ಲೆಗೆ ಒಳಗಾದ ತೇಜಸ್ (24) ಗಂಭೀರವಾಗಿ ಗಾಯಗೊಂಡಿದ್ದಾನೆ.

ಚಾಮರಾಜಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ರುದ್ರಪ್ಪ ಗಾರ್ಡನ್‌ನಲ್ಲಿ ಶುಕ್ರವಾರ ರಾತ್ರಿ ಘಟನೆ ನಡೆದಿದ್ದು, ದುಷ್ಕರ್ಮಿಗಳ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿರುವ ತೇಜಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ದಾಳಿಯಿಂದ ಕಾಲು ತುಂಡಾಗಿದೆ. ಕುತ್ತಿಗೆಯ ಭಾಗಕ್ಕೆ ಬಲವಾದ ಪೆಟ್ಟು ಬಿದ್ದಿದೆ ಎಂದು ಮೂಲಗಳು ತಿಳಿಸಿವೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ. ಉಳಿದ ಇಬ್ಬರ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಆಟೊ ಚಾಲಕನಾಗಿರುವ ತೇಜಸ್, ಶುಕ್ರವಾರ ರಾತ್ರಿ ಕೆಲಸ ಮುಗಿಸಿಕೊಂಡು ತನ್ನ ಸ್ನೇಹಿತ ಸಂತೋಷ್ ಜೊತೆ ರುದ್ರಪ್ಪ ಗಾರ್ಡನ್‌ನಲ್ಲಿರುವ ಮಂಜು ಬಾರ್‌ಗೆ ತೆರಳಿದ್ದ. ಇಬ್ಬರೂ ಪಾರ್ಟಿ ಮಾಡುತ್ತಿದ್ದಾಗ ಸಂತೋಷ್‌ನ ಸ್ನೇಹಿತರಾದ ರಾಹುಲ್, ಪ್ರಜ್ವಲ್ ಹಾಗೂ ಅಭಿಷೇಕ್ ಅದೇ ಬಾರ್‌ಗೆ ಬಂದಿದ್ದರು. ಒಂದೇ ಟೇಬಲ್‌ನಲ್ಲಿ ಕುಳಿತು ಐವರೂ ಮದ್ಯ ಸೇವನೆ ಮಾಡುತ್ತಿದ್ದರು. ಆಗ ಮಾತಿಗೆ ಮಾತು ಬೆಳೆದು ಗಲಾಟೆ ವಿಕೋಪಕ್ಕೆ ಹೋಗಿತ್ತು. ಈ ವೇಳೆ ಸಂತೋಷ್‌ನ ಪರವಾಗಿ ತೇಜಸ್ ಮಾತನಾಡಿದ್ದ ಎಂದು ಮೂಲಗಳು ತಿಳಿಸಿವೆ.

ಸ್ವಲ್ಪ ಹೊತ್ತಿನ ನಂತರ ಬಾರ್‌ನ ಸಿಬ್ಬಂದಿ ಗಲಾಟೆ ಬಿಡಿಸಿದ್ದರು. ರಾಹುಲ್, ಪ್ರಜ್ವಲ್ ಹಾಗೂ ಅಭಿಷೇಕ್ ಬಾರ್‌ನಿಂದ ಹೊರಕ್ಕೆ ಹೋಗಿದ್ದರು. ಆಮೇಲೆ ಸಂತೋಷ್ ಹಾಗೂ ತೇಜಸ್ ಪಾರ್ಟಿ ಮುಗಿಸಿ ಹೊರಡಲು ಸಿದ್ಧ ಆಗುತ್ತಿದ್ದಂತೆ ಮಾರಕಾಸ್ತ್ರಗಳ ಸಮೇತ ಬಂದ ಆರೋಪಿಗಳು, ತೇಜಸ್ ಮೇಲೆ ಹಲ್ಲೆ ನಡೆಸಿದರು.

ತೇಜಸ್ ಸಹೋದರ ನೀಡಿರುವ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಚಾಮರಾಜಪೇಟೆ ಠಾಣೆ ಪೊಲೀಸರು, ಪ್ರಕರಣದ ತನಿಖೆ ನಡೆಸುತ್ತಿದ್ದಾರೆ.

ಡೆಲಿವರಿ ಯುವಕನ ಮೇಲೆ ಹಲ್ಲೆ

ಬೆಂಗಳೂರು: ರಾಜಾಜಿನಗರದ ಮೋದಿ ಆಸ್ಪತ್ರೆ ಜಂಕ್ಷನ್‌ನಲ್ಲಿ ಟ್ರಾಫಿಕ್ ಸಿಗ್ನಲ್‌ನಲ್ಲಿ ಬೈಕ್ ನಿಲ್ಲಿಸಿಕೊಂಡಿದ್ದ ಫುಡ್ ಡೆಲಿವರಿ ಕೆಲಸ ಮಾಡುವ ಹುಡುಗನ ಮೇಲೆ ಮೂವರು ಹಲ್ಲೆ ನಡೆಸಿ ಪರಾರಿ ಆಗಿದ್ದಾರೆ.

ಸ್ವಿಗ್ಗಿಯಲ್ಲಿ ಕೆಲಸ ಮಾಡುತ್ತಿದ್ದ ಡೆಲಿವರಿ ಹುಡುಗ ಸಿಗ್ನಲ್‌ನಲ್ಲಿ ಕೆಂಪು ಲೈಟ್ ಇದೆ ಎಂದು ಬೈಕ್ ನಿಲುಗಡೆ ಮಾಡಿಕೊಂಡಿದ್ದರು. ಅದೇ ವೇಳೆ ಹಿಂದಿನಿಂದ ಕಾರಿನಲ್ಲಿ ಬಂದು ಮೂವರು ಅಪರಿಚಿತರು ದಾರಿ ಬಿಡುವಂತೆ ಹೇಳಿದ್ದರು. ಆಗ ಡೆಲಿವರಿ ಕೆಲಸ ಮಾಡುತ್ತಿದ್ದ ಹುಡುಗ, 'ರೆಡ್ ಸಿಗ್ನಲ್ ಇದೆ. ಹೇಗೆ ಮುಂದಕ್ಕೆ ಹೋಗುವುದು' ಎಂದು ಹೇಳಿದ್ದ. ಆಗ ಮಾತಿಗೆ ಮಾತು ಬೆಳೆದು ಹಲ್ಲೆ ಮಾಡಲಾಗಿದೆ. ಈ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಮೂವರು ಆರೋಪಿಗಳು ಹಲ್ಲೆ ನಡೆಸಿ ಪರಾರಿ ಆಗಿದ್ದರು. ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದ ಡೆಲಿವರಿ ಹುಡುಗನನ್ನು ಸ್ಥಳೀಯರು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಹಲ್ಲೆಗೆ ಒಳಗಾದ ಯುವಕ ನೀಡಿದ ದೂರು ಸ್ವೀಕರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಎಫ್‌ಐಆರ್: ತಕ್ಷಣವೇ ಮಾಹಿತಿ ನೀಡಲು ಸೂಚನೆ

ಡಿಸಿಆರ್‌ಇ ವಿಶೇಷ ಠಾಣೆ: ಪತ್ರ ಬರೆದ ಡಿಜಿ–ಐಜಿಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ (ಡಿಸಿಆರ್‌ಇ) ವಿಶೇಷ ಪೊಲೀಸ್ ಠಾಣೆ ಮಾನ್ಯತೆ ಲಭಿಸಿದ್ದು, ಹೊಸದಾಗಿ ಸ್ಥಾಪಿಸಿರುವ 33 ಪೊಲೀಸ್ ಠಾಣೆಗಳ ಕಾರ್ಯನಿರ್ವಹಣೆ ಕುರಿತು ಘಟಕದ ಮುಖ್ಯಸ್ಥರಿಗೆ (ಎಸ್.ಪಿ ಅಥವಾ ನಗರ ಪೊಲೀಸ್ ಕಮಿಷನರ್) ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಅವರು ಪತ್ರ ಬರೆದಿದ್ದಾರೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ನಿಯಮಗಳು–1995ರ ನಿಯಮ 7ರಂತೆ ಒಬ್ಬ ತನಿಖಾಧಿಕಾರಿಯನ್ನು ಘಟಕದ ಮುಖ್ಯಸ್ಥರು ನೇಮಿಸಬೇಕು. ಎಫ್‌ಐಆರ್ ನೋಂದಣಿ ಮಾಹಿತಿ ದೊರೆತ ತಕ್ಷಣವೇ ಪ್ರಧಾನ ಕಚೇರಿಗೂ ಮಾಹಿತಿ ನೀಡಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಎಸ್‌ಡಿಪಿಒಗಳು ನಡೆಸುತ್ತಿದ್ದ ದೌರ್ಜನ್ಯ ಪ್ರಕರಣಗಳ ತನಿಖೆಯನ್ನು ಡಿಸಿಆರ್‌ಇ ಪೊಲೀಸ್ ಠಾಣೆಗಳಿಗೆ ಹಸ್ತಾಂತರ ಮಾಡಲಾಗಿದೆ. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಯಾವುದೇ ವ್ಯಕ್ತಿಯಿಂದ ಅಕ್ರಮದ ಬಗ್ಗೆ ದೂರನ್ನು ಸ್ವೀಕರಿಸಿದಾಗ ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು ವಿಳಂಬ ಮಾಡದೇ ಎಫ್‌ಐಆರ್ ದಾಖಲಿಸಿಕೊಳ್ಳಬೇಕು. ಪ್ರಕರಣ ದಾಖಲಾದ ಮೇಲೆ ಪ್ರಕರಣದ ಸಂಪೂರ್ಣ ವಿವರಗಳಿರುವ ತುರ್ತು ವರದಿಯನ್ನು ತಮ್ಮ ಘಟಕದ ಮುಖ್ಯಸ್ಥರಿಗೆ, ಸಂಬಂಧಿತ ಡಿಸಿಆರ್‌ಇ ಪೊಲೀಸ್ ಠಾಣೆಗೆ ಹಾಗೂ ಡಿಸಿಆರ್‌ಇ ನಿಯಂತ್ರಣ ಕೊಠಡಿಗೆ ಕಳುಹಿಸಬೇಕು. ವರದಿಯ ಪ್ರತಿಯನ್ನು ಪೊಲೀಸ್ ಪ್ರಧಾನ ಕಚೇರಿ ಹಾಗೂ ಸಂಬಂಧಿತ ವಲಯಾಧಿಕಾರಿಗೆ ನಕಲು ರೂಪದಲ್ಲಿ ಕಳುಹಿಸಬೇಕು ಎಂದು ಪತ್ರದಲ್ಲಿ ವಿವರಿಸಲಾಗಿದೆ.

ಸಂತ್ರಸ್ತ ತಮ್ಮ ಅಹವಾಲನ್ನು ಸಾಮಾನ್ಯ ಪೊಲೀಸ್ ಠಾಣೆಗೆ ನೀಡಿದಾಗ ಪ್ರಭಾರದಲ್ಲಿರುವ ಅಧಿಕಾರಿ, ಆ ಅರ್ಜಿಯನ್ನು ವೈಯಕ್ತಿವಾಗಿ ಪರಿಶೀಲಿಸಬೇಕು. ಮುಂದಿನ ಕ್ರಮಕ್ಕೆ ಡಿಸಿಆರ್‌ಇ ಪೊಲೀಸ್ ಠಾಣೆಗೆ ರವಾನೆ ಮಾಡಬೇಕು ಎಂದು ಸೂಚನೆ ನೀಡಲಾಗಿದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದಂತೆ ಎಲ್ಲ ವಿಷಯಗಳ ಬಗ್ಗೆ ಘಟಕಾಧಿಕಾರಿಗಳು ಪೊಲೀಸ್ ಪ್ರಧಾನ ಕಚೇರಿ ಮತ್ತು ಡಿಸಿಆರ್‌ಇ ಮುಖ್ಯ ಕಚೇರಿಗೆ ನಿರಂತರವಾಗಿ ಮಾಹಿತಿ ಹಂಚಿಕೊಳ್ಳಬೇಕು ಎಂದು ಸಲೀಂ ಅವರು ನಿರ್ದೇಶನ ನೀಡಿದ್ದಾರೆ.

ತಾಯಿ, ಮಗಳು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯ ನಾಗಗೊಂಡನಹಳ್ಳಿಯ ಮನೆಯೊಂದರಲ್ಲಿ ತಾಯಿ ಹಾಗೂ ಮಗಳು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರಚಿತಾ ರೆಡ್ಡಿ ಹಾಗೂ ಅವರ ಪುತ್ರಿ ಶ್ರೀಜಾ ರೆಡ್ಡಿ (24) ಆತ್ಮಹತ್ಯೆ ಮಾಡಿಕೊಂಡವರು.

ಆಂಧ್ರ ಪ್ರದೇಶದ ರಚಿತಾ ರೆಡ್ಡಿ ಕುಟುಂಬವು ನಾಗಗೊಂಡನಹಳ್ಳಿಯಲ್ಲಿ ನೆಲಸಿತ್ತು. ಪುತ್ರಿ ಮಲಗಿದ್ದ ಕೊಠಡಿಗೆ ಸೋಮವಾರ ಬೆಳಿಗ್ಗೆ 10.30ರ ಸುಮಾರಿಗೆ ತಾಯಿ ತೆರಳಿ ನೋಡಿದಾಗ ಶ್ರೀಜಾ ರೆಡ್ಡಿ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡುಬಂತು. ಘಟನೆಯಿಂದ ಆಘಾತಕ್ಕೆ ಒಳಗಾದ ರಚಿತಾ ರೆಡ್ಡಿ ಅವರು ಕೆಲಸಕ್ಕೆ ತೆರಳಿದ್ದ ಪತಿ ಶ್ರೀನಿವಾಸ ರೆಡ್ಡಿ ಅವರಿಗೆ ಮಾಹಿತಿ ನೀಡಿದ್ದರು. ನಂತರ, ರಚಿತಾ ಅವರೂ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

'ಮರಣ ಪತ್ರವು ಸಿಕ್ಕಿದೆ. ಅದನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು. ವೈಟ್‌ಫೀಲ್ಡ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಯಾಳು ಸಾವು

ಚಿಂತಾಮಣಿ: ಬೆಂಗಳೂರು – ಮದನಪಲ್ಲಿ ರಸ್ತೆಯ ಐಮರೆಡ್ಡಿ ಹಳ್ಳಿ ಬಳಿ ಭಾನುವಾರ ರಾತ್ರಿ ಕಾರು ಚಾಲಕನ ನಿಯಂತ್ರಣ ತಪ್ಪಿ ಮೋರಿ ತಡೆಗೋಡೆಗೆ ಡಿಕ್ಕಿ ಹೊಡೆದು ಸಂಭವಿಸಿದ್ದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಐವರಲ್ಲಿ ಒಬ್ಬರು ಬೆಂಗಳೂರಿನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಚಿಕ್ಕಜಾಲ ಸಮೀಪದ ಮಾರನಾಯಕನಹಳ್ಳಿಯ ವೆಂಕಟೇಶ್(45) ಮೃತರು.

ಆಷಾಢ ಮಾಸದ ಅಂಗವಾಗಿ ನೆರೆಯ ಆಂಧ್ರಪ್ರದೇಶದ ಬಾಯಿಕೊಂಡಗೆ ಬೆಂಗಳೂರಿನಿಂದ ಕಾರಿನಲ್ಲಿ ತೆರಳಿ ಗಂಗಮ್ಮದೇವಿಯ ದರ್ಶನ ಮಾಡಿಕೊಂಡು ಬೆಂಗಳೂರಿಗೆ ವಾಪಸ್ ಹೋಗುವಾಗ ದುರ್ಘಟನೆ ನಡೆದಿತ್ತು. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಭೂಸ್ವಾಧೀನ: ಕಾನೂನು ತೊಡಕು ನಿವಾರಿಸಿ’

ಚನ್ನರಾಯಪಟ್ಟಣ ಹೋಬಳಿ ವ್ಯಾಪ್ತಿಯ ಭೂಸ್ವಾಧೀನದ ಅಂತಿಮ ಅಧಿಸೂಚನೆ ರದ್ದುಪಡಿಸಲಿ: ನಟ ಪ್ರಕಾಶ್ ರಾಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿ ವ್ಯಾಪ್ತಿಯ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಹೊರಡಿಸಿರುವ ಅಂತಿಮ ಅಧಿಸೂಚನೆ ರದ್ದುಪಡಿಸಲು ಇರುವ ಕಾನೂನಿನ ತೊಡಕುಗಳನ್ನು ನಿವಾರಿಸುವ ಕುರಿತು ಮಂಗಳವಾರ ನಡೆಯುವ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚರ್ಚಿಸಬೇಕು’ ಎಂದು ಚಿತ್ರನಟ ಪ್ರಕಾಶ್ ರಾಜ್ ಮನವಿ ಮಾಡಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಚನ್ನರಾಯ ಪಟ್ಟಣ ಸೇರಿದಂತೆ 13 ಹಳ್ಳಿಗಳ 1,777 ಎಕರೆ ಫಲವತ್ತಾದ ಜಮೀನು ಸ್ವಾಧೀನಕ್ಕೆ ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರ ಮುಂದಾಗಿತ್ತು. ಇದನ್ನು ವಿರೋಧಿಸಿ ನಡೆದ ಹೋರಾಟದಲ್ಲಿ ಆಗ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಭಾಗವಹಿಸಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಭೂಸ್ವಾಧೀನ ಪ್ರಕ್ರಿಯೆ ರದ್ದುಪಡಿಸುವ ಭರವಸೆ ನೀಡಿದ್ದರು. ಆದರೆ, ಈಗ ಸಿದ್ದರಾಮಯ್ಯ ನೇತೃತ್ವದ ಸರ್ಕಾರವೇ ಭೂಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಿರುವುದು ಸರಿಯಲ್ಲ’ ಎಂದು ಹೇಳಿದರು.

‘ಭೂಸ್ವಾಧೀನ ವಿರೋಧಿಸಿ ಜೂನ್ 25ರಂದು ನಡೆದ ದೇವನಹಳ್ಳಿ ಚಲೋ ಹೋರಾಟವನ್ನು ರಾಜ್ಯ ಸರ್ಕಾರ ಹತ್ತಿಕ್ಕುವ ಪ್ರಯತ್ನ ಮಾಡಿತು. ಇದನ್ನು ವಿರೋಧಿಸಿ, ಸಾಹಿತಿಗಳು, ರೈತ ಸಂಘಟನೆಗಳ ಹೋರಾಟಗಾರರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದರು. ಆಗ ಮಾತನಾಡಿದ್ದ ಸಿದ್ದರಾಮಯ್ಯ ಅಂತಿಮ ಅಧಿಸೂಚನೆಯನ್ನು ರದ್ದುಪಡಿಸಲು ಕಾನೂನಿನ ತೊಡಕುಗಳಿದ್ದು, ಈ ಕುರಿತು ಕಾನೂನು ತಜ್ಞರೊಂದಿಗೆ ಚರ್ಚಿಸಲು 10 ದಿನಗಳ ಕಾಲಾವಕಾಶ ಪಡೆದುಕೊಂಡಿದ್ದರು. ಆದರೆ, ಈಗ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಭೂಸ್ವಾಧೀನ ಮಾಡುತ್ತೇವೆ ಎಂದು ಹೇಳಿಕೆ ನೀಡುತ್ತಿರುವುದು ಎಷ್ಟು ಸರಿ’ ಎಂದು ಪ್ರಶ್ನಿಸಿದರು.

‘ಭೂಸ್ವಾಧೀನದ ವಿರುದ್ಧ ನಡೆಯುತ್ತಿರುವ ಚಳವಳಿಯಲ್ಲಿ ಒಡಕು ಮೂಡಿಸಲು ಸರ್ಕಾರ ಹತ್ತು ದಿನಗಳ ಕಾಲಾವಕಾಶ ಪಡೆದುಕೊಂಡಿತ್ತಾ? ಈ ಹತ್ತು ದಿನಗಳ ಮಧ್ಯದಲ್ಲಿ ಹೊಸದಾಗಿ ಹುಟ್ಟಿಕೊಂಡ ಕೆಲವು ದಲ್ಲಾಳಿಗಳು, ಅವರಿಗೆ ಬೇಕಾದಂತಹ ಪರಿಹಾರ ನಿಗದಿಪಡಿಸಿಕೊಳ್ಳುತ್ತಿದ್ದಾರೆ. ರೈತರು, ಬಡವರನ್ನು ದಾರಿ ತಪ್ಪಿಸುವ ಕೆಲಸವನ್ನು ಸರ್ಕಾರ ಕೈಬಿಡಬೇಕು’ ಎಂದರು.

ಎದ್ದೇಳು ಕರ್ನಾಟಕ ಕೇಂದ್ರ ಸಮಿತಿಯ ಸದಸ್ಯರಾದ ತಾರಾ ರಾವ್, ಕೆ.ಎಲ್. ಅಶೋಕ್, ಜೆ.ಎಂ. ವೀರಸಂಗಯ್ಯ ಸುದ್ದಿಗೋಷ್ಠಿಯಲ್ಲಿದ್ದರು.



ದೇವನಹಳ್ಳಿಯಲ್ಲಿ ಭೂಕಬಳಿಕೆ ವಿರುದ್ಧ ನಡೆಯುತ್ತಿರುವ ಬೀದಿ ಹೋರಾಟದ ಜೊತೆಗೆ ಕಾನೂನು ಹೋರಾಟವನ್ನು ಮುಂದುವರಿಸಲಾಗುವುದು

ಪ್ರಕಾಶ್ ರಾಜ್, ಚಲನಚಿತ್ರ ನಟ

13 ಹಳ್ಳಿ ರೈತರ ‘ಸಂಕಲ್ಪ ಸಮಾವೇಶ’

ದೇವನಹಳ್ಳಿ: ಭೂಸ್ವಾಧೀನ ವಿರೋಧಿಸಿ ರೈತರು ಸಾವಿರಕ್ಕೂ ಹೆಚ್ಚು ದಿನಗಳಿಂದ ನಡೆಸುತ್ತಿರುವ ಧರಣಿ ಸ್ಥಳದಲ್ಲಿ ಸೋಮವಾರ ನಡೆದ ‘ಗ್ರಾಮ ಸಂಕಲ್ಪ ಸಮಾವೇಶ’ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ ರೈತರ ಒಗ್ಗಟ್ಟು ಪ್ರದರ್ಶನಕ್ಕೆ ವೇದಿಕೆಯಾಯಿತು.

ಭೂಸ್ವಾಧೀನ ವಿರೋಧಿ ಹೋರಾಟ 1,197 ದಿನಕ್ಕೆ ಕಾಲಿಟ್ಟಿದ್ದು, ‘ಪ್ರಾಣ ಹೋದರೂ ಭೂಮಿ ಕೊಡುವುದಿಲ್ಲ’ ಎಂದು ರೈತರು ಘೋಷಿಸಿದರು. ಹೋರಾಟ ಅಂತಿಮ ಹಂತ ತಲುಪಿರುವಾಗ ಕೆಲವರು ಗೊಂದಲ ಸೃಷ್ಟಿಸಿದ್ದಾರೆ. ನಮ್ಮ ನಿರ್ಧಾರ ಅಚಲವಾಗಿದೆ ಎಂದು ಒಕ್ಕೊರಲಿನಿಂದ ಘೋಷಿಸಿದರು.

ಚನ್ನರಾಯಪಟ್ಟಣ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ 10 ದಿನಗಳಿಂದ ಈ ಭಾಗದಲ್ಲಿ ಗ್ರಾಮ ಸಭೆ ನಡೆಸಿದೆ. 13 ಹಳ್ಳಿಗಳ ಶೇ 73 ರಿಂದ ಶೇ 80ರಷ್ಟು ರೈತರು ಭೂಮಿ ಕೊಡುವುದಿಲ್ಲ ಎಂದು ಪ್ರತಿಭಟನಾ ಪತ್ರಕ್ಕೆ ಸಹಿ ಹಾಕಿದ್ದಾರೆ.



ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಧರಣಿ ಸ್ಥಳದಲ್ಲಿ ನಡೆದ ‘ಗ್ರಾಮ ಸಂಕಲ್ಪ ಸಮಾವೇಶ’ದಲ್ಲಿ ವಿವಿಧ ಸಂಘಟನೆಯ ರಾಜ್ಯ ನಾಯಕರು ಭಾಗಿಯಾಗಿ ಒಗ್ಗಟ್ಟು ಪ್ರದರ್ಶನ ಮಾಡಿದರು

‘ಹೈಕಮಾಂಡ್ ಮಧ್ಯಪ್ರವೇಶಕ್ಕೆ ಒತ್ತಾಯ’

ದೇವನಹಳ್ಳಿಯಲ್ಲಿನ ಬಲವಂತದ ಭೂಸ್ವಾಧೀನದ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಮಧ್ಯಪ್ರವೇಶ ಮಾಡಬೇಕು. ರಾಜ್ಯ ಸರ್ಕಾರ ರೈತರ ಪರವಾಗಿ ಧೃಡ ನಿಲುವು ತೆಗೆದುಕೊಳ್ಳಲು ಸಹಕಾರಿಯಾಗಬೇಕು ಎಂದು ಸಂಯುಕ್ತ ಹೋರಾಟ–ಕರ್ನಾಟಕ ಆಗ್ರಹಿಸಿದೆ.

ಈ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿರುವ ಸಂಯುಕ್ತ ಹೋರಾಟ–ಕರ್ನಾಟಕ, ‘ರೈತರ ಪರವಾದ ನಿಲುವು ತೆಗೆದುಕೊಳ್ಳುವಂತೆ ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ಸೂಚಿಸಬೇಕು’ ಎಂದು ಒತ್ತಾಯಿಸಿದೆ.

‘ಈ ಭೂಸ್ವಾಧೀನ ಪ್ರಕ್ರಿಯೆಯ ಅಂತಿಮ ಅಧಿಸೂಚನೆ ರದ್ದುಪಡಿಸಲು ಕಾನೂನು ಸಲಹೆಗಳನ್ನು ಪಡೆಯಲು ಸರ್ಕಾರ ಏನು ಪ್ರಯತ್ನ ನಡೆಸುತ್ತಿದೆಯೋ ಗೊತ್ತಿಲ್ಲ. ಆದರೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಹೋರಾಟಗಾರರನ್ನು ಲೇವಡಿ ಮಾಡಿರುವುದು ಮಾತ್ರವಲ್ಲದೆ, ದೇವನಹಳ್ಳಿಯ ಜಮೀನುಗಳನ್ನು ಸ್ವಾಧೀನದಿಂದ ಕೈಬಿಡುವ ಪ್ರಶ್ನೆಯೇ ಇಲ್ಲ ಎಂಬ ಹೇಳಿಕೆ ನೀಡುತ್ತಿದ್ದಾರೆ’ ಎಂದು ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ದಲಿತ ಸಂಘರ್ಷ ಸಮಿತಿಯ ಇಂದೂಧರ ಹೊನ್ನಾಪುರ, ಸಿಐಟಿಯುನ ಎಸ್. ವರಲಕ್ಷ್ಮಿ ಸೇರಿದಂತೆ ಹಲವು ಸಂಘಟನೆಗಳ ಮುಖಂಡರು ದೂರಿದ್ದಾರೆ.

‘ದೇಶದ ಹಲವಾರು ರೈತ ಸಂಘಟನೆಗಳು ಈ ಚಳವಳಿಗೆ ಬೆಂಬಲ ಸೂಚಿಸಿವೆ. ರಾಜ್ಯ ಸರ್ಕಾರ, ಕಾಂಗ್ರೆಸ್ ಹೈಕಮಾಂಡ್ ಬಗ್ಗೆ ಪೂರ್ಣ ವಿಶ್ವಾಸ ಕಳೆದುಕೊಳ್ಳದೆ, ಸಕಾರಾತ್ಮಕ ತೀರ್ಮಾನ ಹೊರಬರುತ್ತದೆ ಎಂದು ಕಾಯುತ್ತಿದ್ದೇವೆ. ನಮ್ಮೆಲ್ಲಾ ನಿರೀಕ್ಷೆಗಳು ಹುಸಿಯಾಗಿ, ರೈತರ ಹಿತಕ್ಕೆ ವಿರುದ್ಧವಾಗಿ ಕಂಪನಿಗಳ ಪರ ನಿಲುವನ್ನೇ ಸರ್ಕಾರ ತೆಗೆದುಕೊಂಡರೆ ಈ ಚಳವಳಿ ಅಖಿಲ ಭಾರತ ಸ್ವರೂಪ ಪಡೆದುಕೊಳ್ಳಬಹುದು. ದೆಹಲಿಗೂ ತಲುಪಬಹುದು’ ಎಂದು ಎಚ್ಚರಿಕೆ ನೀಡಿದ್ದಾರೆ.

ಸುದ್ದಿ 2 ನಿಮಿಷ

‘ಧರ್ಮಸ್ಥಳ: ಮಹಿಳೆಯರ ನಾಪತ್ತೆ ತನಿಖೆಗೆ ಎಸ್ಐಟಿ ರಚಿಸಿ’

ಬೆಂಗಳೂರು: ‘ಧರ್ಮಸ್ಥಳ ವ್ಯಾಪ್ತಿಯಲ್ಲಿ 20 ವರ್ಷಗಳಿಂದ ನಾಪತ್ತೆ ಆಗಿರುವ ಮಹಿಳೆಯರು, ವಿದ್ಯಾರ್ಥಿನಿಯರು, ಅಸ್ವಾಭಾವಿಕ ಸಾವು, ಕೊಲೆ ಹಾಗೂ ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಲು ವಿಶೇಷ ತನಿಖಾ ತಂಡ (ಎಸ್ಐಟಿ) ರಚಿಸಬೇಕು’ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ‘ಧರ್ಮಸ್ಥಳದ ಸುತ್ತಮುತ್ತ ನೂರಾರು ಶವಗಳನ್ನು ಹೂತಿರುವುದಾಗಿ ವ್ಯಕ್ತಿಯೊಬ್ಬರು ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ್ದಾರೆ. ಈ ಭಾಗದಲ್ಲಿ ನಾಪತ್ತೆಯಾದ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬರ ಕುಟುಂಬದವರ ಹೇಳಿಕೆಗಳು ಮಾಧ್ಯಮಗಳಲ್ಲಿ ಪ್ರಸಾರವಾಗಿವೆ. 20 ವರ್ಷಗಳಲ್ಲಿ ಹಲವು ಗಂಭೀರ ಸ್ವರೂಪದ ದೌರ್ಜನ್ಯ, ಹತ್ಯೆ, ಅತ್ಯಾಚಾರದಂತಹ ಪ್ರಕರಣಗಳು ನಡೆದಿವೆ. ನಾಪತ್ತೆ, ಕೊಲೆಯಾದವರ ಕುಟುಂಬಸ್ಥರು ಪ್ರಕರಣಗಳನ್ನು ದಾಖಲಿಸಲು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಸರಿಯಾಗಿ ಸ್ಪಂದಿಸಿಲ್ಲ ಎಂಬ ಆರೋಪವಿದೆ’ ಎಂದು ಉಲ್ಲೇಖಿಸಿದ್ದಾರೆ.

ಏಳು ದಿನಗಳಲ್ಲಿ ಮಾಹಿತಿ ನೀಡಿ: ‘ಧರ್ಮಸ್ಥಳದ ವ್ಯಾಪ್ತಿಯಲ್ಲಿ 20 ವರ್ಷಗಳಿಂದ ಎಷ್ಟು ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ನಾಪತ್ತೆಯಾಗಿದ್ದಾರೆ. ಇದರಲ್ಲಿ ಎಷ್ಟು ಮಂದಿಯನ್ನು ಪತ್ತೆ ಮಾಡಲಾಗಿದೆ? ಅಸ್ವಾಭಾವಿಕ ಸಾವು, ಕೊಲೆ ಪ್ರಕರಣಗಳಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ. ಎಷ್ಟು ಅತ್ಯಾಚಾರ ಪ್ರಕರಣಗಳು ನಡೆದಿವೆ ಎಂಬ ವಿವರವನ್ನು ಏಳು ದಿನಗಳಲ್ಲಿ ನೀಡುವಂತೆ ದಕ್ಷಿಣ ಕನ್ನಡ ಜಿಲ್ಲೆಯ ಎಸ್‌ಪಿಗೆ ಸೂಚಿಸಲಾಗಿದೆ’ ಎಂದು ನಾಗಲಕ್ಷ್ಮಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಭೆ ಇಂದಿನಿಂದ

ಬೆಂಗಳೂರು: ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ಸಭೆ ಜುಲೈ 15ರಿಂದ 16ರವರೆಗೆ ನಗರದಲ್ಲಿ ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿಗಳು, ವಿವಿಧ ರಾಜ್ಯಗಳ ಹಾಲಿ ಮತ್ತು ಮಾಜಿ ಸಚಿವರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಜುಲೈ 15ರಂದು ಸಂಜೆ 5 ಗಂಟೆಗೆ ಕೆಪಿಸಿಸಿ ಕಚೇರಿಯಲ್ಲಿ ಮತ್ತು ಜುಲೈ 16ರಂದು ಬೆಳಿಗ್ಗೆ 10 ಗಂಟೆಗೆ ಹೋಟೆಲ್ ಶಾಂಗ್ರಿಲಾದಲ್ಲಿ ಸಭೆ ನಡೆಯಲಿದೆ.

ದೇಶದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಪರಿಹಾರ ಒದಗಿಸಲು ಕಾರ್ಯತಂತ್ರ ರೂಪಿಸುವ ಉದ್ದೇಶದಿಂದ ಈ ಮಂಡಳಿಯನ್ನು ಎಐಸಿಸಿ ರಚಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಮಂಡಳಿಯ ರಚನೆಗೆ ಅನುಮೋದನೆ ನೀಡಿದ್ದರು. ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಮತ್ತು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ನಾಲ್ವರು ಮಾಜಿ ಮುಖ್ಯಮಂತ್ರಿಗಳು ಸೇರಿ ಒಟ್ಟು 24 ಮಂದಿ ಈ ಮಂಡಳಿಯ ಸದಸ್ಯರು.

ರಾಜ್ಯದಿಂದ ಸಚಿವರಾದ ಬೈರತಿ ಸುರೇಶ್, ಮಧು ಬಂಗಾರಪ್ಪ, ಸಂತೋಷ್ ಲಾಡ್, ಎನ್.ಎಸ್. ಬೋಸರಾಜು, ಮಂಕಾಳ ವೈದ್ಯ, ಎಐಸಿಸಿ ಕಾರ್ಯದರ್ಶಿಗಳಾದ ಸೂರಜ್ ಹೆಗ್ಡೆ, ಪಿ.ವಿ. ಮೋಹನ್ ಸೇರಿದಂತೆ ಒಟ್ಟು 25 ಮಂದಿ ಭಾಗವಹಿಸಲಿದ್ದಾರೆ.

ದೇವನಹಳ್ಳಿ ಭೂಸ್ವಾಧೀನ ಮುಖ್ಯಮಂತ್ರಿ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿ ವ್ಯಾಪ್ತಿಯಲ್ಲಿನ ಭೂಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವ ರೈತರು, ರೈತ ಸಂಘದ ಮುಖಂಡರು, ಹೋರಾಟಗಾರರ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ (ಜುಲೈ 15) ಸಭೆ ನಡೆಸಲಿದ್ದಾರೆ.

ಅತ್ಯಾಧುನಿಕ ರಕ್ಷಣಾ ಮತ್ತು ವೈಮಾಂತರಿಕ್ಷ ಪಾರ್ಕ್ ಸ್ಥಾಪನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ 13 ಗ್ರಾಮಗಳ ವ್ಯಾಪ್ತಿಯ 1,777 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು 2021ರಲ್ಲಿ ಪ್ರಾಥಮಿಕ ಅಧಿಸೂಚನೆ, 2022ರಲ್ಲಿ ಅಂತಿಮ ಆದೇಶ ಹೊರಡಿಸಲಾಗಿತ್ತು. ಭೂಸ್ವಾಧೀನ ವಿರೋಧಿಸಿ ಅಂದಿನಿಂದಲೂ ರೈತರು ಹೋರಾಟ ಮಾಡುತ್ತಾ ಬಂದಿದ್ದಾರೆ.

ಚನ್ನರಾಯಪಟ್ಟಣ, ಮಟ್ಟಬಾರ್ಲು ಮತ್ತು ಶ್ರೋತ್ರೀಯ ತೆಲ್ಲೋಹಳ್ಳಿಗಳಲ್ಲಿನ ನೀರಾವರಿ, ಕೃಷಿ ಮತ್ತು ಜನವಸತಿಗಳನ್ನು ಪರಿಗಣಿಸಿ, 231.23 ಎಕರೆ, 185.18 ಎಕರೆ ಮತ್ತು 78.21 ಎಕರೆ ಸೇರಿ 495 ಎಕರೆ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವುದಾಗಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಜೂನ್ 24ರಂದು ಘೋಷಿಸಿದ್ದರು. ಆದರೆ, ರೈತರು ಸರ್ಕಾರದ ನಿರ್ಧಾರವನ್ನು ಒಪ್ಪದೇ ಎಲ್ಲ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಂತೆ ಆಗ್ರಹಿಸಿ ಸಂಯುಕ್ತ ಹೋರಾಟ–ಕರ್ನಾಟಕದ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ರೈತರು ಹೋರಾಟ ಮುಂದುವರಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 5ರಂದು ರೈತ ಸಂಘದ ಮುಖಂಡರು, ಹೋರಾಟಗಾರರು, ಸ್ಥಳೀಯ ರೈತರ ಸಭೆ ಕರೆದಿದ್ದರು. ಕಾನೂನು ತೊಡಕುಗಳಿದ್ದು, ತಜ್ಞರ ಅಭಿಪ್ರಾಯ ಪಡೆದು ತೀರ್ಮಾನ ಕೈಗೊಳ್ಳಲು 10 ದಿನಗಳ ಸಮಯ ಕೇಳಿದ್ದರು. ನಿಗದಿಯಂತೆ ಸಭೆ ಮಂಗಳವಾರ ನಡೆಯಲಿದೆ.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ‘ಕೃಷಿ ಮತ್ತು ಕೈಗಾರಿಕೆ ಎರಡನ್ನೂ ಸರಿದೂಗಿಸಿಕೊಂಡು ಹೋಗಬೇಕು ಎನ್ನುವುದು ಸರ್ಕಾರದ ಕಳಕಳಿ. ಸಿದ್ದರಾಮಯ್ಯ ಅವರು ಸಭೆಯಲ್ಲಿ ಚರ್ಚಿಸಿ, ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ’ ಎಂದಿದ್ದಾರೆ.

ಶಾಸಕರ ಆರೋಪ– ದೂರುಗಳಿಗೆ ಉತ್ತರ ಪಡೆದ ಕಾಂಗ್ರೆಸ್ ಉಸ್ತುವಾರಿ

ಸಚಿವರ ಮೌಲ್ಯಮಾಪನ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಪಕ್ಷೀಯ ಶಾಸಕರು ಸರ್ಕಾರದ ಕಾರ್ಯವೈಖರಿಗೆ ಅಸಮಾಧಾನ, ಬೇಡಿಕೆಗಳಿಗೆ ಸ್ಪಂದಿಸದ ಸಚಿವರ ವಿರುದ್ಧ ಆಕ್ರೋಶ ಹೊರಹಾಕಿರುವ ಬೆನ್ನಲ್ಲೆ, ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಸಚಿವರ ‘ಮೌಲ್ಯಮಾಪನ’ ಆರಂಭಿಸಿದ್ದಾರೆ. ಶಾಸಕರ ಆರೋಪ– ದೂರುಗಳಿಗೆ ಸಂಬಂಧಿಸಿದಂತೆ ವಿವರಣೆ ಪಡೆದಿದ್ದಾರೆ.

ಸಚಿವರಾದ ಬಿ.ಜೆಡ್. ಜಮೀರ್ ಅಹಮದ್‌ಖಾನ್, ಬೈರತಿ ಸುರೇಶ್, ರಹೀಂ ಖಾನ್ ಜೊತೆ ಸುರ್ಜೇವಾಲಾ ಅವರು ಸೋಮವಾರ ಕೆಪಿಸಿಸಿ ಕಚೇರಿಯಲ್ಲಿ ಚರ್ಚೆ ನಡೆಸಿದರು. ಸಚಿವರ ಜೊತೆ ಮಂಗಳವಾರವೂ ಅವರು ಸಭೆ ನಡೆಸಲಿದ್ದಾರೆ.

ಶಾಸಕರು ಮಾಡಿದ್ದ ಆರೋಪಗಳ ಪಟ್ಟಿಯನ್ನು ಸಚಿವರ ಮುಂದಿಟ್ಟ ಸುರ್ಜೇವಾಲಾ, ‘ನಿಮ್ಮ ಇಲಾಖೆಗೆ ಸಂಬಂಧಿಸಿದಂತೆ ಹಲವು ಶಾಸಕರು ದೂರು ನೀಡಿದ್ದಾರೆ. ಯಾವುದೇ ಪತ್ರಕ್ಕೂ ಮಾನ್ಯತೆ ನೀಡುತ್ತಿಲ್ಲ, ಯಾವ ಕೆಲಸಗಳನ್ನೂ ಮಾಡಿಕೊಡುವುದಿಲ್ಲ, ಕರೆ ಮಾಡಿದರೂ ಸ್ಪಂದಿಸುವುದಿಲ್ಲ ಎಂದು ಆರೋಪಿಸಿದ್ದಾರೆ’ ಎಂದು ನೇರವಾಗಿ ಹೇಳಿದ್ದಾರೆ. ಸುರ್ಜೇವಾಲಾ ಅವರ ಪ್ರಶ್ನೆಗಳಿಗೆ ಸಚಿವರು ತಬ್ಬಿಬ್ಬಾಗಿದ್ದಾರೆ ಎಂದು ಗೊತ್ತಾಗಿದೆ.

‘ಶಾಸಕರ ಅಹವಾಲುಗಳಿಗೆ ಆದ್ಯತೆ ನೀಡುತ್ತಿದ್ದೇವೆ. ಬೇಡಿಕೆಗಳಿಗೂ ಸ್ಪಂದಿಸುತ್ತಿದ್ದೇವೆ. ದೂರುಗಳಿದ್ದರೆ ಬಗೆಹರಿಸುತ್ತೇವೆ’ ಎಂದು ಬೈರತಿ ಸುರೇಶ್ ಮತ್ತು ಜಮೀರ್ ಅಹಮದ್‌ಖಾನ್ ಭರವಸೆ ನೀಡಿದ್ದಾರೆ ಎಂದೂ ಗೊತ್ತಾಗಿದೆ.

‘ಸುರ್ಜೇವಾಲಾ ಜೊತೆ ಕೆಲವು ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇನೆ. ನನ್ನ ಇಲಾಖೆಯ ಕಾರ್ಯವೈಖರಿ ಬಗ್ಗೆ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದ್ದೇನೆ. ಹೊಸತಾಗಿ ಇಂದಿರಾ ಕ್ಯಾಂಟೀನ್‌ಗಳ ನಿರ್ಮಾಣ, ‘ಎ’ ಖಾತೆ ‘ಬಿ’ ಖಾತೆಗಳ ಬಗ್ಗೆ ಚರ್ಚೆ ಆಗಿದೆ. ಬಡವರಿಗೆ ಅನುಕೂಲ ಆಗುವ ಯೋಜನೆಗಳನ್ನು ರೂಪಿಸುವಂತೆ ಅವರು ಸಲಹೆ ನೀಡಿದ್ದಾರೆ’ ಎಂದು ರಹೀಂ ಖಾನ್ ಹೇಳಿದರು.

‘ರಸ್ತೆ, ಮೂಲಸೌಕರ್ಯ ಸೇರಿದಂತೆ ಸಣ್ಣಪುಟ್ಟ ಸಮಸ್ಯೆಗಳಿದ್ದರೂ ಬಗೆಹರಿಸುವಂತೆ ಸಲಹೆ ನೀಡಿದ್ದಾರೆ. ನನ್ನ ಕೆಲಸದ ಬಗ್ಗೆ ಸಮಾಧಾನವಿದೆ ಎಂದಿದ್ದಾರೆ. ನಾನೇ ಕರೆ ಮಾಡಿ, ಕ್ಷೇತ್ರದಲ್ಲಿ ಸಮಸ್ಯೆಗಳಿದ್ದರೆ ತಿಳಿಸುವಂತೆ ಶಾಸಕರಿಗೆ ಹೇಳುತ್ತೇನೆ’ ಎಂದರು.

ದೂರುಗಳ ಬಗ್ಗೆ ಚರ್ಚೆ ಮಾಡಿಲ್ಲ: ‘ಶಾಸಕರು ದೂರು ಕೊಟ್ಟಿರಬಹುದು. ಆದರೆ, ಈ ಬಗ್ಗೆ ನನ್ನ ಜೊತೆ ಸುರ್ಜೇವಾಲಾ ಅವರು ಚರ್ಚೆ ಮಾಡಿಲ್ಲ. ನನ್ನ ಇಲಾಖೆಯ ಕೆಲಸಗಳ ಬಗ್ಗೆ ಮತ್ತು ಹೊಸ ಯೋಜನೆಗಳ ಕುರಿತು ವಿವರಣೆ ಕೇಳಿದರು’ ಎಂದು ಬೈರತಿ ಸುರೇಶ್ ವಿವರಿಸಿದರು.



ಸಚಿವರೂ ಶಾಸಕರೇ. ಹೀಗಾಗಿ, ಅವರ ಜೊತೆಯಲ್ಲೂ ಸಭೆ ನಡೆಸುತ್ತಿದ್ದೇನೆ. ಶಾಸಕರ ಕೆಲವು ಬೇಡಿಕೆಗಳ ಬಗ್ಗೆ ಸಚಿವರ ಜೊತೆ ಚರ್ಚೆ ಮಾಡುತ್ತೇನೆ

ರಣದೀಪ್ ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ

‘ನಂಬರ್ ಒನ್ ಸಚಿವನೆಂಬ ಪ್ರಶಸ್ತಿ’

‘ಶಾಸಕರ ಕ್ಷೇತ್ರಗಳಿಗೆ ಮನೆಗಳ ಹಂಚಿಕೆ ಬಗ್ಗೆ ಚರ್ಚೆಯಾಯಿತು. ಶಾಸಕರು ಕೊಟ್ಟಿರುವ ಬೇಡಿಕೆಗಳ ಪಟ್ಟಿಯನ್ನು ಸುರ್ಜೇವಾಲಾ ನನಗೆ ಕೊಟ್ಟಿದ್ದಾರೆ. ನೀವು ನಂಬರ್ ಒನ್ ಸಚಿವ. ಪ್ರಶಸ್ತಿ ಕೊಡುವುದಾದರೆ ನಿಮಗೇ ಕೊಡಬೇಕು ಎಂದಿದ್ದಾರೆ. ಅವರ ಮಾತಿನಿಂದ ಖುಷಿಯಾಗಿದೆ’ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಯಾವ ಶಾಸಕರೂ ನನ್ನ ಮೇಲೆ ಆರೋಪ ಮಾಡಿಲ್ಲ. ಸುರ್ಜೇವಾಲಾ ಎಂದೂ ಸುಳ್ಳು ಹೇಳುವುದಿಲ್ಲ. ತಪ್ಪು ಇದ್ದರೆ ತಪ್ಪು ಎಂದೇ ಹೇಳುತ್ತಾರೆ. ಶಾಸಕರು ಮನೆ ಕೊಡಿ ಎಂದು ಬೇಡಿಕೆ ಇಟ್ಟಿದ್ದಾರೆ. ಸಮ್ಮಿಶ್ರ ಸರ್ಕಾರದ ಅವಧಿಯಲ್ಲೂ ಮನೆ ಕೊಟ್ಟಿಲ್ಲ. ಬಿಜೆಪಿ ಸರ್ಕಾರ ಕೂಡಾ ಒಂದೇ ಒಂದು ಮನೆ ಕೊಟ್ಟಿಲ್ಲ. ನಮ್ಮ ಬಳಿಯೂ ಗುರಿ ಇಲ್ಲ. ನಾವು ಕೂಡಾ ಎರಡು ವರ್ಷಗಳಿಂದ ಮನೆಗಳ ಹಂಚಿಕೆ ಮಾಡಿಲ್ಲ’ ಎಂದರು.

‘ಮುಂದಿನ ವರ್ಷ ಮನೆಗಳ ಹಂಚಿಕೆ ಮಾಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಮನೆ ನಿರ್ಮಾಣಕ್ಕೆ ₹1.20 ಲಕ್ಷ ಸಾಲುವುದಿಲ್ಲ. ಹೀಗಾಗಿ, ಅದನ್ನು ₹3.50 ಲಕ್ಷಕ್ಕೆ ಹೆಚ್ಚಿಸಿದ್ದೇವೆ. ಶಾಸಕ ಬಿ.ಆರ್. ಪಾಟೀಲ ಆರೋಪ ಮಾಡಿರುವ ವಿಚಾರದ ಪ್ರಸ್ತಾಪ ಆಗಿಲ್ಲ’ ಎಂದರು.

ದಕ್ಷಿಣ ಕನ್ನಡದಲ್ಲಿ ಧಾರಾಕಾರ ಮಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾನುವಾರ ತಡರಾತ್ರಿ ಪ್ರಾರಂಭವಾದ ಮಳೆ ಅಬ್ಬರ ಸೋಮವಾರ ಮಧ್ಯಾಹ್ನದವರೆಗೂ ಮುಂದುವರಿಯಿತು.

ಜಿಲ್ಲೆಯ ಗ್ರಾಮೀಣ ಪ್ರದೇಶ ಹಾಗೂ ಮಂಗಳೂರು ನಗರದಲ್ಲಿ ಸೋಮವಾರ ಮಧ್ಯಾಹ್ನದವರೆಗೆ ಎಡೆಬಿಡದೆ ಸುರಿದ ಮಳೆ, ಮಧ್ಯಾಹ್ನದ ನಂತರ ಕೊಂಚ ತಗ್ಗಿತು. ಅರಬ್ಬಿ ಸಮುದ್ರದಲ್ಲಿ 45ರಿಂದ 55 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ. ನಾಡದೋಣಿ ಮೀನುಗಾರರು ಸಮುದ್ರಕ್ಕೆ ತೆರಳಬಾರದು ಎಂದು ಭಾರತೀಯ ಹವಾಮಾನ ಇಲಾಖೆ ಸೂಚನೆ ನೀಡಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	122.58	15,958	13,321
ಹಾರಂಗಿ	2,859	2,854.03	3,812	3,000
ಕಬಿನಿ	2,284.00	2,281.59	9,880	12,000
ಹೇಮಾವತಿ	2,922	2,920.90	7,561	6,600
ಲಿಂಗನಮಕ್ಕಿ	1,819	1,800.25	25,051	6,233
ಸೂಪಾ (ಮೀ)	564	544.60	13,244.41	5,568.61
ಮಾಣಿ	595	586.90	2,469	821
ತುಂಗಭದ್ರಾ	1,633	1,625.49	43,223	36,345
ಮಲಪ್ರಭಾ	2,079.5	2,070.90	4,000	194
ಘಟಪ್ರಭಾ	2175	2,167.75	7,386	893
ಭದ್ರಾ *	186	176	9,735	161
ಆಲಮಟ್ಟಿ (ಮೀ)	519.6	517.84	63,859	22,818
ನಾರಾಯಣಪುರ (ಮೀ)	492.25	491.31	21,000	6,000

* ನೆಲಮಟ್ಟದಿಂದ

ಜಿಲ್ಲಾ ಕೇಂದ್ರದ ಸಮೀಪದ ಗ್ರಾಮಕ್ಕಿಲ್ಲ ಸ್ಮಶಾನ; ಆಕ್ರೋಶ

ಶಾಲೆ ಅಂಗಳದಲ್ಲೇ ಅಂತ್ಯಕ್ರಿಯೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲಾ ಕೇಂದ್ರದ ಸಮೀಪದಲ್ಲಿರುವ ಮಂಗಳಾಪುರದಲ್ಲಿ ಶವ ಸಂಸ್ಕಾರಕ್ಕೆ ಜಾಗವಿಲ್ಲದ ಕಾರಣ ಶಾಲೆಯ ಆವರಣದಲ್ಲಿಯೇ ಶವಸಂಸ್ಕಾರಕ್ಕೆ ಸಿದ್ಧತೆ ಮಾಡಿಕೊಂಡು ಗ್ರಾಮಸ್ಥರು ಸೋಮವಾರ ತಾಲ್ಲೂಕು ಆಡಳಿತದ ವಿರುದ್ಧ ಆಕ್ರೋಶ ಹೊರಹಾಕಿದರು.

ಸಾವಂತ್ರಮ್ಮ ಮೆಳ್ಳಿಕೇರಿ (80) ಎಂಬ ಮಹಿಳೆ ಮೃತಪಟ್ಟಿದ್ದು, ಹಿಂದೂಗಳ ಅಂತಿಮ ಸಂಸ್ಕಾರ ಸಲ್ಲಿಸಲು ಜಾಗ ಇಲ್ಲದಿರುವುದರಿಂದ ಕುಟುಂಬಸ್ಥರು ಅಂತ್ಯಕ್ರಿಯೆಗೆ ಪರದಾಡುವಂತಾಯಿತು.

ಸ್ಮಶಾನ ಸೌಲಭ್ಯ ಕಲ್ಪಿಸುವಂತೆ ಅನೇಕ ಬಾರಿ ಮನವಿ ಮಾಡಿದ್ದರೂ ಬೇಡಿಕೆ ಈಡೇರಿರಲಿಲ್ಲ. ಸಾವಂತ್ರಮ್ಮ ಅವರಿಗೆ ಯಾವುದೇ ಜಮೀನು ಇಲ್ಲದ ಕಾರಣ ಅನಿವಾರ್ಯವಾಗಿ ರಸ್ತೆ ಮಧ್ಯದಲ್ಲಿಯೇ ಅಂತ್ಯಕ್ರಿಯೆಗೆ ಸಿದ್ಧತೆ ನಡೆಸಿದರು.

ಗ್ರಾಮಸ್ಥರು ಶಾಲೆ ಮುಂಭಾಗದ ರಸ್ತೆಯಲ್ಲಿ ಕಟ್ಟಿಗೆ ಜೋಡಿಸಿ ಅಂತ್ಯಕ್ರಿಯೆ ಮಾಡುವುದಾಗಿ ಪಟ್ಟು ಹಿಡಿದಾಗ ಕೊಪ್ಪಳ ತಹಶೀಲ್ದಾರ್ ವಿಠ್ಠಲ ಚೌಗುಲಾ ಹಾಗೂ ಪೊಲೀಸರು ಗ್ರಾಮಕ್ಕೆ ದೌಡಾಯಿಸಿದರು.

‘ಶವ ಸಂಸ್ಕಾರಕ್ಕೆ ಜಾಗವಿಲ್ಲ. ಹಲವು ಬಾರಿ ಮನವಿ ಮಾಡಿದರೂ ಸ್ಪಂದಿಸಿಲ್ಲ. ಈಗ ಬಂದು ಸಮಾಧಾನ ಮಾಡಬೇಡಿ’ ಎಂದು ಗ್ರಾಮಸ್ಥರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಕೆಲ ಹೊತ್ತು ಮಾತಿನ ಚಕಮಕಿಯೂ ನಡೆಯಿತು.

ಅಧಿಕಾರಿಗಳು ಹಾಗೂ ಪೊಲೀಸರ ಮನವೊಲಿಕೆ ಬಳಿಕ ಹಳ್ಳಕ್ಕೆ ತೆರಳುವ ರಸ್ತೆಯ ಬದಿಯಲ್ಲಿ ಅಂತಿಮ ಸಂಸ್ಕಾರ ನೆರವೇರಿಸಲಾಯಿತು.



ಕೊಪ್ಪಳ ತಾಲ್ಲೂಕಿನ ಮಂಗಳಾಪುರ ಗ್ರಾಮದಲ್ಲಿ ಸೋಮವಾರ ರಸ್ತೆಯ ಮಧ್ಯದಲ್ಲಿಯೇ ಅಂತಿಮ ಸಂಸ್ಕಾರಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು

ಗ್ರಾಮದ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗವಿಲ್ಲದ ಕಾರಣ ಸಮಸ್ಯೆ ಆಗಿದೆ. ಖಾಸಗಿ ಜಮೀನು ಖರೀದಿಗೆ ಪ್ರಸ್ತಾವ ಸಲ್ಲಿಸಲಾಗಿದೆ. ಆದಷ್ಟು ಬೇಗನೆ ಸ್ಮಶಾನ ಜಾಗಕ್ಕೆ ವ್ಯವಸ್ಥೆ ಮಾಡಲಾಗುವುದು.

ವಿಠ್ಠಲ ಚೌಗುಲಾ, ಕೊಪ್ಪಳ ತಹಶೀಲ್ದಾರ್

ಶುಶ್ರೂಷಕರ ನೋಂದಣಿಗೆ ‘ವಿಶೇಷ ಡಿಜಿ ಲಾಕರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲೇ ಮೊದಲ ಬಾರಿಗೆ ಶುಶ್ರೂಷಕರ ನೋಂದಣಿಗೆ ‘ವಿಶೇಷ ಡಿಜಿ ಲಾಕರ್ ತಂತ್ರಜ್ಞಾನ’ವನ್ನು ಅಳವಡಿಸಿಕೊಳ್ಳಲಾಗುತ್ತಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ ಹೇಳಿದ್ದಾರೆ.

ಯುಐಡಿಎಐ, ಸಿ-ಇಜಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ ಅಭಿವೃದ್ಧಿಪಡಿಸಿರುವ ವಿಶೇಷ ಡಿಜಿ ಲಾಕರ್ ತಂತ್ರಜ್ಞಾನದ ಮೂಲಕ ಆಧಾರ್, ಡಿಜಿ ಲಾಕರ್ ಇ-ಕೆವೈಸಿ ಮೂಲಕ ನೋಂದಣಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತದೆ. ಈ ತಂತ್ರಜ್ಞಾನವನ್ನು ಜುಲೈ 15ರಿಂದ ಜಾರಿ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಆಧಾರ್ ಇ-ಕೆವೈಸಿಯಿಂದ ಶುಶ್ರೂಷಕರ ವೈಯಕ್ತಿಕ ದತ್ತಾಂಶ, ವಿಳಾಸ, ಭಾವಚಿತ್ರ ಹಾಗೂ ಇತರೆ ಮಾಹಿತಿಗಳನ್ನು ನೇರವಾಗಿ ಕರ್ನಾಟಕ ಶುಶ್ರೂಷಾ ಪರಿಷತ್ ಪಡೆದುಕೊಳ್ಳಲಿದೆ. ರಾಜ್ಯ ಮತ್ತು ಹೊರ ರಾಜ್ಯದ ಶುಶ್ರೂಷಕರ ಸಮೂಹ ನೋಂದಣಿ ಮಾಡಿಸಿಕೊಳ್ಳಲು ಬೆಂಗಳೂರಿಗೆ ಕೇಂದ್ರ ಕಚೇರಿಗೆ ಬರುತ್ತಿದ್ದಾರೆ. ಊಟ, ವಸತಿಗಾಗಿ ಸಾವಿರಾರು ರೂಪಾಯಿ ವ್ಯಯಿಸಿ ಪರದಾಡುತ್ತಿದ್ದಾರೆ. ಹಿಂದಿನ ಪದ್ಧತಿಯಿಂದ ಮಹಿಳೆಯರು, ಗರ್ಭಿಣಿಯರು, ತಾಯಂದಿರು ಸಾಕಷ್ಟು ತೊಂದರೆ ಅನುಭವಿಸಬೇಕಾಗಿತ್ತು. ನೂತನ ತಂತ್ರಜ್ಞಾನದ ಅಳವಡಿಕೆಯಿಂದ ಈ ಎಲ್ಲ ಸಮಸ್ಯೆಗಳಿಗೆ ಮುಕ್ತಿ ದೊರಕಿದಂತಾಗಿದೆ ಎಂದಿದ್ದಾರೆ.

ಡಿಜಿ ಲಾಕರ್ ತಂತ್ರಜ್ಞಾನದ ಮೂಲಕವೇ ಶುಶ್ರೂಷಕರಿಗೆ ನೋಂದಣಿ ಪತ್ರವನ್ನು ವಿತರಿಸಬಹುದಾಗಿದೆ ಎಂದು ಶುಶ್ರೂಷಾ ಪರಿಷತ್ತಿನ ಕುಲಸಚಿವ ಡಾ.ಕೆ.ಮಲ್ಲು ತಿಳಿಸಿದ್ದಾರೆ.

ಎಂಡಿಎಸ್: ಸೀಟು ಹಂಚಿಕೆ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾತಕೋತ್ತರ ದಂತ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೋಮವಾರ ಪ್ರಕಟಿಸಿದೆ.

ರಾಜ್ಯದಲ್ಲಿ ಪ್ರಸಕ್ತ 889 ಎಂಡಿಎಸ್ ಸೀಟುಗಳು ಲಭ್ಯವಿದ್ದು, ಮೊದಲ ಸುತ್ತಿನಲ್ಲಿ 636 ಮಂದಿಗೆ ಸೀಟು ಹಂಚಿಕೆ ಮಾಡಲಾಗಿದೆ. ಅಭ್ಯರ್ಥಿಗಳು ಚಾಯ್ಸ್-1 ಆಯ್ಕೆ ಮಾಡಿಕೊಂಡು ಕಾಲೇಜುಗಳಿಗೆ ಪ್ರವೇಶ ಪಡೆಯಬಹುದು. ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಜುಲೈ 15ರಂದು ಪ್ರಕಟಿಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ನೀಟ್ ನೋಂದಣಿಗೆ ಜುಲೈ 17ರವರೆಗೆ ಅವಕಾಶ: ವೈದ್ಯಕೀಯ ಕೋರ್ಸ್‌ಗಳ ಸೀಟು ಹಂಚಿಕೆ ಸಲುವಾಗಿ ಇದುವರೆಗೂ ನೋಂದಣಿ ಮಾಡದೇ ಇರುವವರಿಗೆ ಜುಲೈ 17ರವರೆಗೆ ಅವಕಾಶ ನೀಡಲಾಗಿದೆ. ಹೊಸದಾಗಿ ನೋಂದಣಿ ಮಾಡಿಕೊಂಡು, ಅರ್ಜಿ ಸಲ್ಲಿಸಬಹುದು. ಹಾಗೆಯೇ, ನೀಟ್ ರೋಲ್ ನಂಬರ್ ದಾಖಲಿಸುವವರಿಗೂ 17ರವರೆಗೆ ಅವಕಾಶ ಇದೆ ಎಂದು ಮಾಹಿತಿ ನೀಡಿದ್ದಾರೆ.

ಸೇತುವೆಗೆ ‘ಸಿಗಂದೂರು ಚೌಡೇಶ್ವರಿ’ ಹೆಸರು

ಒಂದನೇ ಪುಟದಿಂದ...

‘2030ರ ಡಿಸೆಂಬರ್ ವೇಳೆಗೆ ಕರ್ನಾಟಕದಲ್ಲಿ ₹5 ಲಕ್ಷ ಕೋಟಿ ವೆಚ್ಚದ ಹೆದ್ದಾರಿ, ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳು ಪೂರ್ಣಗೊಳ್ಳಲಿವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯದ ವಿವಿಧೆಡೆ ₹2,056 ಕೋಟಿ ವೆಚ್ಚದ ವಿವಿಧ ಯೋಜನೆಗಳ ಲೋಕಾರ್ಪಣೆ, ಕೆಲವು ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದರಾದ ಬಿ.ವೈ.ರಾಘವೇಂದ್ರ, ಕೋಟ ಶ್ರೀನಿವಾಸ ಪೂಜಾರಿ, ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕರಾದ ಆರಗ ಜ್ಞಾನೇಂದ್ರ, ಎಸ್.ಎನ್. ಚನ್ನಬಸಪ್ಪ, ಗುರುರಾಜ ಗಂಟಿಹೊಳಿ, ಸಿಮೆಂಟ್ ಮಂಜು, ಡಿ.ಎಸ್.ಅರುಣ್, ಡಾ.ಧನಂಜಯ ಸರ್ಜಿ, ಭಾರತಿ ಶೆಟ್ಟಿ, ಮಾಜಿ ಸಚಿವ ಹರತಾಳು ಹಾಲಪ್ಪ ಹಾಜರಿದ್ದರು.

ಬಿರು ಮಳೆಯಲ್ಲೇ ಲೋಕಾರ್ಪಣೆ: ಬಿಟ್ಟೂ ಬಿಡದೆ ಸುರಿದ ಮಳೆಯ ನಡುವೆಯೇ ಮಧ್ಯಾಹ್ನ ಸೇತುವೆಯನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ಲೋಕಾರ್ಪಣೆ ಮಾಡಿದರು. ಇದೇ ವೇಳೆ ಶರಾವತಿ ನದಿಗೆ ಬಾಗಿನ ಸಮರ್ಪಿಸಿದರು. ನಂತರ ಸಿಗಂದೂರು ದೇವಸ್ಥಾನಕ್ಕೆ ತೆರಳಿ ದೇವಿಯ ದರ್ಶನ ಪಡೆದು, ಊಟ ಮಾಡಿದರು.

ಗಣಹೋಮ, ಪೂಜೆ: ಲೋಕಾರ್ಪಣೆಗೂ ಮುನ್ನ ಸೇತುವೆಯ ಸುರಕ್ಷತೆಗೆ ಪ್ರಾರ್ಥಿಸಿ ಸ್ಥಳೀಯರು ಗಣಹೋಮ ಹಾಗೂ ವಿಶೇಷ ಪೂಜೆ ನೆರವೇರಿಸಿದರು.

ಸೇತುವೆಯನ್ನು ಸ್ಥಳೀಯರು ಮಾವಿನ ತೋರಣ- ತಳಿರುಗಳಿಂದ ಅಲಂಕರಿಸಿದ್ದು, ತುಮರಿ, ಬ್ಯಾಕೋಡು, ಸಿಗಂದೂರು, ಕಳಸವಳ್ಳಿ ಭಾಗದ ದ್ವೀಪದ ನಿವಾಸಿಗಳು ನೂರಾರು ಸಂಖ್ಯೆಯಲ್ಲಿ ಕೊಡೆ ಹಿಡಿದು, ರೇನ್ ಕೋಟ್, ಜರ್ಕಿನ್ ಧರಿಸಿ ಬಂದು ಲೋಕಾರ್ಪಣೆಯ ಕ್ಷಣ ಕಣ್ತುಂಬಿಕೊಂಡರು. ಸೇತುವೆಯ ಎರಡೂ ಬದಿಯಲ್ಲಿ ಓಡಾಡಿ ಸಂಭ್ರಮಿಸಿದರು.



ಕಾರ್ಯಕ್ರಮಕ್ಕೆ ತೆರಳದ ಸಚಿವ

ಒಂದನೇ ಪುಟದಿಂದ...

ಸಾಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜಾರಕಿಹೊಳಿ, ‘ಮುಖ್ಯಮಂತ್ರಿ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸುವಲ್ಲಿ ಕೆಲವರಿಂದ ತಪ್ಪುಗಳಾಗಿವೆ. ಯೋಜನೆ ಕೇಂದ್ರದ್ದೇ ಆದರೂ, ಭೂಮಿ ನಮ್ಮದು. ಹೀಗಾಗಿ, ಪರಸ್ಪರ ಸಮನ್ವಯ ಅಗತ್ಯ. ಮುಂದೆ ಇಂತಹದು ಮರುಕಳಿಸಬಾರದು’ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಶಾಸಕ ಬೇಳೂರು ಗೋಪಾಲಕೃಷ್ಣ ಅವರೂ ಭಾಗವಹಿಸಲಿರಲಿಲ್ಲ. ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಪಾಲ್ಗೊಂಡಿದ್ದರು. ಸಿ.ಎಂ. ಸೂಚನೆಯ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಸೇರಿ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಕಾಣಿಸಲಿಲ್ಲ.

ಪ್ರಧಾನಿ ಮೋದಿಗೆ ಮುಖ್ಯಮಂತ್ರಿ ಪತ್ರ

ಬೆಂಗಳೂರು: ಸಾಗರ ತಾಲ್ಲೂಕಿನ ಅಂಬಾರಗೋಡ್ಲು–ಕಳಸವಳ್ಳಿ ಮಧ್ಯೆ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಿಸಿರುವ ತೂಗುಸೇತುವೆ ಉದ್ಘಾಟನೆ ಸೇರಿದಂತೆ ಜುಲೈ 14ರಂದು ಹಮ್ಮಿಕೊಂಡಿದ್ದ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ಉಲ್ಲಂಘನೆ ವಿರುದ್ಧ ರಾಜ್ಯ ಸರ್ಕಾರ ತನ್ನ ಪ್ರತಿಭಟನೆ ದಾಖಲಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

‘ನನಗೆ ಮಾಹಿತಿ ನೀಡದೇ ನನ್ನ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಹಾಕಿದ್ದಾರೆ. ಉದ್ಘಾಟನೆಯನ್ನು ಮುಂದೂಡುವಂತೆ ಕೇಂದ್ರ ಸಚಿವ ನಿತಿನ್ ಗಡ್ಕರಿಯವರಿಗೆ ಪತ್ರವನ್ನು ಬರೆದಿದ್ದೆ. ಸ್ಥಳೀಯ ಬಿಜೆಪಿ ನಾಯಕರ ಒತ್ತಡಕ್ಕೆ ಮಣಿದು, ನನ್ನ ಗಮನಕ್ಕೆ ತಾರದೆ ಕಾರ್ಯಕ್ರಮ ಆಯೋಜಿಸಿದ್ದಾರೆ. ರಾಜ್ಯ ಸರ್ಕಾರದ ಸ್ಪಷ್ಟ ಭಿನ್ನಾಭಿಪ್ರಾಯದ ಹೊರತಾಗಿಯೂ ಕಾರ್ಯಕ್ರಮ ನಡೆಸಿರುವುದು ಒಕ್ಕೂಟದ ವ್ಯವಸ್ಥೆಯ ಆಶಯಗಳನ್ನೇ ಧಿಕ್ಕರಿಸಿದಂತೆ ಆಗಿದೆ. ಭವಿಷ್ಯದಲ್ಲಿ ಇಂತಹ ನಡವಳಿಕೆಗಳಿಗೆ ಅವಕಾಶ ನೀಡದಂತೆ ಕೇಂದ್ರದ ಎಲ್ಲ ಸಚಿವಾಲಯಗಳಿಗೂ ಸಲಹೆ ನೀಡಬೇಕು’ ಎಂದು ಒತ್ತಾಯಿಸಿದ್ದಾರೆ.

ಐದು ಹುಲಿಗಳ ಹತ್ಯೆಗೆ 'ಕಾರ್ಬೋಫ್ಯುರಾನ್' ವಿಷ ಬಳಕೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಜಿಲ್ಲೆಯ ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ ಶಂಕಾಸ್ಪದವಾಗಿ ಮೃತಪಟ್ಟಿದ್ದ ಐದು ಹುಲಿಗಳ ದೇಹದಲ್ಲಿ 'ಕಾರ್ಬೋಫ್ಯುರಾನ್' ಕೀಟನಾಶಕ ಪತ್ತೆಯಾಗಿದೆ' ಎಂದು ಉನ್ನತ ಮಟ್ಟದ ತನಿಖಾ ಸಮಿತಿ ಸದಸ್ಯ, ಸಿಸಿಎಫ್ ಟಿ.ಹೀರಾಲಾಲ್ ತಿಳಿಸಿದರು.

'ಹುಲಿಗಳ ಸಾವಿಗೆ ಕಾರಣ ತಿಳಿಯಲು ಅಂಗಾಂಗಗಳ ಮಾದರಿಗಳನ್ನು ಎಫ್‌ಎಸ್‌ಎಲ್ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಅಂಡ್ ವೆಟರ್ನರಿ ಬಯಾಲಾಜಿಕಲ್ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಕಾರ್ಬೋಫ್ಯುರಾನ್ ವಿಷದಿಂದ ಹುಲಿಗಳು ಮೃತಪಟ್ಟಿರುವುದು ದೃಢಪಟ್ಟಿದೆ' ಎಂದು ಮಾಹಿತಿ ನೀಡಿದರು.

'ಕಿಡಿಗೇಡಿಗಳು ಪ್ರತೀಕಾರಕ್ಕಾಗಿ ಜಾನುವಾರುಗಳ ಕಳೇಬರದ ಮೇಲೆ ವಾಸನೆ ರಹಿತವಾದ ಕಾರ್ಬೋಫ್ಯುರಾನ್ ವಿಷ ಸಿಂಪಡಿಸಿದ್ದರು' ಎಂದು ಹೇಳಿದರು.

ಎರಡು ಚಿರತೆಗಳ ಕಳೇಬರ ಪತ್ತೆ



ಚನ್ನರಾಯಪಟ್ಟಣ (ಹಾಸನ ಜಿಲ್ಲೆ): ತಾಲ್ಲೂಕಿನ ದಂಡಿನಹಳ್ಳಿ ಹೋಬಳಿ ಕತ್ತರಿಘಟ್ಟ ಗ್ರಾಮದ ಬಳಿ ಎರಡು ಚಿರತೆಗಳ ಕಳೇಬರ ಶನಿವಾರ ಪತ್ತೆಯಾಗಿದೆ.

ಗ್ರಾಮದ ಬಳಿ ರೈಲು ಹಳಿಯಿಂದ ಒಂದು ಮೀಟರ್ ದೂರದಲ್ಲಿ ಅಂದಾಜು ಮೂರುವರೆ ವರ್ಷದ ಹೆಣ್ಣು ಚಿರತೆ ಕಳೇಬರ, ನಂತರದ 30 ಮೀಟರ್ ದೂರದಲ್ಲಿ ಒಂದೂವರೆ ವರ್ಷದ ಗಂಡು ಚಿರತೆ ಕಳೇಬರ ಪತ್ತೆಯಾಗಿದೆ.

ಚಿರತೆಗಳ ತಲೆ, ಭುಜದ ಭಾಗದಲ್ಲಿ ಗಾಯವಾಗಿದೆ. ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಅಂಗಾಂಗದ ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಲಾಗಿದೆ. ಶಂಕಾಸ್ಪದ ಸಾವು ಪ್ರಕರಣ ದಾಖಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ನೀರಿಗೆ ಕ್ರಿಮಿನಾಶಕ: ಮೂವರು ಅಸ್ವಸ್ಥ

ಸವದತ್ತಿ (ಬೆಳಗಾವಿ ಜಿಲ್ಲೆ): ಕ್ರಿಮಿನಾಶಕ ಬೆರೆಸಿದ್ದ ನೀರು ಕುಡಿದು ಸೋಮವಾರ ತಾಲ್ಲೂಕಿನ ಹೂಲಿಕಟ್ಟಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮೂವರು ಮಕ್ಕಳು ಅಸ್ವಸ್ಥಗೊಂಡಿದ್ದಾರೆ.

ಶಿಕ್ಷಕರು ತಕ್ಷಣವೇ ಆಂಬುಲೆನ್ಸ್ ಕರೆಸಿ, ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿದರು. ಈ ಕುರಿತು ಪ್ರಕರಣ ದಾಖಲಾಗಿದೆ. 'ಟ್ಯಾಂಕ್ ಸುತ್ತಲಿನ ವಾಸನೆ, ಹತ್ತಿರ ಸಿಕ್ಕ ಬಾಟಲಿಯಿಂದ ದುಷ್ಕರ್ಮಿಗಳು ಕೀಟನಾಶಕ ಬೆರೆಸಿದ್ದಾರೆಂದು ವೈದ್ಯರು ದೃಢಪಡಿಸಿದ್ದಾರೆ.

ಬಾಂಬ್ ಬೆದರಿಕೆ: ಇಬ್ಬರ ಬಂಧನ

ಕಾರವಾರ: ಭಟ್ಕಳದಲ್ಲಿ ಬಾಂಬ್ ಸ್ಫೋಟಿಸುವ ಬೆದರಿಕೆಯ ಇ-ಮೇಲ್ ರವಾನಿಸಿದ್ದ ಆರೋಪದಡಿ ಮೈಸೂರಿನ ನಿತಿನ್ ಶರ್ಮಾ ಮತ್ತು ತಮಿಳುನಾಡಿನ ತಿರುಮಲಪುರಮ್‌ನ ಕಣ್ಣನ್ ಗುರುಸ್ವಾಮಿ ಎಂಬುವರನ್ನು ಭಟ್ಕಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕಣ್ಣನ್ ಇ-ಮೇಲ್ ಖಾತೆಯಿಂದ ಜುಲೈ 10 ರಂದು ಇ-ಮೇಲ್ ಬಂದಿತ್ತು. ವಿಚಾರಣೆ ವೇಳೆ, ಕೇರಳದ ಮುನ್ನಾರ್ ಪೊಲೀಸ್ ಠಾಣೆಗೆ ಪ್ರಕರಣವೊಂದರ ಸಂಬಂಧ ಹೋಗಿದ್ದಾಗ ಕೈದಿಯೊಬ್ಬನ ಫೋನ್ ಪಡೆದು ಸಂದೇಶ ಕಳಿಸಿದ್ದಾಗಿ ತಿಳಿಸಿದ. ನಿತಿನ್ ಶರ್ಮಾ ಇ-ಮೇಲ್ ಕಳಿಸಿದ್ದು ದೃಢಪಟ್ಟಿದೆ. ಆತನ ವಿರುದ್ಧ ವಿವಿಧೆಡೆ16 ಪ್ರಕರಣ ದಾಖಲಾಗಿವೆ.' ಎಂದು ಎಸ್‌ಪಿ ಎಂ.ನಾರಾಯಣ ತಿಳಿಸಿದರು. 'ನಿತಿನ್ ಶರ್ಮಾ, ಮೈಸೂರು ಜೈಲಿನಲ್ಲಿದ್ದು, ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ' ಎಂದು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಪಂಚಮಸಾಲಿ ಪೀಠದ ಕಟ್ಟಡಕ್ಕೆ ಬೀಗ

ಬಾಗಲಕೋಟೆ: ಕೂಡಲ ಸಂಗಮದಲ್ಲಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್‌ಗೆ ಸೇರಿದ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮಿ ಇರುವ ಪೀಠದ ಕಟ್ಟಡದ ಗೇಟಿಗೆ ಭಾನುವಾರ ರಾತ್ರಿ ಬೀಗ ಹಾಕಲಾಗಿದೆ. ಸುತ್ತಲೂ ಬಂದೋಬಸ್ತ್ ಮಾಡಲಾಗಿದೆ.

ಪೀಠದ ಕಟ್ಟಡದ ಪ್ರವೇಶ, ಹಿಂಬದಿ ದ್ವಾರ ಮತ್ತು ಮೇಲ್ಭಾಗದ ಕೊಠಡಿಗೆ ತೆರಳಲು ಇದ್ದ ದಾರಿಯಲ್ಲಿ ಗೇಟ್ ಅಳವಡಿಸಿ, ಬೀಗ ಹಾಕಲಾಗಿದೆ. ಮಠದ ದ್ವಾರಗಳಿಗೆ ಯಾರು ಬೀಗ ಹಾಕಿದ್ದಾರೆ ಎಂಬುದು ಗೊತ್ತಿಲ್ಲ. ಆದರೆ, ತಿಂಗಳಿನಿಂದ ವ್ಯವಸ್ಥಾಪಕರಾಗಿದ್ದವರು ಬೀಗ ಹಾಕಿದ್ದಾರೆ ಎನ್ನಲಾಗಿದೆ.

'ಪೀಠಕ್ಕೆ ಬೀಗ ಹಾಕಿದ ಬಗ್ಗೆ ಮಾಹಿತಿ ಇಲ್ಲ. ಹಲವು ದಿನಗಳಿಂದ ಪ್ರವಾಸದಲ್ಲಿದ್ದು, ಪೀಠದ ಕಡೆ ಬಂದಿಲ್ಲ' ಎಂದು ಪಂಚಮಸಾಲಿ ಪೀಠದ ಸ್ವಾಮೀಜಿ ಪ್ರತಿಕ್ರಿಯಿಸಿದರು.

'ಮಠದಲ್ಲಿ ಅಹಿತಕರ ಚಟುವಟಿಕೆಗಳು ನಡೆಯದಿರಲಿ ಎಂಬ ಉದ್ದೇಶದಿಂದ ಗೇಟ್ ಮಾಡಿಸಿ, ಬೀಗ ಹಾಕಲಾಗಿದೆ' ಎಂದು ಟ್ರಸ್ಟ್ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.

ಬೆಸ್ಕಾಂ ಎಂಜಿನಿಯರ್ ಲಂಚ: ತನಿಖೆಗೆ ಅಸ್ತು

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಸಹಾಯಕ ಎಂಜಿನಿಯರ್ ವಿರುದ್ಧದ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದ ಲೋಕಾಯುಕ್ತ ತನಿಖೆಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧ ಬೆಂಗಳೂರು ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಮತ್ತು ಈ ಸಂಬಂಧ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸೆಷನ್ಸ್ ನ್ಯಾಯಾಲಯದಲ್ಲಿನ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಬೇಕು' ಎಂದು ಕೋರಿ ಎನ್.ಎಚ್. ಯತೀಶ್ ಪಾಳೇಗಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿದೆ.

'ಪ್ರಕರಣವನ್ನು ಗಮನಿಸಿದಾಗ ಅರ್ಜಿದಾರ ಯತೀಶ್ (ಕ್ಷೇತ್ರ ಪಾಲನೆ ಮತ್ತು ನಿರ್ವಹಣೆ ವಿಭಾಗ) ಪ್ರಾಥಮಿಕವಾಗಿ ಲಂಚಕ್ಕೆ ಬೇಡಿಕೆ ಇಟ್ಟಿರುವುದು ಗೊತ್ತಾಗುತ್ತದೆ ಮತ್ತು ಹಣವನ್ನು ದೂರುದಾರರಿಂದ ಪಡೆಯುತ್ತಿರುವಾಗ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದಿದ್ದಾರೆ. ಹಾಗಾಗಿ, ಲಂಚಕ್ಕೆ ಬೇಡಿಕೆ ಇರಿಸಿರುವ ಮತ್ತು ಪಡೆಯುವ ಬಗ್ಗೆಗಿನ ಅಂಶಗಳು ಮೇಲ್ನೋಟಕ್ಕೆ ಮನದಟ್ಟಾಗುವಂತಿವೆ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ತನಿಖೆ ಮುಂದುವರಿಸಲು ಹಸಿರು ನಿಶಾನೆ ತೋರಿದೆ.

ಗಾಳಿ ಆಂಜನೇಯ ಇಂದು ವಿಚಾರಣೆ: ನಗರದ ಗಾಳಿ ಆಂಜನೇಯ ಸ್ವಾಮಿ ದೇವಾಲಯವನ್ನು ಮುಜರಾಯಿ ಇಲಾಖೆ ಸುಪರ್ದಿಗೆ ಒಪ್ಪಿಸಿರುವ ಸರ್ಕಾರದ ಕ್ರಮವನ್ನು ಪ್ರಶ್ನಿಸಲಾದ ಅರ್ಜಿಯನ್ನು ಹೈಕೋರ್ಟ್ ಜುಲೈ 15 ವಿಚಾರಣೆ ನಡೆಸಲಿದೆ.

'ಬಸ್‌ಗಳಲ್ಲಿ ಧ್ವನಿ ಸ್ಪಂದನ ಸೇವೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದಲ್ಲಿ ಮುಂದೆ ಕೆಎಸ್‌ಆರ್‌ಟಿಸಿ ಖರೀದಿಸಲಿರುವ ಎಲ್ಲ ಸಾರಿಗೆ ಬಸ್‌ಗಳಲ್ಲೂ ದೃಷ್ಟಿದೋಷವುಳ್ಳವರ ಅನುಕೂಲಕ್ಕಾಗಿ 'ಧ್ವನಿ ಸ್ಪಂದನ' ಉಪಕರಣ ಅಳವಡಿಸಲಾಗುವುದು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಇಲ್ಲಿನ ಬಸ್ ನಿಲ್ದಾಣದಲ್ಲಿ ಸೋಮವಾರ 200 ನಗರ ಸಾರಿಗೆ ಬಸ್‌ಗಳಲ್ಲಿ 'ಧ್ವನಿಸ್ಪಂದನ' ಉಪಕರಣ ಆಧಾರಿತ ಸೇವೆಗೆ ಚಾಲನೆ ನೀಡಿ ಅವರು ಮಾತನಾಡಿದರು.

'ದೃಷ್ಟಿದೋಷವುಳ್ಳವರು ಅನ್ಯರ ನೆರವಿಲ್ಲದೆ ಈ ಮೂಲಕ ಸಾರಿಗೆ ಸೌಲಭ್ಯ ಬಳಸಬಹುದು. ಬಿಎಂಟಿಸಿಯ 500 ಬಸ್‌ಗಳಲ್ಲಿ ಈ ಸಾಧನ ಬಳಸಲಾಗುತ್ತಿದೆ. ಕೆಎಸ್‌ಆರ್‌ಟಿಸಿಯ 7 ಸಾವಿರ ಬಸ್‌ಗಳಲ್ಲಿ ಅಳವಡಿಸಲಾಗುವುದು' ಎಂದರು.

ಏನಿದು ಉಪಕರಣ?: ದೃಷ್ಟಿದೋಷ ಉಳ್ಳವರಿಗೆ ನೆರವಾಗಲು ಯೂನಿಟ್ ರಿಮೋಟ್ ಮತ್ತು ಸ್ಪೀಕರ್ ಅನ್ನು ಬಸ್‌ಗಳಲ್ಲಿ ಅಳವಡಿಸಲಾಗಿರುತ್ತದೆ. ಆಯ್ದ ಬಳಕೆದಾರರಿಗೆ ವೈಯಕ್ತಿಕ ಬಳಕೆಗೆ ಒಂದು ಸಾಧನ ನೀಡಲಾಗುತ್ತದೆ. ಅವರು ಬಸ್ ನಿಲ್ದಾಣಕ್ಕೆ ಬಂದಾಗ ತಮ್ಮಲ್ಲಿನ ಸಾಧನ ಒತ್ತಿದರೆ, ಅದು ಬಸ್‌ನ ಸಂಖ್ಯೆ, ಮಾರ್ಗ ಮಾಹಿತಿ ಹೇಳುತ್ತದೆ. ತಾವು ಹೋಗಬೇಕಾದ ಬಸ್ ಇದಾದಲ್ಲಿ, 'ಸೆಲೆಕ್ಟ್' ಬಟನ್ ಒತ್ತಿದರೆ ಬಸ್‌ನ ಚಾಲಕರು ಹಾಗೂ ನಿರ್ವಾಹಕರಿಗೆ ಸಿಗ್ನಲ್ ಹೋಗುತ್ತದೆ. ಇದರಿಂದ ಬಸ್ ಅನ್ನು ಹೆಚ್ಚಿನ ಕಾಲ ನಿಲ್ಲಿಸಲು ಸಾಧ್ಯವಾಗುತ್ತದೆ.

ರೈಸ್ಡ್ ಲೈನ್ಸ್ ಫೌಂಡೇಶನ್ ಮತ್ತು ಐಐಟಿ ದೆಹಲಿ ಸಂಸ್ಥೆಗಳು ಈ ಸಾಧನ ಅಭಿವೃದ್ಧಿಪಡಿಸಿವೆ. ಮೈಸೂರಿನಲ್ಲಿ ಜಿಐಝಡ್ ಇಂಡಿಯಾ ಆರ್ಥಿಕ ನೆರವಿನೊಂದಿಗೆ ದೃಷ್ಟಿದೋಷವುಳ್ಳವರಿಗೆ ಈ ಸಾಧನವನ್ನು ಉಚಿತವಾಗಿ ವಿತರಿಸುತ್ತಿದೆ. ಅದರ ಬಳಕೆ ಕುರಿತು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಹಾಗೂ ಆಯಿಷ್ ಸಂಸ್ಥೆಯಿಂದ ತರಬೇತಿ ನೀಡಲಾಗುತ್ತಿದೆ.

ಕಣ್ಣುಗಳಲ್ಲಿರುವ ರಕ್ತನಾಳಗಳು ಆರೋಗ್ಯವಾಗಿರಲು ಹಾಗೂ ಕಣ್ಣಿನ ಪೊರೆಯನ್ನು ತಡೆಯಲು ವಿಟಮಿನ್ 'ಸಿ' ಇರುವ ಆಹಾರವನ್ನು ಹೆಚ್ಚಾಗಿ ಸೇವಿಸಬೇಕು.



ಮಗು ಗಮನಿಸುತ್ತಿಲ್ಲವೆ?

ನೀವು ಗಮನಿಸಿ!

ಎಡಿಎಚ್‌ಡಿ ಸಮಸ್ಯೆ ಇರುವವರಿಗೆ ಸರಿಯಾದ ಕಾಳಜಿ ಮತ್ತು ಚಿಕಿತ್ಸೆಗಳು ದೊರೆತರೆ ಅವರು ಸಾಮಾನ್ಯ ಜೀವನವನ್ನು ನಡೆಸಲು ಸಾಧ್ಯ. ಇದರ ಬಗ್ಗೆ ಸರಿಯಾದ ತಿಳಿವಳಿಕೆಯ ಕೊರತೆಯಿಂದಾಗಿ ಅನೇಕರು ಪರಿಹಾರವನ್ನು ಕಾಣದೇ ತೊಂದರೆಯನ್ನು ಅನುಭವಿಸುತ್ತಿರುತ್ತಾರೆ



• ಡಾ. ಗಣೇಶ್ ಗಂಗೊಳ್ಳಿ

ಮಕ್ಕಳ ಆಟ ಪಾಠ ನೋಡಲು ಚೆಂದ. ಅವರ ಚಟುವಟಿಕೆ ನಮ್ಮಲ್ಲಿಯೂ ಚೈತನ್ಯವನ್ನೂ ಸಂತಸವನ್ನೂ ತರುತ್ತದೆ.

ನನ್ನ ಅಕ್ಕನ ಮಗಳು ಮೂರು ವರ್ಷದ ಪುಟಾಣಿ. ಕುಳಿತಲ್ಲಿ ಕೂರದ, ನಿಂತಲ್ಲಿ ನಿಲ್ಲದ ಚೂಟಿ ಹುಡುಗಿ. ಆದರೆ 'ಅತಿಯಾದರೆ ಅಮೃತವು ವಿಷ' – ಎನ್ನುವ ಗಾದೆ ಹೇಳುವಂತೆ ಈ ಪುಟ್ಟ ಬಾಲಕಿಯ ಕೀಟಲೆ ದಿನೇ ದಿನೇ ಅತಿಯಾಗುತ್ತ ಹೋಯಿತು. ಇದಕ್ಕೆ ಕಾರಣ – ಹೌದು 'ನನ್ನ ಸಂಶಯದಂತೆಯೇ ಅದು 'ಎಡಿಎಚ್‌ಡಿ' (ಅಟೆಂಷನ್ ಡೆಫಿಸಿಟ್ ಹೈಪರ್ ಆ್ಯಕ್ಟಿವ್ ಡಿಸಾರ್ಡರ್)!

ಎಡಿಎಚ್‌ಡಿ ಎಂದರೇನು?

ಗಮನದ ಕೊರತೆ ಮತ್ತು ಅತಿಸಕ್ರಿಯತೆಯ ಅಸ್ವಸ್ಥತೆ ಒಂದು ನರಗಳಿಗೆ ಸಂಬಂಧಪಟ್ಟ ವೈದ್ಯಕೀಯ ಸ್ಥಿತಿ. ಇಂಥ ಸ್ಥಿತಿಯಲ್ಲಿ ಇರುವವರಿಗೆ ಗಮನವನ್ನು ಕೇಂದ್ರೀಕರಿಸುವುದು, ಆವೇಗವನ್ನು ನಿಯಂತ್ರಿಸುವುದು ಅಥವಾ ತಮ್ಮ ವಯಸ್ಸಿಗೆ ತಕ್ಕಂತೆ ವರ್ತಿಸುವುದು ಕಷ್ಟವಾಗುತ್ತದೆ. ಇದು ಮಕ್ಕಳು ಮತ್ತು ವಯಸ್ಕರಲ್ಲಿ ಕಂಡುಬರುತ್ತದೆ. ಆದರೂ ಇದನ್ನು ಸಾಮಾನ್ಯವಾಗಿ ಬಾಲ್ಯದಲ್ಲಿಯೇ ಗುರುತಿಸಬಹುದಾಗಿರುತ್ತದೆ.

'ನನ್ನ ಮಗ ಯಾವಾಗಲೂ ಅಸ್ತವ್ಯಸ್ತನಾಗಿದ್ದಾನೆ', 'ಮಗಳಿಗೆ ಯಾವುದರ ಮೇಲೂ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಾಗುತ್ತಿಲ್ಲ', 'ಈ ಮಗು ಯಾವಾಗಲೂ ಅತಿಯಾಗಿ ಚಟುವಟಿಕೆಯಿಂದ ಇರುತ್ತದೆ' - ಇಂತಹ ಮಾತುಗಳನ್ನು ಕೇಳುತ್ತಿರುತ್ತೇವೆ. ಶಾಲೆಯಲ್ಲಿ ಮಗು ಆಟ–ಪಾಠಗಳ ಕಡೆಗೆ ಗಮನವನ್ನು ಕೇಂದ್ರೀಕರಿಸಲು ಕಷ್ಟಪಡುವ ಸನ್ನಿವೇಶವನ್ನು ಅನೇಕ ಬಾರಿ ಶಿಕ್ಷಕರು ಗುರುತಿಸಬಹುದು. ಇಂತಹ ಸಂದರ್ಭಗಳು ನಮ್ಮ ನಡುವೆ ಅನೇಕ ಬಾರಿ ನಡೆಯುತ್ತವೆ. ಆದರೆ ಇದನ್ನು ಗಮನಿಸುವಲ್ಲೂ, ಅರ್ಥ ಮಾಡಿಕೊಳ್ಳುವುದರಲ್ಲೂ ನಾವು ವಿಫಲರಾಗುತ್ತೇವೆ; ಕೆಲವೊಮ್ಮೆ ಮಕ್ಕಳನ್ನು ವೃಥಾ ದಂಡಿಸುತ್ತೇವೆ. ಆದರೆ ವಾಸ್ತವದಲ್ಲಿ ಇದೊಂದು ವೈದ್ಯಕೀಯ ಸ್ಥಿತಿ, ಎಂದರೆ ಅನಾರೋಗ್ಯದ ಲಕ್ಷಣ. ಈ ಸಮಸ್ಯೆ ಇರುವವರಿಗೆ ಸರಿಯಾದ ಬೆಂಬಲ ಮತ್ತು ಚಿಕಿತ್ಸೆಗಳು ದೊರೆತರೆ ಅವರು ಕೂಡ ಎಲ್ಲರಂತೆ ಸಾಮಾನ್ಯ ಜೀವನವನ್ನು ನಡೆಸಲು ಸಾಧ್ಯ. ಇದರ ಬಗ್ಗೆ ಸರಿಯಾದ ತಿಳಿವಳಿಕೆಯ ಕೊರತೆಯಿಂದಾಗಿ ಅನೇಕರು ತೊಂದರೆಯನ್ನು ಅನುಭವಿಸುತ್ತಾರೆ.

ಭಾರತದಲ್ಲಿನ ಸ್ಥಿತಿ: ವಿಶ್ವ ಆರೋಗ್ಯ ಸಂಸ್ಥೆಯ ಅಂಕಿಅಂಶದ ಪ್ರಕಾರ, ನಮ್ಮ ದೇಶದಲ್ಲಿ ಶೇ 5ರಷ್ಟು ಶಾಲಾಮಕ್ಕಳು ಎಡಿಎಚ್‌ಡಿಯಿಂದ ಬಳಲುತ್ತಾರೆ. ಆದರೆ ಅದರಲ್ಲಿ ಶೇ 90ರಷ್ಟು ಮಕ್ಕಳ ರೋಗನಿರ್ಧಾರ ಆಗದೆ, ಅವರೆಲ್ಲರೂ 'ಶಿಸ್ತಿಲ್ಲದವರು' ಎಂಬ ಕಳಂಕಕ್ಕೆ ಒಳಗಾಗುತ್ತಾರೆ.

ಇದರ ಲಕ್ಷಣಗಳೇನು?

- ಯಾವ ಚಟುವಟಿಕೆಯ ಬಗ್ಗೆಯೂ ಗಮನವನ್ನು ಕೇಂದ್ರೀಕರಿಸಲು ಕಷ್ಟ.
- ಅತಿಯಾದ ಚಟುವಟಿಕೆ ಅಥವಾ ಆವೇಗದ ನಡವಳಿಕೆ.
- ಹಿಡಿದ ಕೆಲಸವನ್ನು ಪೂರ್ಣಗೊಳಿಸದಿರುವುದು. ಇವು ಪ್್ರಮುಖ ಲಕ್ಷಣಗಳು

ಎಡಿಎಚ್‌ಡಿ ಬಗ್ಗೆ ತಪ್ಪುಗ್ರಹಿಕೆಗಳು	
ತಪ್ಪು ನಂಬಿಕೆ	**ವಾಸ್ತವ**
ಗರ್ಭವತಿಯಾಗಿದ್ದಾಗ ತಾಯಿ ತಂಬಾಕು /ಮದ್ಯಪಾನಗಳಂಥವನ್ನು ಸೇವಿಸಿದ್ದರೆ ಮಗುವಿಗೆ ಸಮಸ್ಯೆ ಆಗಬಹುದು.	ಸಮಸ್ಯೆಗೆ ಶೇ80ರಷ್ಟು ವಂಶವಾಹಿ ಕಾರಣ. ಹುಟ್ಟುವಾಗಲೇ ಇರುವ ಮಿದುಳಿನ ದೋಷವೂ ಕಾರಣ.
ಸಮಸ್ಯೆ ಇರುವ ಮಗುವಿಗೆ ಶಿಕ್ಷೆಯನ್ನು ಕೊಟ್ಟರೆ ಸಮಸ್ಯೆ ಪರಿಹಾರವಾಗುತ್ತದೆ.	ಚಿಕಿತ್ಸೆ ಇಲ್ಲದಿದ್ದಾಗ ಸಮಸ್ಯೆ ಹದಗೆಡುತ್ತದೆ; ಖಿನ್ನತೆ ಇನ್ನಿತರ ಸಮಸ್ಯೆಗಳೂ ಉಲ್ಬಣಗೊಳ್ಳುತ್ತವೆ.
ವಯಸ್ಸಾದಂತೆ ಸಮಸ್ಯೆಯೂ ಮರೆಯಾಗುತ್ತದೆ.	ಶೇ 60ರಷ್ಟು ರೋಗಿಗಳಲ್ಲಿ ವಯಸ್ಕರಾದ ಮೇಲೂ ಸಮಸ್ಯೆ ಉಳಿಯುತ್ತದೆ.

ನಿರ್ವಹಣೆಗೆ ಕೆಲವು ಸಲಹೆಗಳು

ಸಾಮಾಜಿಕ ಜಾಗೃತಿ: ಎಡಿಎಚ್‌ಡಿಯನ್ನು ತಪ್ಪಾಗಿ ಅರ್ಥೈಸಿಕೊಳ್ಳುವುದರಿಂದ ಉಂಟಾಗುವ ಸಾಮಾಜಿಕ ಕಳಂಕವನ್ನು ತೊಡೆದುಹಾಕಲು ಸಾಮಾಜಿಕ ಜಾಗೃತಿಯನ್ನು ಮೂಡಿಸಬೇಕು. ಎಡಿಎಚ್‌ಡಿ ಎಂದರೆ ಕೇವಲ 'ಆಲಸ್ಯ' ಅಥವಾ 'ತುಂಟಾಟ' ಅಲ್ಲ– ಎಂಬ ಅರಿವನ್ನು ಜನರಲ್ಲಿ ಹಲವು ಮಾಧ್ಯಮಗಳ ಮೂಲಕ ಮೂಡಿಸಬೇಕಿದೆ.

ಪೋಷಕರ ಪಾತ್ರ: ಮಕ್ಕಳಿಗೆ ರಚನಾತ್ಮಕ ದಿನಚರಿಯನ್ನು ರೂಪಿಸುವಲ್ಲಿ ಪೋಷಕರ ಪಾತ್ರ ಬಹುಮುಖ್ಯವಾಗಿರುತ್ತದೆ.

ಶಿಕ್ಷಕರಿಗೆ: ಮಕ್ಕಳು ತರಗತಿಯಲ್ಲಿ ಗಮನವನ್ನು ಕೇಂದ್ರೀಕರಿಸಲು, ಅವರಿಗೆ ಸಣ್ಣ ಕೆಲಸಗಳನ್ನು ವಿಭಜಿಸಿ ನೀಡಿ, ವಿಶೇಷ ಬೋಧನಾಕ್ರಮವನ್ನು ಅನುಸರಿಸಬೇಕಾಗುತ್ತದೆ. ಈ ಸಮಸ್ಯೆ ಇರುವ ಮಕ್ಕಳಿಗೆ ಬೋಧಿಸಲು ಸಹಾನುಭೂತಿ ಮತ್ತು ತಾಳ್ಮೆ ಅತಿ ಮುಖ್ಯವಾಗಿರುತ್ತದೆ.

ವೈದ್ಯಕೀಯ ಸಹಾಯ: ಮೇಲಿನ ಯಾವುದೇ ಲಕ್ಷಣ ಕಂಡುಬಂದರೆ ಮನೋವೈದ್ಯರ ಸಲಹೆಯನ್ನು ಸರಿಯಾದ ಸಮಯದಲ್ಲಿ ಪಡೆಯುವುದು ಅಗತ್ಯ.

ಸಾಧಕರಿಗೂ ಇತ್ತು ಸಮಸ್ಯೆ!

ಐನ್‌ಸ್ಟೈನ್, ವಾಲ್ಟ್ ಡಿಸ್ನಿ, ಮೈಕೇಲ್ ಫೆಲ್ಪ್ಸ್ – ಇಂತಹ ಹಲವರು ಸಾಧಕರು ಎಡಿಎಚ್‌ಡಿ ಸಮಸ್ಯೆಯಿಂದ ಬಳಲಿದವರೇ. ಆದರೆ ಅವರು ಅದರಿಂದ ಹೊರಬಂದು ಸಾಧನೆ ಮಾಡಿ, ಪ್ರಸಿದ್ಧರಾದರು. ಹೀಗಾಗಿ ಈ ಸಮಸ್ಯೆಯೇ ಒಂದು ದೋಷವಲ್ಲ; ಬದಲಾಗಿ ಇದು ಮಿದುಳು ವಿಭಿನ್ನವಾಗಿ ಕೆಲಸ ಮಾಡುವ ರೀತಿ – ಎಂದು ಸಕಾರಾತ್ಮಕವಾಗಿ ಆಲೋಚಿಸಬೇಕು. ಆ ಮೂಲಕ ಎಡಿಎಚ್‌ಡಿ ಬಗ್ಗೆ ಇರುವ ತಪ್ಪು ಗ್ರಹಿಕೆಗಳನ್ನು ಮುರಿಯಬೇಕು; ಈ ಸಮಸ್ಯೆಯನ್ನು ವಾಸ್ತವದ ನೆಲೆಯಲ್ಲಿ ಅರ್ಥಮಾಡಿಕೊಳ್ಳುವ ಸಮಾಜವನ್ನು ನಿರ್ಮಿಸಬೇಕು. ಸಹಾನುಭೂತಿ, ಸರಿಯಾದ ಜ್ಞಾನ ಮತ್ತು ಸಕ್ರಿಯ ಬೆಂಬಲದಿಂದ, ಎಡಿಎಚ್‌ಡಿ ಇರುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪೂರ್ಣ ಸಾಮರ್ಥ್ಯದಿಂದ ಎಲ್ಲರಂತೆಯೇ ಸಹಜ ಜೀವನವನ್ನು ನಡೆಸಬಹುದಾಗಿದೆ.

ಎಡಿಎಚ್‌ಡಿ ಮೂರು ವಿಧಗಳು

- **8-10%** ಪ್ರಮುಖವಾಗಿ ಹೈಪರ್ ಆ್ಯಕ್ಟಿವ್ ಮತ್ತು ಇಂಪ್ಲೀಸಿವ್ (ಎಚ್‌ಐ)
- **60-70%** ಕಂಬೈನ್ಡ್ (ಎಡಿಎಚ್‌ಡಿ)
- **25-30%** ಪ್ರಮುಖವಾಗಿ ಗಮನದ ಕೊರತೆ (ಎಡಿಡಿ)



ಚರ್ಮದ ತುರಿಕೆಗೆ ಕಾರಣಗಳು ಹಲವು

• ಡಾ. ಬಿ.ಆರ್. ಸುಹಾಸ್

ಪಿತ್ತಜನಕಾಂಗದ ಕಾಯಿಲೆ, ಮೂತ್ರಪಿಂಡಗಳ ಕಾಯಿಲೆ, ಮಧುಮೇಹ, ರಕ್ತಹೀನತೆ, ಥೈರಾಯ್ಡ್ ಗ್ರಂಥಿಯ ಸಮಸ್ಯೆಗಳು, ಮೊದಲಾದ ಆಂತರಿಕ ಕಾಯಿಲೆಗಳಿಂದಲೂ ಚರ್ಮದ ತುರಿಕೆಯಾಗುತ್ತದೆ

ಭಾಗ 2

ಚರ್ಮ ನಮ್ಮ ದೇಹದ ಆರೋಗ್ಯವನ್ನು ಕಾಪಾಡುವಲ್ಲಿ ತುಂಬ ಮಹತ್ವದ ಪಾತ್ರವನ್ನು ವಹಿಸುತ್ತದೆ. ಹೀಗಿದ್ದರೂ ನಾವು ಚರ್ಮದ ಆರೋಗ್ಯದ ಬಗ್ಗೆ ಗಮನವನ್ನು ಕೊಡುವುದು ಕಡಿಮೆಯೇ. ಚರ್ಮದ ಸಮಸ್ಯೆಗಳು ಕಾಣಿಸಿಕೊಂಡ ಕೂಡಲೇ ವೈದ್ಯರನ್ನು ಕಂಡು, ಸೂಕ್ತ ಸಲಹೆಯನ್ನು ಪಡೆದುಕೊಂಡರೆ ಪರಿಹಾರದ ದಾರಿ ಸುಲಭವಾಗುತ್ತದೆ. ಕಳೆದ ಸಂಚಿಕೆಯಲ್ಲಿ ಚರ್ಮದ ಕೆಲವು ಸಮಸ್ಯೆಗಳನ್ನು ನೋಡಿದ್ದೆವು. ಈಗ ಇನ್ನಷ್ಟು ಚರ್ಮದ ಸಮಸ್ಯೆಗಳನ್ನೂ ಅವುಗಳ ಪರಿಹಾರದ ಮಾರ್ಗಗಳನ್ನೂ ತಿಳಿಯೋಣ.

ಇಸುಬು

ಇಸುಬು ಅಥವಾ 'ಎಗ್ಸಿಮ' ತುರಿಕೆಯ ಒಂದು ಸಾಮಾನ್ಯ ಸಮಸ್ಯೆ. ಚರ್ಮದುರಿತವಾಗುವುದರಿಂದ ಈಗ ಇದನ್ನು 'ಡರ್ಮಟೈಟಿಸ್' ಎನ್ನುತ್ತಾರೆ. ಇದರಲ್ಲಿ ಹೊರಜನಿತ ಮತ್ತು ಒಳಜನಿತ ಎಂಬ ಎರಡು ವಿಧಗಳಿವೆ. ಹೊರಜನಿತ ಬಗೆ, ಕೆಲವು ವಸ್ತುಗಳ ಸ್ಪರ್ಶದಿಂದ ಆಗುವ ಅಲರ್ಜಿಯಿಂದ ಆಗುತ್ತದೆ. ಉದಾಹರಣೆಗೆ ಕುಂಕುಮದ ಅಲರ್ಜಿ, ಸರ, ಬಳೆ ಇತ್ಯಾದಿ ಆಭರಣಗಳ ಅಲರ್ಜಿ, ಬಟ್ಟೆ ಒಗೆಯುವ ಸಾಬೂನಿನ ಹಾಗೂ ಪಾತ್ರೆ ತೊಳೆಯುವ ಪುಡಿಯ ಅಲರ್ಜಿ ಮೊದಲಾದವು. ಇದನ್ನು ಸ್ಪರ್ಶದ ಅಲರ್ಜಿ ಅಥವಾ 'ಕಾಂಟ್ಯಾಕ್ಟ್ ಡರ್ಮಟೈಟಿಸ್' ಎನ್ನುತ್ತಾರೆ.

ಬಿಸಿಲಿನ ಅಲರ್ಜಿಯೂ ಈ ಬಗೆಯದ್ದೇ ಆಗಿದೆ. ಬಿಸಿಲಿನಲ್ಲಿರುವ ಅತಿನೇರಳೆ ಕಿರಣಗಳಿಂದ ಈ ಅಲರ್ಜಿ ಆಗುತ್ತದೆ. ಇದನ್ನು 'ಫೋಟೋಡರ್ಮಟೈಟಿಸ್' ಎನ್ನುತ್ತಾರೆ. ಅಂತೆಯೇ ಬ್ಯಾಕ್ಟೀರಿಯಾ ಮುಂತಾದ ರೋಗಾಣುಗಳಿಂದ ಸೋಂಕಾಗಿ ಇಸುಬಾಗಬಹುದು. ಒಳಜನಿತ ಬಗೆಯಲ್ಲಿ ಇಸುಬಿಗೆ ಕಾರಣವಾಗುವ ದೋಷಗಳು ವ್ಯಕ್ತಿಯಲ್ಲೇ ಇರುತ್ತವೆ. ಒಣಚರ್ಮ ಅಂಥ ಒಂದು ದೋಷ. ಒಣಚರ್ಮದಿಂದ ನವೆಯಾಗಿ ಕೆರೆದು ಇಸುಬಾಗಬಹುದು. 'ವೇರಿಕೋಸ್ ವೇಯ್ನ್ಸ್' ಸಮಸ್ಯೆಯಲ್ಲಿ ಕಾಲಿನ ಅಪಧಮನಿಗಳು ಉಬ್ಬಿ, ರಕ್ತಸಂಚಾರ ನಿಧಾನವಾಗಿ ಚರ್ಮಕ್ಕೆ ಪೋಷಣೆ ಸಿಗದೇ ಇಸುಬಾಗಬಹುದು. ಬಹಳ ಹೊತ್ತು ನಿಂತು ಕೆಲಸ ಮಾಡುವುದರಿಂದ ಈ ಸಮಸ್ಯೆಯಾಗುತ್ತದೆ. ಕೆಲವೊಮ್ಮೆ ಸಣ್ಣ ಕಾರಣಗಳಿಂದ ನವೆಯು ಆರಂಭವಾಗಿ ಮಾನಸಿಕ ಒತ್ತಡದಿಂದ ಹೆಚ್ಚು ಕೆರೆಯುತ್ತಾ ಗಟ್ಟಿಯಾದ ಗುಳ್ಳೆಗಳು ಇಲ್ಲವೇ ಮಚ್ಚೆಗಳಾಗಿ ಇನ್ನಷ್ಟು ನವೆಯಾಗುತ್ತದೆ. ನವೆ-ಕೆರೆತ-ನವೆ – ಹೀಗೊಂದು ವಿಷ ವರ್ತುಲದಂತಾಗುತ್ತದೆ.

ಸೋರಿಯಾಸಿಸ್

ರೋಗನಿರೋಧಕ ಶಕ್ತಿಯು ಚರ್ಮವನ್ನು ಉದ್ರೇಕಿಸಿ ಅದು ಉರಿತಕ್ಕೊಳಗಾಗುವ ಹಾಗೂ ಹೆಚ್ಚಾಗಿ ಬೆಳೆಯುವ ಒಂದು ಚರ್ಮರೋಗ ಸೋರಿಯಾಸಿಸ್. ಇದರಲ್ಲಿ ಬಿಳಿಯ ಪದರಗಳಿರುವ ಕೆಂಪಾದ ಮಚ್ಚೆಗಳು ಆಗುತ್ತವೆ. ಇವು ಸಾಮಾನ್ಯವಾಗಿ ತುರಿಸದಿದ್ದರೂ ಮಚ್ಚೆಗಳನ್ನು ಕಿತ್ತುವುದು, ಒಣಚರ್ಮ, ಕೆಲವರಲ್ಲಿ ತುರಿಕೆಯುಂಟುಮಾಡುತ್ತವೆ. ಚಳಿ, ಒಣಚರ್ಮ, ದೈಹಿಕ ಹಾಗೂ ಮಾನಸಿಕ ಒತ್ತಡಗಳು, ಧೂಮಪಾನ ಮತ್ತು ಮದ್ಯಪಾನಗಳು ಈ ರೋಗವನ್ನು ಹೆಚ್ಚಿಸುತ್ತವೆ. ಇದನ್ನು ಸಂಪೂರ್ಣ ಗುಣಪಡಿಸಲಾಗದಿದ್ದರೂ ನಿಯಂತ್ರಿಸಬಹುದು.

ಒಣಚರ್ಮ

ಕೆಲವೊಮ್ಮೆ ಯಾವುದೇ ಚರ್ಮರೋಗ ವಿರದಿದ್ದರೂ ಕೇವಲ ಒಣಚರ್ಮದಿಂದಲೇ ತುರಿಕೆಯಾಗುತ್ತದೆ. ಒಣಚರ್ಮದಿಂದ ಚರ್ಮದ ಸಮಗ್ರತೆಗೆ ತೊಂದರೆಯಾಗಿ ಕಿರಿಕಿರಿಯಾಗುತ್ತಾ ನವೆಯಾಗುತ್ತದೆ. ವಯಸ್ಸು ಹೆಚ್ಚಾದಂತೆ ಚರ್ಮದಲ್ಲಿ 'ಕೊಲ್ಯಾಜೆನ್' ಅಂಶ ಕಡಿಮೆಯಾಗಿ ಒಣಗುತ್ತಾ ತುರಿಕೆಯಾಗುತ್ತದೆ. ಕೆಲವರಿಗೆ ಚಿಕ್ಕ ವಯಸ್ಸಿನಲ್ಲೇ 'ಇಕ್ಥಿಯೋಸಿಸ್' ಎಂಬ ಕಾಯಿಲೆಯಿದ್ದು, ಇದರಲ್ಲಿ ಸತ್ತ ಚರ್ಮ ಕಳಚಿಹೋಗದೇ ಗಟ್ಟಿಯಾಗಿ ಮೀನಿನ ಚರ್ಮದಂತೆ ಕಾಣುತ್ತದೆ. ಇದೂ ತುರಿಸುತ್ತದೆ. ವಯಸ್ಕರಾದಂತೆ ಇದು ಕಡಿಮೆಯಾಗುತ್ತದೆ. ಕೆಲವರಿಗೆ ಇದು ವೃದ್ಧಾಪ್ಯದಲ್ಲಿ ಬರುತ್ತದೆ; ಕೆಲವು ಔಷಧಗಳ ಸೇವನೆಯ ದುಷ್ಪರಿಣಾಮದಿಂದ ಈ ಸಮಸ್ಯೆ ಉಂಟಾಗಬಹುದು. ಚಳಿ ಹಾಗೂ ಗಾಳಿ ಒಣಚರ್ಮವನ್ನು ಹೆಚ್ಚಿಸಿ ತುರಿಕೆಯನ್ನು ಹೆಚ್ಚಿಸುತ್ತದೆ. ವಿಟಮಿನ್ 'ಎ' ಕಡಿಮೆಯಾದರೂ ಒಣಚರ್ಮ ಉಂಟಾಗಿ, ಚರ್ಮ ತುರಿಸುತ್ತದೆ.

ಗರ್ಭಿಣಿಯರಲ್ಲಿ ತುರಿಕೆ

ಗರ್ಭಿಣಿಯರಲ್ಲಿ ಪಿತ್ತದ ಅಂಶ ಹೆಚ್ಚಾಗಿ ಕಾಮಾಲೆ ಹಾಗೂ ನವೆ ಉಂಟಾಗಬಹುದು. ಹಾರ್ಮೋನ್‌ಗಳ ವ್ಯತ್ಯಾಸದಿಂದಲೂ ತುರಿಕೆಯಾಗಬಹುದು. ಕೆಲವರಿಗೆ ಗರ್ಭಧಾರಣೆಯ ಕೊನೆಯ ಮೂರು ತಿಂಗಳುಗಳಲ್ಲಿ ಹೊಟ್ಟೆಯಲ್ಲಿ ಗಂಧೆಗಳಂಥ ಕೆಂಪು ತುರಿಸುವ ಗುಳ್ಳೆಗಳಾಗಿ ಇತರ ಭಾಗಗಳಿಗೆ ಹರಡುತ್ತವೆ. ಕಾರಣ ಸ್ಪಷ್ಟವಿಲ್ಲದ ಇದನ್ನು 'Pruritic Urticarial Papules and Plaques of Pregnancy' (Puppp) ಎಂದು ಕರೆಯುತ್ತಾರೆ. ಇದು ಪ್ರಸವದ ನಂತರ ನಿಧಾನವಾಗಿ ಕಡಿಮೆಯಾಗುತ್ತದೆ. ಅಪರೂಪವಾಗಿ 'ಪೆಂಫಿಗಾಯ್ಡ್ ಗೆಸ್ಟೇಷನಿಸ್'' ಎಂಬ ರೋಗನಿರೋಧಕ ಶಕ್ತಿ ತಿರುಗಿ ಬೀಳುವ ಕಾಯಿಲೆಯಾಗಿ, ಚರ್ಮವನ್ನು ತುರಿಸುವ ನೀರ್ಗುಳ್ಳೆಗಳಾಗಿ ಕಾಡುತ್ತವೆ.

ಆಂತರಿಕ ಕಾರಣಗಳು

ಪಿತ್ತಜನಕಾಂಗದ ಕಾಯಿಲೆ, ಮೂತ್ರಪಿಂಡಗಳ ಕಾಯಿಲೆ, ಮಧುಮೇಹ, ರಕ್ತಹೀನತೆ, ಥೈರಾಯ್ಡ್ ಗ್ರಂಥಿಯ ಸಮಸ್ಯೆಗಳು, ಮೊದಲಾದ ಆಂತರಿಕ ಕಾಯಿಲೆಗಳಿಂದಲೂ ಚರ್ಮದ ತುರಿಕೆಯಾಗುತ್ತದೆ.

ಪರಿಹಾರ ಮತ್ತು ನಿವಾರಣೋಪಾಯಗಳು

ತುರಿಕೆಯಿರುವವರು ಬೇಗನೆ ಚರ್ಮರೋಗ ತಜ್ಞರನ್ನು ಭೇಟಿಯಾಗಬೇಕು. ತುರಿಕೆಗೆ ಮೂಲ ಕಾರಣ ಏನೆಂಬುದನ್ನು ಪರಿಶೀಲಿಸಿ ಅದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಿದರೆ ತುರಿಕೆ ಕಡಿಮೆಯಾಗುತ್ತದೆ. ಕೆಲವೊಮ್ಮೆ ಸಮಸ್ಯೆಯ ಕಾರಣವನ್ನು ತಿಳಿಯಲು ರಕ್ತಪರೀಕ್ಷೆಯನ್ನು ಬೇಕಾಗಬಹುದು. ಕಜ್ಜಿ ಮತ್ತು ಫಂಗಸ್ ಕಾಯಿಲೆಗಳಿಗೆ ಒಳ್ಳೆಯ ಚಿಕಿತ್ಸೆಗಳು ಲಭ್ಯವಿವೆ. ನಿತ್ಯವೂ ಸ್ನಾನವನ್ನು ಮಾಡುವುದು, ಚೆನ್ನಾಗಿ ಒರೆಸಿಕೊಳ್ಳುವುದು, ನಿತ್ಯವೂ ಬೇರೆ ಬಟ್ಟೆಗಳನ್ನು ಧರಿಸುವುದು, ಬೆವರುವುದನ್ನು ಪ್ರೋತ್ಸಾಹಿಸುವ ಬಿಗಿ ಬಟ್ಟೆಗಳನ್ನು ಬೇಸಿಗೆಯಲ್ಲಿ ಧರಿಸದಿರುವುದು, ಮೊದಲಾದ ಕ್ರಿಯೆಗಳಿಂದ ಫಂಗಸ್ ರೋಗಗಳಾಗದಂತೆ ತಡೆಯಬಹುದು. ಕೀಟಗಳ ಕಚ್ಚುವಿಕೆಯನ್ನು ತಪ್ಪಿಸಲು ಸಂಜೆಯ ಬಳಿಕ ಕೈಕಾಲುಗಳನ್ನು ಪೂರ್ತಿ ಮುಚ್ಚುವ ಬಟ್ಟೆಗಳನ್ನು ಧರಿಸಬೇಕು.

ಅರ್ಟಿಕೇರಿಯಗೆ ಕಾರಣವಾಗುವ ಅಲರ್ಜಿಯ ಅಂಶವನ್ನು ಗುರುತಿಸಿ ದೂರ ಮಾಡಿದರೆ ಅದು ಗುಣವಾಗುತ್ತದೆ. ದೀರ್ಘಾವಧಿಯ ಅರ್ಟಿಕೇರಿಯದಲ್ಲಿ ಕೆಲವೊಮ್ಮೆ ಅದು ತಿಳಿಯದಿದ್ದಾಗ ದೀರ್ಘಕಾಲ 'ಆ್ಯಂಟಿಹಿಸ್ಟಮೀನ್' ಮಾತ್ರೆಗಳನ್ನು ವೈದ್ಯರ ನಿರ್ದೇಶನದಲ್ಲಿ ಸೇವಿಸಿದರೆ ಇದು ಗುಣವಾಗುತ್ತದೆ.

ಔಷಧಗಳ ಅಲರ್ಜಿಯಿದ್ದಲ್ಲಿ ಆ ಔಷಧಗಳನ್ನು ನಿಲ್ಲಿಸಬೇಕು. ಇಸುಬಿಗೆ ಕಾರಣವಾಗುವ ವಸ್ತುಗಳನ್ನು ದೂರ ಮಾಡಬೇಕು. ಇವು ಬಟ್ಟೆ ಸಾಬೂನು ಮತ್ತು ಪಾತ್ರೆ ಪುಡಿಯಾಗಿದ್ದರೆ ಕೈಗವುಸು ಹಾಕಿಕೊಂಡು ಅವನ್ನು ಬಳಸಬೇಕು. ಎಟೋಪಿಕ್ ಡರ್ಮಟೈಟಿಸ್, ಸೋರಿಯಾಸಿಸ್, ಒಣ ಇಸುಬುಗಳಲ್ಲಿ ತೇವಾಂಶ ಹೆಚ್ಚಿಸುವ ದ್ರಾವಣಗಳನ್ನು ಔಷಧಯ ಲೇಪನಗಳೊಂದಿಗೆ ಬಳಸಬೇಕು. ಒಣಚರ್ಮಕ್ಕೂ ತೇವಾಂಶ ಹೆಚ್ಚಿಸುವ ದ್ರಾವಣಗಳನ್ನು ಸವರುತ್ತಿರಬೇಕು. ಪೇಟೆಯಲ್ಲಿ ಸಿಗುವ ದ್ರಾವಣಗಳಲ್ಲದೇ ಸುಲಭವಾಗಿ ದೊರೆಯುವ ಕೊಬ್ಬರಿ ಎಣ್ಣೆಯಂಥ ದ್ರಾವಣಗಳನ್ನೂ ಬಳಸಬಹುದು. ನಿತ್ಯ ಸ್ನಾನ ಹಾಗೂ ಸ್ನಾನಕ್ಕೂ ತೇವಾಂಶ ಹೆಚ್ಚಿಸುವ ಸಾಬೂನನ್ನು ಬಳಸುವುದು ಒಣಚರ್ಮವನ್ನು ನಿವಾರಿಸುತ್ತದೆ. ಬಿಸಿಲಿನ ಅಲರ್ಜಿಯನ್ನು ತಪ್ಪಿಸಲು ಒಳ್ಳೆಯ 'ಸನ್ ಸ್ಕ್ರೀನ್' ಅಥವಾ ಬಿಸಿಲುನಿವಾರಕಗಳನ್ನು ಬಳಸಬೇಕು. ಸಾಮಾನ್ಯವಾಗಿ ಯಾವುದೇ ಕಾರಣದ ತುರಿಕೆಗೆ 'ಆ್ಯಂಟಿಹಿಸ್ಟಮಿನ್' ಮಾತ್ರೆಗಳನ್ನು ನೀಡಲಾಗುತ್ತದೆ. ಆದರೆ ಇಷ್ಟು ಸಾಲದೇ ಮೂಲ ಕಾರಣವನ್ನು ನಿವಾರಿಸಬೇಕು. ಜೊತೆಗೆ ಕೆರೆದಷ್ಟೂ ನವೆ ಹೆಚ್ಚುವುದರಿಂದ ಕೆರೆಯುವುದನ್ನು ತಪ್ಪಿಸಿ ಮನಸ್ಸನ್ನು ಬೇರೆ ಕಡೆ ಹರಿಸಿ, ತುರಿಕೆಯನ್ನು ಮರೆಯುವ ಪ್ರಯತ್ನವನ್ನು ಮಾಡಬೇಕು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಅಭ್ಯಾಸ 3.2

1. ಕೆಳಗಿನ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ಆದೇಶ ವಿಧಾನದಿಂದ ಬಿಡಿಸಿ (ಹಿಂದಿನ ಸಂಚಿಕೆಯಿಂದ)

(iii) $3x - y = 3$ ಮತ್ತು $9x - 3y = 9$ (ದತ್ತ)

ಸಮೀಕರಣ (1)ರಿಂದ

$x = (3+y)/3$

ಈಗ ಸಮೀಕರಣ (2)ರಲ್ಲಿ x ನ ಬೆಲೆಯನ್ನು ಹಾಕಿದಾಗ

$9(3+y)/3 - 3y = 9$

$\Rightarrow 9 + 3y - 3y = 9$

$\Rightarrow 9 = 9$

$x = (3+y)/3$, ಹೀಗಾಗಿ ದತ್ತ ಸಮೀಕರಣಗಳ ಜೋಡಿಗೆ ಅಪರಿಮಿತ ಪರಿಹಾರಗಳು ಇವೆ.

(iv) $0.2x + 0.3y = 1.3$ ಮತ್ತು $0.4x + 0.5y = 2.3$ ಎರಡು ಸಮೀಕರಣಗಳು (ದತ್ತ)

ಸಮೀಕರಣ 1 ರಿಂದ ನಾವು

$x = (1.3 - 0.3y)/0.2$ ______ (1)

ಈಗ x ನ ಬೆಲೆಯನ್ನು ಎರಡನೇ ಸಮೀಕರಣದಲ್ಲಿ ಹಾಕಿದಾಗ

$0.4(1.3-0.3y)/0.2 + 0.5y = 2.3$

$\Rightarrow 2(1.3 - 0.3y) + 0.5y = 2.3$

$\Rightarrow 2.6 - 0.6y + 0.5y = 2.3$

$\Rightarrow 2.6 - 0.1y = 2.3$

$\Rightarrow 0.1y = 0.3$

$\Rightarrow y = 3$

ಈಗ y ನ ಬೆಲೆಯನ್ನು ಸಮೀಕರಣ(1)ರಲ್ಲಿ ಹಾಕಿದಾಗ

$x = (1.3-0.3(3))/0.2 = (1.3-0.9)/0.2 = 0.4/0.2 = 2$

ಆದ್ದರಿಂದ $x = 2$ ಮತ್ತು $y = 3$.

(v) $\sqrt{2}x + \sqrt{3}y = 0$ ಮತ್ತು $\sqrt{3}x - \sqrt{8}y = 0$ (ದತ್ತ)

ಸಮೀಕರಣ 1 ರಿಂದ ನಾವು

$x = -(\sqrt{3}/\sqrt{2})y$ ______ (1)

ಈಗ x ನ ಬೆಲೆಯನ್ನು ಎರಡನೇ ಸಮೀಕರಣದಲ್ಲಿ ಹಾಕಿದಾಗ

$\sqrt{3}(-\sqrt{3}/\sqrt{2})y - \sqrt{8}y = 0 \Rightarrow (-3/\sqrt{2})y - \sqrt{8}y = 0$

$\Rightarrow y = 0$

ಈಗ y ನ ಬೆಲೆಯನ್ನು ಸಮೀಕರಣ(1)ರಲ್ಲಿ ಹಾಕಿದಾಗ

$x = 0$

ಆದ್ದರಿಂದ $x = 0$ and $y = 0$.

(vi) $\frac{x}{2} + \frac{2y}{3} = -1$ and $x - \frac{y}{3} = 3$ ದತ್ತ

ಸಮೀಕರಣ 1 ರಿಂದ ನಾವು

$(3/2)x = -2 + (5y/3)$

$\Rightarrow x = 2(-6+5y)/9 = (-12+10y)/9$ ....(1)

ಈಗ x ನ ಬೆಲೆಯನ್ನು ಎರಡನೇ ಸಮೀಕರಣದಲ್ಲಿ ಹಾಕಿದಾಗ

$((-12+10y)/9)/3 + y/2 = 13/6$

$\Rightarrow y/2 = 13/6 - ((-12+10y)/27) + y/2 = 13/6$

$$\frac{\frac{-12+10y}{9}}{3} + \frac{y}{2} = \frac{13}{6} \Rightarrow \frac{-12+10y}{27} + \frac{y}{2} = \frac{13}{6}$$

$$\Rightarrow \frac{y}{2} = \frac{13}{6} - \frac{-12+10y}{27} \Rightarrow \frac{y}{2} = \frac{117}{54} - \frac{-24+20y}{54}$$

$$\Rightarrow \frac{y}{2} = \frac{117+24-20y}{54}$$

$\Rightarrow y = 3$

ಈಗ y ನ ಬೆಲೆಯನ್ನು ಸಮೀಕರಣ(1)ರಲ್ಲಿ ಹಾಕಿದಾಗ

, $(3x/2) - 5(3)/3 = -2$

$\Rightarrow (3x/2) - 5 = -2 \Rightarrow x = 2$

ಆದ್ದರಿಂದ, $x = 2$ and $y = 3$.

2) $2x + 3y = 11$ ಮತ್ತು $2x - 4y = -24$ ನ್ನು ಬಿಡಿಸಿರಿ ಮತ್ತು ಇದರಿಂದ $y = mx + 3$ ರಲ್ಲಿ m ನ ಬೆಲೆಯನ್ನು ಕಂಡುಹಿಡಿಯಿರಿ.

ಪರಿಹಾರ:–

$2x + 3y = 11$ ....(I)

$2x - 4y = -24$ .... (II)

ಸಮೀಕರಣ (II), ನಾವು ಕೆಳಗಿನದನ್ನು ಪಡೆಯುತ್ತೇವೆ

$x = (11-3y)/2$ ....(III)

ಸಮೀಕರಣ (II), ರಲ್ಲಿ xನ ಬೆಲೆಯನ್ನು ಆದೇಶಿಸಿದಾಗ ನಾವು ಕೆಳಗಿನದನ್ನು ಪಡೆಯುತ್ತೇವೆ

$2(11-3y)/2 - 4y = 24$

$11 - 3y - 4y = -24$

$-7y = -35$

$y = 5$ ....(IV)

ಸಮೀಕರಣ (III)ರಲ್ಲಿ yನ ಬೆಲೆಯನ್ನು ಆದೇಶಿಸಿದಾಗ ನಾವು ಕೆಳಗಿನದನ್ನು ಪಡೆಯುತ್ತೇವೆ ಹಾಗೆಯೇ

$x = (11-3\times5)/2 = -4/2 = -2$

ಆದ್ದರಿಂದ, $x = -2$, $y = 5$

ಹಾಗೆಯೇ

$y = mx + 3$

$5 = -2m + 3$

$-2m = 2$

$m = -1$

ಆದ್ದರಿಂದ **m** ಮೌಲ್ಯ= 1

3. ಕೆಳಗಿನ ಸಮಸ್ಯೆಗಳಿಗೆ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ರಚಿಸಿರಿ ಮತ್ತು ಆದೇಶ ವಿಧಾನದಿಂದ ಅವುಗಳ ಪರಿಹಾರಗಳನ್ನು ಕಂಡುಹಿಡಿಯಿರಿ.

(i) ಎರಡು ಸಂಖ್ಯೆಗಳ ವ್ಯತ್ಯಾಸ 26 ಮತ್ತು ಒಂದು ಸಂಖ್ಯೆಯು ಇನ್ನೊಂದರ ಮೂರರಷ್ಟಿದೆ. ಅವುಗಳನ್ನು ಕಂಡುಹಿಡಿಯಿರಿ.

(ii) ಎರಡು ಪರಿಪೂರಕ ಕೋನಗಳಲ್ಲಿ ದೊಡ್ಡ ಕೋನವು ಚಿಕ್ಕ ಕೋನಕ್ಕಿಂತ 18 ಡಿಗ್ರಿ ಅಧಿಕವಾಗಿದೆ. ಅವುಗಳನ್ನು ಕಂಡುಹಿಡಿಯಿರಿ.

(iii) ಕ್ರಿಕೆಟ್ ತಂಡವೊಂದರ ತರಬೇತುಗಾರ್ತಿಯು 7 ಬ್ಯಾಟ್‌ಗಳು ಮತ್ತು 6 ಚೆಂಡುಗಳನ್ನು ₹ 3800 ಕ್ಕೆ ಕೊಳ್ಳುತ್ತಾರೆ. ಆ ಬಳಿಕ 3 ಬ್ಯಾಟ್‌ಗಳು ಮತ್ತು 5 ಚೆಂಡುಗಳನ್ನು ಅವರು ₹ 1750 ಕ್ಕೆ ಕೊಳ್ಳುತ್ತಾರೆ. ಪ್ರತಿಯೊಂದು ಬ್ಯಾಟ್ ಮತ್ತು ಪ್ರತಿಯೊಂದು ಚೆಂಡಿನ ಬೆಲೆಗಳನ್ನು ಕಂಡುಹಿಡಿಯಿರಿ.

(iv) ಒಂದು ನಗರದಲ್ಲಿ ಟ್ಯಾಕ್ಸಿ ಬಾಡಿಗೆಯು ಎರಡು ಭಾಗಗಳಿಂದ ಕೂಡಿದೆ. ಮೊದಲನೆಯದು ನಿಗದಿತ ಬಾಡಿಗೆ ಮತ್ತು ಎರಡನೆಯದು ಚಲಿಸಿದ ದೂರಕ್ಕೆ ಅನುಗುಣವಾಗಿ ಬಾಡಿಗೆ. ಇವೆರಡನ್ನು ಸೇರಿಸಿ ಒಟ್ಟು ಬಾಡಿಗೆ ಎನ್ನುತ್ತೇವೆ. ಒಟ್ಟು ಬಾಡಿಗೆಯು 10 km ಪ್ರಯಾಣಕ್ಕೆ ₹ 105 ಮತ್ತು 15 km ಪ್ರಯಾಣಕ್ಕೆ ₹ 155. ಹಾಗಾದರೆ ನಿಗದಿತ ಬಾಡಿಗೆ ಮತ್ತು ಪ್ರತಿ ಕಿಲೋಮೀಟರ್‌ನ ಪ್ರಯಾಣಕ್ಕೆ ಬಾಡಿಗೆ ದರಗಳನ್ನು ಕಂಡುಹಿಡಿಯಿರಿ. ಒಬ್ಬ ವ್ಯಕ್ತಿಯು 25 km ದೂರವನ್ನು ಪ್ರಯಾಣಿಸಿದರೆ ನೀಡಬೇಕಾದ ಒಟ್ಟು ಬಾಡಿಗೆಯನ್ನು ಕಂಡುಹಿಡಿಯಿರಿ.

(v) ಒಂದು ಭಿನ್ನರಾಶಿಯ ಅಂಶ ಮತ್ತು ಛೇದಗಳೆರಡಕ್ಕೂ 2ನ್ನು ಸೇರಿಸಿದರೆ, ಆ ಭಿನ್ನರಾಶಿಯು 911 ಆಗುತ್ತದೆ. ಅದೇ ಅಂಶ ಮತ್ತು ಛೇದಗಳೆರಡಕ್ಕೂ 3ನ್ನು ಸೇರಿಸಿದರೆ ಅದು 56 ಆಗುತ್ತದೆ. ಆ ಭಿನ್ನರಾಶಿಯನ್ನು ಕಂಡುಹಿಡಿಯಿರಿ.

(vi) ಐದು ವರ್ಷಗಳ ಬಳಿಕ ಜೇಕಬ್‌ರ ವಯಸ್ಸು ಅವರ ಮಗನ ವಯಸ್ಸಿನ ಮೂರರಷ್ಟಾಗುತ್ತದೆ. ಐದು ವರ್ಷಗಳ ಹಿಂದೆ ಜೇಕಬ್‌ರ ವಯಸ್ಸು ಅವರ ಮಗನ ವಯಸ್ಸಿನ ಏಳರಷ್ಟಿತ್ತು ಅವರಿಬ್ಬರ ಈಗಿನ ವಯಸ್ಸು ಎಷ್ಟು?

(ಮುದುವರೆಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾ ರತಿಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

II PUC : MATHEMATICS

DETERMINANTS

Applications of simultaneous linear equations

1. The sum of three numbers is 6. If we multiply the third number by 2 and add the first number to the result, we get 7. By adding second and third numbers to three times the first number, we get 12. Using matrices find the numbers.

Soln:- (..........Contd)

$$\begin{bmatrix}1&1&1\\1&0&2\\3&1&1\end{bmatrix}\begin{bmatrix}x\\y\\z\end{bmatrix}=\begin{bmatrix}6\\7\\12\end{bmatrix} \text{ i.e., } AX = B$$

$$\text{where } A=\begin{bmatrix}1&1&1\\1&0&2\\3&1&1\end{bmatrix}, X=\begin{bmatrix}x\\y\\z\end{bmatrix} \text{ and } B=\begin{bmatrix}6\\7\\12\end{bmatrix}$$

$$\text{Now, } |A| = \begin{vmatrix}1&1&1\\1&0&2\\3&1&1\end{vmatrix}$$

$$= 1(0-2)-(1-6)+(1-0)$$

$$= -2+5+1 = 4 \neq 0$$

$\therefore$ the above system of equations has a unique solution, given by $X = A^{-1}B$.

$$\therefore \text{adj } A = \begin{bmatrix}-2&5&1\\1&-2&2\\-2&-1&-1\end{bmatrix}' = \begin{bmatrix}-2&0&2\\5&-2&-1\\1&2&-1\end{bmatrix}$$

$$\Rightarrow A^{-1} = \frac{1}{|A|}\text{adj } A = \frac{1}{4}\begin{bmatrix}-2&0&2\\5&-2&-1\\1&2&-1\end{bmatrix}$$

Now, $X = A^{-1}B$

$$\Rightarrow X = \frac{1}{4}\begin{bmatrix}-2&0&2\\5&-2&-1\\1&2&-1\end{bmatrix}\begin{bmatrix}6\\7\\12\end{bmatrix}$$

$$\Rightarrow \frac{1}{4}\begin{bmatrix}-12+0+24\\30-14-12\\6+14-12\end{bmatrix} = \begin{bmatrix}3\\1\\2\end{bmatrix}$$

$$\therefore \begin{bmatrix}x\\y\\z\end{bmatrix} = \begin{bmatrix}3\\1\\2\end{bmatrix}.$$

Thus $x = 3$, $y = 1$ and $z = 2$.

Hence, the three numbers are 3, 1 and 2 respectively.

2. An amount of Rs. 5000 is put into three investments at the rate of interest of 6%, 7% and 8% per annum respectively. The total annual income is Rs. 358. If the combined income from the first two investments is Rs. 70 more than the income from the third, find the amount of each investment by matrix method.

Soln:- Let x, y and z Rs. be the investments at the rates of interest of 6%, 7% and 8% per annum respectively.

Then, Total investment = Rs 5000

gives $x + y + z = 5000$

Now, income from 1st investment of Rs.x

$$= \text{Rs.}\frac{6x}{100}$$

Income from 2nd investment of Rs.y

$$= \text{Rs.}\frac{7y}{100}$$

Income from 3rd investment of Rs.z

$$= \text{Rs.}\frac{8z}{100}$$

Total annual income

$$= \text{Rs.}\left(\frac{6x}{100}+\frac{7y}{100}+\frac{8z}{100}\right)$$

$$\Rightarrow \frac{6x}{100}+\frac{7y}{100}+\frac{8z}{100} = 358$$

[$\because$ total annual income = Rs.35800]

$\Rightarrow 6x + 7y + 8z = 35800$

Since the combined income from the first two investments is Rs. 70 more than the income from the third.

$$\therefore \frac{6x}{100}+\frac{7y}{100} = 70 + \frac{8z}{100}$$

$$\Rightarrow 6x + 7y - 8z = 7000$$

Thus, we have $x + y + z = 5000$

$6x + 7y + 8z = 35800$

$6x + 7y - 8z = 7000$

This system of equations can be written in matrix form as follows:

$$\begin{bmatrix}1&1&1\\6&7&8\\6&7&-8\end{bmatrix}\begin{bmatrix}x\\y\\z\end{bmatrix} = \begin{bmatrix}5000\\35800\\7000\end{bmatrix} \text{ (or)}$$

$AX = B$;

$$\text{where } A = \begin{bmatrix}1&1&1\\6&7&8\\6&7&-8\end{bmatrix}, X = \begin{bmatrix}x\\y\\z\end{bmatrix} \text{ and}$$

$$B = \begin{bmatrix}5000\\35800\\7000\end{bmatrix}$$

$$\text{Now, } |A| = \begin{vmatrix}1&1&1\\6&7&8\\6&7&-8\end{vmatrix}$$

$$= 1(-56-56)-(-48-48)+(42-42)$$

$$= -16 \neq 0.$$

$\therefore A^{-1}$ exists and the solution of the given system of equations is given by $X = A^{-1}B$.

(Contd.........)

ಸರೋಜಾದೇವಿಗೆ ಗಣ್ಯರ ಕಂಬನಿ

ಕನ್ನಡದ ಹಿರಿಯ ನಟಿ ಬಿ.ಸರೋಜಾದೇವಿ ಅವರು ಕನ್ನಡ ಸೇರಿದಂತೆ ತಮಿಳು, ತೆಲುಗು ಮತ್ತು ಹಿಂದಿ ಚಿತ್ರರಂಗದಲ್ಲಿ ಸುಮಾರು 200 ಚಿತ್ರಗಳಲ್ಲಿ ನಟಿಸಿ, ಅಭಿನಯ ಸರಸ್ವತಿ ಎಂದೇ ಖ್ಯಾತರಾಗಿದ್ದರು. ಸದಭಿರುಚಿಯ ಚಿತ್ರಗಳ ಮೂಲಕ ದಶಕಗಳ ಕಾಲ ಸಿನಿಪ್ರಿಯರನ್ನು ರಂಜಿಸಿದ್ದ ಅವರ ಅಗಲಿಕೆ ಭಾರತೀಯ ಚಿತ್ರರಂಗಕ್ಕಾದ ಬಹುದೊಡ್ಡ ನಷ್ಟ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಲಕ್ಷಾಂತರ ಅಭಿಮಾನಿಗಳ ಹೃದಯ ಗೆದ್ದಿದ್ದ ಶ್ರೇಷ್ಠ ನಟಿ ಸರೋಜಾದೇವಿ, ಇನ್ನು ನಮ್ಮೊಂದಿಗೆ ಇಲ್ಲ. ಅವರ ಆತ್ಮಕ್ಕೆ ಶಾಂತಿ ಸಿಗಲಿ

ರಜನೀಕಾಂತ್, ನಟ

ಸರೋಜಾದೇವಿ ಅವರು ನಮ್ಮ ಕುಟುಂಬಕ್ಕೆ ಆತ್ಮೀಯರಾಗಿದ್ದರು. ನನಗೆ ಬಾಲ್ಯದಿಂದಲೂ ಅವರೊಂದಿಗೆ ಒಡನಾಟವಿತ್ತು. ಒಂದು ರೀತಿ ತಾಯಿಯ ಸ್ಥಾನ ತುಂಬಿದ್ದರು. ಅವರು ಭಾರತೀಯ ಸಿನಿಮಾ ರಂಗದ ಆಸ್ತಿ. ಕುಟುಂಬದ ಸದಸ್ಯರೊಬ್ಬರನ್ನು ಕಳೆದುಕೊಂಡಂತಾಗಿದೆ. ಅವರಿಲ್ಲ ಎಂಬುದನ್ನು ನೆನಸಿಕೊಳ್ಳುವಾಗ ದುಃಖವಾಗುತ್ತದೆ

ಶಿವರಾಜ್‌ಕುಮಾರ್, ನಟ

ಸರೋಜಮ್ಮ ಅವರು ಭಾರತೀಯ ಚಲನಚಿತ್ರರಂಗದಲ್ಲಿ ಬೆಳಗಿದ ಮೊದಲ ಕನ್ನಡತಿ. ಆ ಕಾಲದಲ್ಲೇ ಪ್ಯಾನ್ ಇಂಡಿಯಾ ನಟಿಯಾಗಿದ್ದರು. ಜೀವನವನ್ನು ತುಂಬಾ ಸಕಾರಾತ್ಮಕವಾಗಿ ಅನುಭವಿಸಿದ ಕಲಾವಿದೆ. ಹೀರೊಗೆ ಸಮಾನರಾಗಿ ಬದುಕಿದ ಹೀರೋಯಿನ್ ಅವರು. ಅವರೊಂದಿಗೆ ನನ್ನದು ತಾಯಿ–ಮಗಳ ಬಾಂಧವ್ಯ. ಅವರು ಈಗ ದೈಹಿಕವಾಗಿಲ್ಲ. ಆದರೆ ಸದಾ ನಮ್ಮೊಂದಿಗಿರುತ್ತಾರೆ

ತಾರಾ, ನಟಿ

ಸರೋಜಮ್ಮ ಆ ಕಾಲದಲ್ಲೇ ರಾಜ್ಯಗಳನ್ನು ಸುತ್ತಾಡಿ, ವಿವಿಧ ಭಾಷೆಗಳಲ್ಲಿ ನಟಿಸಿದ ಮಹಾನಟಿ. ತುಂಬಾ ಚೈತನ್ಯ ತುಂಬಿದ ವ್ಯಕ್ತಿತ್ವ. ಯಾರು ಚಟುವಟಿಕೆಯಿಂದ ಕೆಲಸ ಮಾಡಿ ಸಮಾಜಕ್ಕೆ ನೆನಪನ್ನು ಬಿಟ್ಟು ಹೋಗುತ್ತಾರೋ ಅವರದ್ದು ವಿದಾಯವಲ್ಲ, ಚಿರಸ್ಮರಣೆ. ಸರೋಜಾದೇವಿ ಅವರದ್ದು ಸಾವಲ್ಲ, ಹುಟ್ಟು

ಯೋಗರಾಜ ಭಟ್, ನಿರ್ದೇಶಕ

ನನ್ನ 'ಎ' ಸಿನಿಮಾ ಇನ್ನೂ ಸೆನ್ಸಾರ್ ಆಗಿರಲಿಲ್ಲ. ಅದು ರಿವೈಸಿಂಗ್ ಕಮಿಟಿಗೆ ಹೋಗಿತ್ತು. ಆ ಕಮಿಟಿಯ ಅಧ್ಯಕ್ಷರಾಗಿದ್ದವರು ಸರೋಜಾದೇವಿ ಅವರು. ಎಲ್ಲರೂ ನನ್ನ ಚಿತ್ರ ನೋಡಿ ಬೈಯುತ್ತಿದ್ದರೆ, ಅವರು ಸಿನಿಮಾ ನೋಡಿ ಮೆಚ್ಚಿದ್ದರು. ಸೆನ್ಸಾರ್ ಮಾಡಿಸಿ, ಸಿನಿಮಾ ಬಿಡುಗಡೆಗೆ ನೆರವಾದರು. ಒಂದು ರೀತಿಯಲ್ಲಿ ಇವತ್ತು ಹೀರೊ ಆಗುವುದಕ್ಕೆ ಕಾರಣರಾದವರು ಅವರು. ಅವರೊಬ್ಬ ಪರಿಪೂರ್ಣ ಕಲಾವಿದೆ

ಉಪೇಂದ್ರ, ನಟ

ಅಭಿನೇತ್ರಿ ಬಿ.ಸರೋಜಾದೇವಿ ಅವರು ಕನ್ನಡವೂ ಸೇರಿದಂತೆ ಪಂಚಭಾಷೆಗಳ ನೂರಾರು ಸಿನಿಮಾಗಳಲ್ಲಿ, ಮೇರು ನಟರೊಂದಿಗೆ ಅಭಿನಯಿಸಿ, ಜನಪ್ರಿಯತೆ ಗಳಿಸಿದ್ದರು. ಸಾಂಸ್ಕೃತಿಕ ಕ್ಷೇತ್ರಕ್ಕೆ ಅವರು ನೀಡಿದ ಅನುಪಮ ಕೊಡುಗೆಯನ್ನು ಗುರುತಿಸಿ ಶ್ರೀಮಠವು 2009ರಲ್ಲಿ 'ಚುಂಚಶ್ರೀ' ಪ್ರಶಸ್ತಿ ನೀಡಿ ಗೌರವಿಸಿತ್ತು. ಅಭಿನಯ ಮತ್ತು ವ್ಯಕ್ತಿತ್ವದಿಂದ ಜನಮನದಲ್ಲಿ ನೆಲಸಿದ್ದ ಸರೋಜಾದೇವಿ ಅವರ ನಿಧನದಿಂದ ಸಾಂಸ್ಕೃತಿಕ ಲೋಕಕ್ಕೆ ಭರಿಸಲಾಗದ ನಷ್ಟವಾಗಿದೆ

ನಿರ್ಮಲಾನಂದನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ನನಗೆ ಎಷ್ಟೇ ವಯಸ್ಸಾಗಿರಲಿ, ಅವರು ನನ್ನ ನೋಡಿದಾಗಲೆಲ್ಲಾ ಗಲ್ಲವನ್ನು ಹಿಡಿದು 'ಮಗನೇ' ಎಂದು ಕರೆಯುತ್ತಿದ್ದರು. ಸರೋಜಾದೇವಿ ಅವರು ನನಗೆ ಮತ್ತೊಬ್ಬ ತಾಯಿಯೇ ಆಗಿದ್ದರು. ಅವರು ಭಾಷೆ ಮತ್ತು ಪ್ರಾಂತ್ಯದ ಎಲ್ಲೆಗಳನ್ನು ಮೀರಿ ಬದುಕಿದ್ದ ಕಲಾವಿದೆ. ನನ್ನ ಎರಡನೇ ಚಿತ್ರ 'ಪಾರ್ಥಲ್ ಪಾಸಿ ತೀರಂ'ನ ಚಿತ್ರೀಕರಣದಿಂದ ಹಿಡಿದು ಇಲ್ಲಿಯವರೆಗೂ ಅವರೊಂದಿಗಿನ ಎಣಿಸಲು ಸಾಧ್ಯವಿಲ್ಲದ ಮರೆಯಲಾಗದ ನೆನಪುಗಳು ನನ್ನ ಹೃದಯದಲ್ಲಿ ಅಲೆಗಳನ್ನು ಎಬ್ಬಿಸುತ್ತಿವೆ. ನನ್ನ ಕಂಗಳು ತುಂಬಿವೆ. ಅವರ ಹೃದಯವು, ನಾನು ಯಾವಾಗಲೂ ಮೊದಲಿಗನಾಗಿರಬೇಕು ಎಂದು ಹಾರೈಸುತ್ತಿತ್ತು. ಅವರಿಗೆ ತಲೆಬಾಗುವೆ

ಕಮಲ್ ಹಾಸನ್, ನಟ

ಸಿನಿಮಾದ ಸುವರ್ಣಯುಗವೊಂದು ಅಂತ್ಯವಾಗಿದೆ. ಸರೋಜಾದೇವಿ ಅಮ್ಮ ಅವರು ಎಲ್ಲ ಸಾರ್ವಕಾಲಿಕ ಶ್ರೇಷ್ಠ ನಟಿಯಾಗಿದ್ದರು. ದಕ್ಷಿಣ ಭಾರತದಲ್ಲಿ ಅವರಷ್ಟು ಹೆಸರು ಗಳಿಸಿದ, ಜನಪ್ರಿಯತೆ ಗಳಿಸಿದ್ದ ಬೇರೆ ನಟಿ ಇಲ್ಲ. ನಾನು ಅವರೊಂದಿಗೆ ಉತ್ತಮ ಒಡನಾಟ ಹೊಂದಿದ್ದೆ. ನಾನು ಬೆಂಗಳೂರಿಗೆ ಹೋದಾಗ ಅವರನ್ನು ಭೇಟಿಯಾಗದೆ ನನ್ನ ಪ್ರವಾಸ ಕೊನೆಯಾಗುತ್ತಿರಲಿಲ್ಲ. ಚೆನ್ನೈನಲ್ಲಿ ಇದ್ದಾಗಲೆಲ್ಲ ಅವರು ಕರೆ ಮಾಡುತ್ತಿದ್ದರು. ಅವರ ಅಗಲಿಕೆ ನನಗೆ ತುಂಬಾ ನಷ್ಟವುಂಟುಮಾಡಿದೆ

ಖುಷ್ಬೂ, ನಟಿ

ಹುಟ್ಟೂರಿನಲ್ಲಿ ತಾಯಿ ಸಮಾಧಿ ಪಕ್ಕ ವಿರಾಮ

ದಶಾವರದಲ್ಲಿ ಸಕಲ ಗೌರವದೊಂದಿಗೆ ಇಂದು ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ತಾಲ್ಲೂಕಿನ ದಶಾವರದ ತೆಂಗಿನ ತೋಟದಲ್ಲಿರುವ ತಾಯಿ ರುದ್ರಮ್ಮ ಅವರ ಸಮಾಧಿ ಪಕ್ಕದಲ್ಲೇ ನಟಿ ಬಿ.ಸರೋಜಾದೇವಿ ಅವರ ಅಂತ್ಯಕ್ರಿಯೆ ಮಂಗಳವಾರ ನಡೆಯಲಿದೆ.

ರಾಜ್ಯ ಸರ್ಕಾರ ನಟಿಯ ಅಂತ್ಯಕ್ರಿಯೆಯನ್ನು ಸರ್ಕಾರಿ ಗೌರವದೊಂದಿಗೆ ನಡೆಸಲು ನಿರ್ಧರಿಸಿದೆ. ಸರೋಜಾದೇವಿ ಅವರಿಗೆ ಸೇರಿದ ತೆಂಗಿನ ತೋಟದಲ್ಲಿ ಅಂತಿಮ ಸಿದ್ಧತೆ ನಡೆದಿವೆ.

ಚನ್ನಪಟ್ಟಣದ ಶಾಸಕ ಸಿ.ಪಿ. ಯೋಗೇಶ್ವರ್ ಸಂಜೆ ಗ್ರಾಮಕ್ಕೆ ಭೇಟಿ ನೀಡಿ ಅಂತ್ಯಕ್ರಿಯೆ ನಡೆಯಲಿರುವ ಸ್ಥಳ ವೀಕ್ಷಿಸಿ, ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ತಹಶೀಲ್ದಾರ್ ಸೇರಿದಂತೆ ವಿವಿಧ ಅಧಿಕಾರಿಗಳು ಸಿದ್ಧತಾ ಕಾರ್ಯ ಕೈಗೊಂಡಿದ್ದಾರೆ.

ನಟಿಯ ಸಾವಿನ ಸುದ್ದಿ ಕೇಳಿ ಹುಟ್ಟೂರು ದಶಾವರದಲ್ಲಿ ನೀರವಮೌನ ಆವರಿಸಿದೆ. ಗ್ರಾಮದ ಅರಳಿಕಟ್ಟೆ ವೃತ್ತದ ಎದುರಿಗಿರುವ ಅವರ ಮನೆ 'ಬಿ. ಸರೋಜಾದೇವಿ ನಿಲಯ'ದ ಎದುರು ಗ್ರಾಮಸ್ಥರು ಹಾಗೂ ಅಭಿಮಾನಿಗಳು ಜಮಾಯಿಸಿದರು. ಮನೆ ಎದುರು ಅವರ ಫೋಟೊ ಇರಿಸಿ ಶ್ರದ್ಧಾಂಜಲಿ ಸಲ್ಲಿಸಿದರು. ಗ್ರಾಮದ ಹಿರಿಯರು ಸರೋಜಾದೇವಿ ಅವರ ನೆನಪುಗಳನ್ನು ಮೆಲುಕು ಹಾಕಿದರು.

'ನಮ್ಮೂರಿನ ಬೈರಪ್ಪನವರು ಪೊಲೀಸ್ ಇಲಾಖೆಯಲ್ಲಿದ್ದರು. ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರಿಂದ ಕುಟುಂಬ ಬೆಂಗಳೂರಿನಲ್ಲಿ ನೆಲಸಿತ್ತು. ಆದರೂ ಊರಿನ ಒಡನಾಟವಿತ್ತು. ಚಿಕ್ಕಂದಿನಿಂದಲೂ ಚೂಟಿಯಾಗಿದ್ದ ಸರೋಜಾದೇವಿ ಅವರು ನೃತ್ಯ, ಸಂಗೀತ ಹಾಗೂ ನಾಟಕದಲ್ಲಿ ಆಸಕ್ತಿ ಹೊಂದಿದ್ದರಿಂದ ಚಿತ್ರರಂಗ ಪ್ರವೇಶಿಸಿ ದೊಡ್ಡ ನಟಿಯಾಗಿ ಬೆಳೆದರು. ದೇಶದ ಚಿತ್ರರಂಗದಲ್ಲಿ ದೊಡ್ಡ ಹೆಸರು ಮಾಡಿ ನಮ್ಮೂರಿಗೆ ಕೀರ್ತಿ ತಂದರು' ಎಂದು ಗ್ರಾಮದ ಹಿರಿಯರು ಹೇಳಿದರು.

'ದೊಡ್ಡ ನಟಿಯಾಗಿದ್ದರೂ ಸರೋಜಾದೇವಿ ಅವರು ಹುಟ್ಟೂರನ್ನು ಮರೆತಿರಲಿಲ್ಲ. ವರ್ಷಕ್ಕೆ ನಾಲ್ಕೈದು ಸಲ ಬಂದು ಹೋಗುತ್ತಿದ್ದರು. ಪ್ರತಿ ವರ್ಷ ಪಿತೃಪಕ್ಷದ ಸಂದರ್ಭದಲ್ಲಿ ಗ್ರಾಮಕ್ಕೆ ಬಂದು ತಮ್ಮ ಪೂರ್ವಿಕರಿಗೆ ಎಡೆ ಇಟ್ಟು ಪೂಜೆ ಸಲ್ಲಿಸುವ ಪರಿಪಾಟ ಬೆಳೆಸಿಕೊಂಡಿದ್ದರು. ಗ್ರಾಮಕ್ಕೆ ಬಂದಾಗಲೆಲ್ಲಾ ತಾವು ಓಡಾಡಿದ ಜಾಗ ಮತ್ತು ತೋಟದಲ್ಲಿ ಸುತ್ತಾಡುತ್ತಿದ್ದರು. ಊರಿನವರನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರು' ಎಂದು ನೆನೆದರು.


ಬಿ. ಸರೋಜಾದೇವಿ ಅವರು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರೊಂದಿಗೆ ಇದ್ದ ಚಿತ್ರ

ಶಾಲೆ ಕಟ್ಟಿಸಿ ಕೊಟ್ಟಿದ್ದರು

'ತಮ್ಮೂರಿನ ಮಕ್ಕಳ ಶಿಕ್ಷಣಕ್ಕೆ ಸರಿಯಾದ ಕಟ್ಟಡ ಇಲ್ಲದಿರುವುದನ್ನು ಕಂಡು ಮರುಗಿದ್ದ ಸರೋಜಾದೇವಿ ಅವರು 1960ರಲ್ಲಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕಟ್ಟಡ ನಿರ್ಮಿಸಿ ಕೊಟ್ಟಿದ್ದರು. ಇಂದಿಗೂ ಮಕ್ಕಳು ಆ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಅವರು ಸಹಾಯ ಮಾಡಿರುವುದನ್ನು ಕಟ್ಟಡದಲ್ಲಿ ಬರೆಯಿಸಲಾಗಿದೆ' ಎಂದು ಗ್ರಾಮದಲ್ಲಿರುವ ಸರೋಜಾದೇವಿ ಅವರ ಮನೆ ಉಸ್ತುವಾರಿ ನೋಡಿಕೊಳ್ಳುವ ಡಿ.ಎಂ. ಕೃಷ್ಣಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಕುಂಚ ಗೌರವ

ನಟಿಯ ನಿಧನ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮಕ್ಕೆ ಭೇಟಿ ನೀಡಿದ ಚಿತ್ರಕಲಾವಿದ ತೂಬಿನಕೆರೆ ಗೋವಿಂದು ಅವರು ಸರೋಜಾ ದೇವಿ ಅವರ ಮನೆಯ ಕಾಂಪೌಂಡ್‌ನಲ್ಲಿ ಸರೋಜಾ ದೇವಿ ಅವರ ಚಿತ್ರ ಬಿಡಿಸುವ ಜೊತೆಗೆ ಕಿರು ಪರಿಚಯ, ನಟಿಸಿದ ಪ್ರಮುಖ ಸಿನಿಮಾಗಳು, ಅವರ ಪ್ರೇರಣದಾಯಕ ಮಾತುಗಳನ್ನು ಬರೆಯುವ ಮೂಲಕ ಗೌರವ ಸಲ್ಲಿಸಿದರು.


ಬೆಂಗಳೂರಿನ ಮಲ್ಲೇಶ್ವರದ ಸ್ವಗೃಹದಲ್ಲಿ ಬಹುಭಾಷಾ ನಟಿ ಬಿ. ಸರೋಜಾದೇವಿ ಅವರ ಅಂತಿಮ ದರ್ಶನ ಪಡೆಯಲು ಸಾಲಾಗಿ ನಿಂತಿದ್ದ ಜನರು ಚಿತ್ರ: ಪ್ರಶಾಂತ್ ಎಚ್‌.ಜಿ.



ಚನ್ನಪಟ್ಟಣ ತಾಲ್ಲೂಕಿನ ದಶಾವರದಲ್ಲಿರುವ ಬಿ. ಸರೋಜಾದೇವಿ ಅವರ ಮನೆಯ ಕಾಂಪೌಂಡ್ ಮೇಲೆ ಚಿತ್ರ ಕಲಾವಿದರ ತೂಬಿನಕೆರೆ ಗೋವಿಂದು ಬರೆದಿರುವ ಸರೋಜಾದೇವಿ ಅವರ ಸಾಧನೆ ಮತ್ತು ಪರಿಚಯದ ಸಂಕ್ಷಿಪ್ತ ಮಾಹಿತಿ

ಶಾಸಕ ಜನಾರ್ದನ ರೆಡ್ಡಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲ್ಯಾಣ ರಾಜ್ಯ ಪ್ರಗತಿ ಪಕ್ಷ'ದಿಂದ (ಕೆಆರ್‌ಪಿಪಿ) ಗಂಗಾವತಿ ವಿಧಾನಸಭಾ ಕ್ಷೇತ್ರದಲ್ಲಿ ಗೆದ್ದು ಶಾಸಕರಾಗಿರುವ ಗಾಲಿ ಜನಾರ್ದನ ರೆಡ್ಡಿ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಸುಳ್ಳು ಮಾಹಿತಿ ನೀಡಿದ್ದು, ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು' ಎಂದು ಕೋರಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಆಂಧ್ರಪ್ರದೇಶದ ಅನಂತಪುರಂ ನಿವಾಸಿ ಟಪಾಲ್ ಶ್ಯಾಮ್ ಪ್ರಸಾದ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಕೇಂದ್ರ ಚುನಾವಣಾ ಆಯೋಗ, ರಾಜ್ಯದ ಮುಖ್ಯ ಚುನಾವಣಾಧಿಕಾರಿ, ಗಂಗಾವತಿ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಹಾಗೂ ಜನಾರ್ದನ ರೆಡ್ಡಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಮನವಿ ಏನು?: 'ಗಂಗಾವತಿ ಕ್ಷೇತ್ರದಿಂದ ಆಯ್ಕೆಯಾಗಿರುವ ಜನಾರ್ದನ ರೆಡ್ಡಿ ನಮೂನೆ 25 ಮತ್ತು 26ರಲ್ಲಿ ತಮ್ಮ ಆಸ್ತಿಯ ನೈಜ ವಿವರ, ಕಾರುಗಳ ಮಾಹಿತಿ, ಕರ್ನಾಟಕ, ಆಂಧ್ರ ಪ್ರದೇಶದ ಕೋರ್ಟ್‌ನಲ್ಲಿ ಬಾಕಿಯಿರುವ ಪ್ರಕರಣಗಳ ವಿವರ, ಇತ್ಯರ್ಥವಾಗಿರುವ ಮತ್ತು ಶಿಕ್ಷೆಯಾಗಿರುವ ಪ್ರಕರಣಗಳ ಮಾಹಿತಿ ಒದಗಿಸಿಲ್ಲ. ಹೀಗಾಗಿ ಈ ಸಂಬಂಧ ನಾನು 2023ರ ಜೂನ್ 14ರಂದು ಆಯೋಗಕ್ಕೆ ನೀಡಿರುವ ಮನವಿಯನ್ನು ಪರಿಗಣಿಸುವಂತೆ ನಿರ್ದೇಶಿಸಬೇಕು ಮತ್ತು ರೆಡ್ಡಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಬೇಕು' ಎಂಬುದು ಅರ್ಜಿದಾರರ ಮನವಿ.

ಎನ್‌ಕೌಂಟರ್: ತನಿಖಾ ವರದಿ ಸಲ್ಲಿಕೆಗೆ ಹೈಕೋರ್ಟ್ ಗಡುವು



'ಹುಬ್ಬಳ್ಳಿಯಲ್ಲಿ ಐದು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ' ಎಂಬ ಆರೋಪದಡಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಮೃತಪಟ್ಟ ವಲಸೆ ಕಾರ್ಮಿಕ ಪಾಟ್ನಾದ ರಿತೇಶ್ ಕುಮಾರ್ ಪ್ರಕರಣಕ್ಕೆ ಸಂಬಂಧಿಸಿದ ಈವರೆಗಿನ ತನಿಖಾ ವರದಿಯನ್ನು ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಮೂರು ವಾರಗಳ ಗಡುವು ನೀಡಿದೆ.

ಈ ಕುರಿತಂತೆ, 'ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್–ಕರ್ನಾಟಕ' (ಪಿಯುಸಿಎಲ್) ಸಂಘಟನೆಯ ಪ್ರಧಾನ ಕಾರ್ಯದರ್ಶಿ ಇ.ಶುಜಾಯಿತ್ ಉಲ್ಲಾ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಮಧು ಭೂಷಣ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ಪ್ರಕರಣದಲ್ಲಿ ಈವರೆಗೆ ಆಗಿರುವ ತನಿಖೆಯ ವರದಿಯನ್ನು ಮೂರು ವಾರಗಳಲ್ಲಿ ಸಲ್ಲಿಸಿ' ಎಂದು ಸರ್ಕಾರದ ಪರ ವಕೀಲರಿಗೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಆಗಸ್ಟ್ 11ಕ್ಕೆ ಮುಂದೂಡಿತು.

'ಪರಶುರಾಮ ಮೂರ್ತಿ ಕಂಚಿನದ್ದಲ್ಲ'

ಪ್ರಜಾವಾಣಿ ವಾರ್ತೆ

ಉಡುಪಿ: 'ಕಾರ್ಕಳ ತಾಲ್ಲೂಕಿನ ಪರಶುರಾಮ ಥೀಮ್ ಪಾರ್ಕ್‌ನಲ್ಲಿ ಪರಶುರಾಮ ಮೂರ್ತಿ ನಿರ್ಮಾಣದಲ್ಲಿ ವಂಚಿಸಲಾಗಿದೆ' ಎಂದು ಆರೋಪಿಸಿ ನೀಡಿದ್ದ ದೂರಿನ ಕುರಿತು ತನಿಖೆ ನಡೆಸಿರುವ ಪೊಲೀಸರು, ಕಾರ್ಕಳದ ಕೋರ್ಟ್‌ಗೆ 1,231 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಶಿಲ್ಪಿ ಕೃಷ್ಣನಾಯ್ಕ ಅವರು ಕಂಚಿನಿಂದ ಪರಶುರಾಮ ಮೂರ್ತಿಯನ್ನು ನಿರ್ಮಾಣ ಮಾಡದೇ, ಹಿತ್ತಾಳೆ ಲೋಹದಿಂದ ನಿರ್ಮಿಸಿರುವುದು ತಜ್ಞರ ಪರಿಶೀಲನಾ ವರದಿಯಿಂದ ಹಾಗೂ ತನಿಖೆಯಿಂದ ಸಾಬೀತಾಗಿದೆ ಎಂದು ದೋಷಾರೋಪ ಪಟ್ಟಿಯಲ್ಲಿ ಹೇಳಲಾಗಿದೆ.

ಆರೋಪಿಗಳಾದ ಶಿಲ್ಪಿ ಕೃಷ್ಣ ನಾಯ್ಕ, ಉಡುಪಿ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಅರುಣ ಕುಮಾರ್ ಹಾಗೂ ಎಂಜಿನಿಯರ್ ಸಚಿನ್ ವೈ. ಕುಮಾರ್ ಅವರು ಒಳಸಂಚು, ವಂಚನೆ ಎಸಗಿ, ಸಾಕ್ಷ್ಯ ನಾಶ ಮಾಡಿದ್ದಾರೆ ಎಂದೂ ಉಲ್ಲೇಖಿಸಲಾಗಿದೆ.

ಅರುಣ ಕುಮಾರ್ ಹಾಗೂ ಸಚಿನ್ ವೈ. ಕುಮಾರ್ ಅವರು ಕಾರ್ಯಾದೇಶದ ಷರತ್ತು ಪಾಲಿಸಿಲ್ಲ. 2023ರ ಅ. 12ರಂದು ಮೂರ್ತಿಯ ಸೊಂಟದಿಂದ ಮೇಲ್ಭಾಗವನ್ನು ಉಮಿಕಲ್ ಬೆಟ್ಟದಿಂದ ಒಯ್ದು ಉಡುಪಿ ತಾಲ್ಲೂಕಿನ ಅಲೆವೂರು ಗ್ರಾಮದ ಪ್ರಗತಿ ನಗರದ ನಿರ್ಮಿತಿ ಕೇಂದ್ರದ ಶೆಡ್‌ನಲ್ಲಿ 2024ರ ಫೆ.25ರ ವರೆಗೆ ಇರಿಸಿಕೊಂಡಿದ್ದಾರೆ. ಮೂರ್ತಿಯ ಸೊಂಟದಿಂದ ಮೇಲ್ಭಾಗವನ್ನು ಶಿಲ್ಪಿ ಕೃಷ್ಣ ನಾಯ್ಕ ಅವರಿಗೆ ಹಸ್ತಾಂತರ ಮಾಡಿದ್ದು, ಕೃಷ್ಣ ನಾಯ್ಕ ಅವರು ಅದನ್ನು ಬೆಂಗಳೂರಿಗೆ ಸಾಗಾಟ ಮಾಡಿರುವುದಾಗಿ ತಪ್ಪು ಮಾಹಿತಿಯನ್ನು ನೀಡಿದ್ದಾರೆ ಎಂದೂ ಹೇಳಲಾಗಿದೆ.

ನಿರ್ಮಿತಿ ಕೇಂದ್ರದಿಂದ ಹಣ ಪಡೆದು ನಕಲಿ ಮೂರ್ತಿ ನಿರ್ಮಿಸಿ ಸರ್ಕಾರಕ್ಕೆ ವಂಚಿಸಲಾಗಿದೆ ಎಂದು ಆರೋಪಿಸಿ 2024 ಜೂನ್ 21 ರಂದು ಕೃಷ್ಣ ಶೆಟ್ಟಿ ಪೊಲೀಸರಿಗೆ ದೂರು ನೀಡಿದ್ದರು.

ಐಎಫ್‌ಎಸ್ ಅಧಿಕಾರಿ ಅಮಾನತು

ಒಂದನೇ ಪುಟದಿಂದ...

ಸರ್ಕಾರವು ರಚಿಸಿದ್ದ ಉನ್ನತ ಮಟ್ಟದ ತನಿಖಾ ಸಮಿತಿಯು ನೀಡಿರುವ ವರದಿಯನ್ನು ಆಧರಿಸಿ ಚಕ್ರಪಾಣಿ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಿದ್ದು, ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಲಾಗಿದೆ.

ಹೊರಗುತ್ತಿಗೆ ಸಿಬ್ಬಂದಿಗೆ ಮಾರ್ಚ್‌ನಿಂದ ಮೇ ತಿಂಗಳವರೆಗೆ ವೇತನ ಬಿಡುಗಡೆ ಮಾಡದಿರುವುದು, ವೇತನಕ್ಕಾಗಿ ಆಗ್ರಹಿಸಿ ಜೂನ್ 23ರಂದು ಮಲೆಮಹದೇಶ್ವರ ಬೆಟ್ಟ, ಪಾಲಾರ್, ರಾಮಾಪುರ ವಲಯಗಳ ಬೇಟೆ ತಡೆ ಶಿಬಿರದ ವಾಚರ್‌ಗಳು ಕೊಳ್ಳೇಗಾಲದ ವಿಭಾಗೀಯ ಕಚೇರಿ ಬಳಿ ಪ್ರತಿಭಟಿಸಿರುವುದು ತನಿಖೆಯಲ್ಲಿ ದೃಢಪಟ್ಟಿದೆ.

ಡಿಸಿಎಫ್ ವೈ. ಚಕ್ರಪಾಣಿ ಅವರು ಸಮರ್ಪಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿಲ್ಲ. ಅಗತ್ಯ ಅನುದಾನ ಲಭ್ಯವಿದ್ದರೂ ಸಿಬ್ಬಂದಿಗೆ ಮಾರ್ಚ್ ತಿಂಗಳ ವೇತನವನ್ನು ಪಾವತಿಸಿಲ್ಲ. ಏಪ್ರಿಲ್ ಹಾಗೂ ಮೇ ತಿಂಗಳ ವೇತನ ಪಾವತಿ ಕೋರಿ ಖಜಾನೆಗೆ ಬಿಲ್ ಸಲ್ಲಿಕೆಯಲ್ಲಿ ವಿಳಂಬವಾಗಿದೆ ಎಂದು ಅಮಾನತು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಪರಿಶಿಷ್ಟರಿಗೆ ಬಡ್ತಿ: ಸಿ.ಎಂ.ಗೆ ಖರ್ಗೆ ಪತ್ರ

ಒಂದನೇ ಪುಟದಿಂದ...

ಅಲ್ಲದೆ, 1978ರ ಏಪ್ರಿಲ್ 27ರಿಂದ ಅನ್ವಯವಾಗುವಂತೆ ಈ ಕಾಯ್ದೆಯಲ್ಲಿರುವ ಅಂಶಗಳ ಆಧಾರದಲ್ಲಿ ಜ್ಯೇಷ್ಠತಾ ಪಟ್ಟಿ ಪುನರ್ ಅವಲೋಕಿಸಬೇಕಿತ್ತು.

'ದಲಿತ ವಿರೋಧಿ ಅಧಿಕಾರಿಗಳು, ತತ್ಪರಿಣಾಮದ ಜ್ಯೇಷ್ಠತೆ ವಿಸ್ತರಿಸುವ ಕಾಯ್ದೆಯಲ್ಲಿರುವ ಸೌಲಭ್ಯಗಳು ಎಸ್‌ಸಿ, ಎಸ್‌ಟಿ ನೌಕರರಿಗೆ ಸಿಗದಂತೆ ಮಾಡಲು 2019ರ ಜೂನ್ 24ರಂದು ಸುತ್ತೋಲೆ ಹೊರಡಿಸಿದ್ದಾರೆ. ಆ ಮೂಲಕ, ಈ ಕಾಯ್ದೆಯ ಉದ್ದೇಶವನ್ನೇ ವಿಫಲಗೊಳಿಸಿದ್ದಾರೆ' ಎಂದು ದೂರಿ ಎಸ್‌ಸಿ, ಎಸ್‌ಟಿ ನೌಕರರ ಸಂಘವು ಜೂನ್ 26ರಂದು ಮುಖ್ಯಮಂತ್ರಿಗೆ ಪತ್ರ ಬರೆದಿತ್ತು.

'ಶಾಲಾ ಶಿಕ್ಷಣ ಇಲಾಖೆ ಮತ್ತು ಇಂಧನ ಇಲಾಖೆಯ ಅಡಿಯಲ್ಲಿರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ (ಕೆಪಿಟಿಸಿಎಲ್) ಸಂಬಂಧಿಸಿದಂತೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿದ್ದ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು, ಆ ಹುದ್ದೆಗಳಲ್ಲಿರುವ ಅಭ್ಯರ್ಥಿಗಳಿಗೆ ಪದೋನ್ನತಿ ನೀಡುವಂತೆ ವರದಿ ಸಲ್ಲಿಸಿದ್ದಾರೆ. ಈ ಬಗ್ಗೆ ಡಿಪಿಎಆರ್ ಕೂಡಾ ಅಭಿಪ್ರಾಯ ನೀಡಿದೆ. ಆದರೆ, ಈ ಇಲಾಖೆಯ ಹಿರಿಯ ಅಧಿಕಾರಿಗಳು ಎಸ್‌ಸಿ, ಎಸ್‌ಟಿ ನೌಕರರಿಗೆ ಮುಂಬಡ್ತಿ ನೀಡಲು ಹಿಂದೇಟು ಹಾಕುತ್ತಿದ್ದಾರೆ' ಎಂದೂ ಸಂಘ ಆರೋಪಿಸಿದೆ.

ಶೀಘ್ರ ವರದಿ ಸಲ್ಲಿಸಲು ಸೂಚನೆ: ವಿವಿಧ ಇಲಾಖೆಗಳಲ್ಲಿ ಬಡ್ತಿ ಮೀಸಲಾತಿಯಲ್ಲಿ ವಂಚನೆ ಆಗಿರುವ ಕುರಿತು ಎಸ್‌ಸಿ, ಎಸ್‌ಟಿ ನೌಕರರ ಸಂಘವು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ 43 ಪುಟಗಳ ದೂರು ಸಲ್ಲಿಸಿತ್ತು. ಈ ದೂರನ್ನು ಗಂಭೀರವಾಗಿ ಪರಿಗಣಿಸಿರುವ ನಿರ್ದೇಶನಾಲಯದ ಕೇಂದ್ರ ಸ್ಥಾನದ ಎಸ್‌ಪಿ ಕೆ. ಧರಣೀ ದೇವಿ ಅವರು ಈ ಬಗ್ಗೆ ವಿಚಾರಣೆ ನಡೆಸಿ ಶೀಘ್ರ ವರದಿ ಸಲ್ಲಿಸುವಂತೆ ಡಿಸಿಆರ್‌ಇ ಎಸ್‌ಪಿ ಅವರಿಗೆ ಜುಲೈ 14ರಂದು ಸೂಚನೆ ನೀಡಿದ್ದಾರೆ.

80 ಉಪನ್ಯಾಸಕರಿಗೆ ಸಿಗದ ಹುದ್ದೆ

ಒಂದನೇ ಪುಟದಿಂದ...

ಆದರೆ, ಶಾಲಾ ಶಿಕ್ಷಣ ಇಲಾಖೆಯು ಮೀಸಲಾತಿ ರೋಸ್ಟರ್ ನಿರ್ವಹಿಸದೆ ಇತ್ತೀಚೆಗೆ ಮುಂಬಡ್ತಿ ನೀಡಿದೆ. ಇದರಿಂದಾಗಿ 80 ಬ್ಯಾಕ್‌ಲಾಗ್ ಉಪನ್ಯಾಸಕರು ಮುಂಬಡ್ತಿಯಿಂದ ವಂಚಿತರಾಗಿದ್ದಾರೆ' ಎಂದು ಎಸ್‌ಸಿ, ಎಸ್‌ಟಿ ನೌಕರರ ಸಂಘವು ದಾಖಲೆಗಳ ಸಹಿತ ಮುಖ್ಯಮಂತ್ರಿ ಹಾಗೂ ಖರ್ಗೆಯವರ ಗಮನಕ್ಕೂ ತಂದಿದೆ.

ಯಾವ ಇಲಾಖೆ	ಯಾವ ರೀತಿ ವಂಚನೆ*
ಶಾಲಾ ಶಿಕ್ಷಣ	ಪಿಯು ಪ್ರಾಂಶುಪಾಲರ ವೃಂದಕ್ಕೆ ಬಡ್ತಿ ನೀಡುವಾಗ 80 ಹುದ್ದೆಗಳ ವಂಚನೆ
ಗೃಹ	ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ವೃಂದಗಳಲ್ಲಿ ಬಡ್ತಿ ಮೀಸಲಾತಿಯಲ್ಲಿ ಅನ್ಯಾಯ
ಅರಣ್ಯ	ಬೆಳಗಾವಿ, ದಾವಣಗೆರೆ ವೃತ್ತ ಮತ್ತು ಇಲಾಖೆಯಲ್ಲಿ 'ಪವಿತ್ರ–1' ಪ್ರಕಾರ ಹಿಂಬಡ್ತಿಯಾದವರಿಗೆ ಮುಂಬಡ್ತಿ ನೀಡಿಲ್ಲ
ತೋಟಗಾರಿಕೆ	ಸಹಾಯಕ ತೋಟಗಾರಿಕೆ ನಿರ್ದೇಶಕ ಹುದ್ದೆಗೆ ನಿಯಮ 32ರಲ್ಲಿ ಬಡ್ತಿ ನೀಡುವಾಗ ರೋಸ್ಟರ್ ಪದ್ಧತಿ ಅಳವಡಿಸಿಲ್ಲ
ಕೃಷಿ	2001ರಿಂದ 2010ರವರೆಗೆ ನಿಯಮ 32ರಲ್ಲಿ ಬಡ್ತಿ ನೀಡುವಾಗ 34 ಎಸ್‌ಸಿ, 16 ಎಸ್‌ಟಿ ಅಧಿಕಾರಿಗಳನ್ನು ಪರಿಗಣಿಸಿಲ್ಲ
ಸಾರಿಗೆ	ಮೀಸಲಾತಿ ನಿಯಮ ಪಾಲಿಸದೆ ಮುಂಬಡ್ತಿ, ಜ್ಯೇಷ್ಠತೆ ಸಂರಕ್ಷಣೆ ಕಾಯ್ದೆಯ ಉಲ್ಲಂಘನೆ
ನಗರಾಭಿವೃದ್ಧಿ	ಮೀಸಲಾತಿ ರೋಸ್ಟರ್ ಪಾಲಿಸದೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಲ್ಲಿ ಬಡ್ತಿ
ಡಿಪಿಎಆರ್	ಬಡ್ತಿ ಮೀಸಲಾತಿಗೆ ವ್ಯತಿರಿಕ್ತವಾಗಿ ಅಭಿಪ್ರಾಯ, ಹಿಂಬರಹ. ಸಂಪುಟ ಉಪಸಮಿತಿಯ ನಿರ್ಣಯದಂತೆ ಆದೇಶ ಹೊರಡಿಸಿಲ್ಲ
ಕೆಪಿಟಿಸಿಎಲ್	ಎಇಇ ಹುದ್ದೆಗೆ ಪದೋನ್ನತಿಗೆ ಎಸ್‌ಸಿ 133, ಎಸ್‌ಟಿ 27 ಸೇರಿ ಒಟ್ಟು 160 ಬ್ಯಾಕ್‌ಲಾಗ್ ಎಇಗಳನ್ನು ಪರಿಗಣಿಸಿಲ್ಲ

* ಎಸ್‌ಸಿ, ಎಸ್‌ಟಿ ನೌಕರರ ಸಂಘ ಸಲ್ಲಿಸಿರುವ ದೂರಿನಲ್ಲಿರುವ ಅಂಶಗಳು

ಶುಕ್ಲಾ ಮರು ಪ್ರಯಾಣ ಆರಂಭ

ಒಂದನೇ ಪುಟದಿಂದ...

ಶುಕ್ಲಾ ಹಾಗೂ ಸಹಯಾತ್ರಿಕರು 'ಅನ್‌ಡಾಕ್' ಪ್ರಕ್ರಿಯೆಗೆ ಸುಮಾರು ಎರಡು ಗಂಟೆಗಳಿಗೆ ಮುನ್ನ, ಸೋಮವಾರ ಮಧ್ಯಾಹ್ನ 2.37ಕ್ಕೆ ಐಎಸ್‌ಎಸ್‌ನಿಂದ 'ಡ್ರ್ಯಾಗನ್' ಬಾಹ್ಯಾಕಾಶ ಕೋಶ ಪ್ರವೇಶಿಸಿದರು. ಭೂಮಿಗೆ ವಾಪಸಾಗುವ ಈ ನಾಲ್ವರನ್ನು, ಐಎಸ್‌ಎಸ್‌ನಲ್ಲಿದ್ದ ಇತರರು ಬೀಳ್ಕೊಟ್ಟರು.

ಶುಕ್ಲಾ ಹಾಗೂ ಇತರ ಮೂವರಿಗೆ ಐಎಸ್‌ಎಸ್‌ನಲ್ಲಿ ಭಾನುವಾರ ಬೀಳ್ಕೊಡುಗೆ ಸಮಾರಂಭ ಆಯೋಜಿಸಲಾಗಿತ್ತು. 'ಶೀಘ್ರದಲ್ಲೇ ಭೂಮಿಗೆ ಮರಳಲಿದ್ದೇವೆ' ಎಂದು ಶುಕ್ಲಾ ಈ ವೇಳೆ ಹೇಳಿದ್ದರು.

ಬಾಹ್ಯಾಕಾಶದಲ್ಲಿ 18 ದಿನ ಕಳೆದಿರುವ ಗಗನಯಾತ್ರಿಗಳು ಭೂಮಿಗೆ ಮರಳಿದ ಬಳಿಕ, 7 ದಿನ ಪುನಶ್ಚೇತನ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಭೂಮಿಯ ಗುರುತ್ವಾಕರ್ಷಣೆಗೆ ಹೊಂದಿಕೊಳ್ಳಲು ವೈದ್ಯರ ತಂಡ ನೆರವಾಗಲಿದೆ.

- ಸೋಮವಾರ ಸಂಜೆ 4.45ಕ್ಕೆ 'ಅನ್‌ಡಾಕ್'
- ಕ್ಯಾಲಿಫೋರ್ನಿಯಾ ಕರಾವಳಿಯಲ್ಲಿ ಇಳಿಯಲಿರುವ ಬಾಹ್ಯಾಕಾಶ ಕೋಶ
- ಮಂಗಳವಾರ ಮಧ್ಯಾಹ್ನ 3.01ಕ್ಕೆ ಬಂದಿಳಿಯುವ ಸಾಧ್ಯತೆ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಸೋಲುವುದನ್ನು ಕಲಿಸಿ, ಅಂತೆಯೇ ಗೆಲುವಿನ ಸಂತಸವನ್ನು ಕಲಿಸಿ.

–ಅಬ್ರಹಾಂ ಲಿಂಕನ್

ಸಂಪಾದಕೀಯ

ಕೃತಕ ಬುದ್ಧಿಮತ್ತೆ ಆಧಾರಿತ ಕೃಷಿ ಸ್ಫೂರ್ತಿದಾಯಕ ಹೆಜ್ಜೆ–ಪ್ರಯೋಗ

ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೂಲಕ ಕೃಷಿ ಕ್ಷೇತ್ರವನ್ನು ಲಾಭದಾಯಕಗೊಳಿಸುವ ರಾಜ್ಯ ಸರ್ಕಾರದ ಉದ್ದೇಶ, ಸಮಸ್ಯೆಗಳ ಸರಮಾಲೆಯಿಂದ ಕಂಗೆಟ್ಟಿರುವ ರೈತರಲ್ಲಿ ಒಂದಿಷ್ಟು ಭರವಸೆ ಮೂಡಿಸುವಂತಹದ್ದು. ಇಳುವರಿ ಹೆಚ್ಚಳದ ಜೊತೆಗೆ ಮಾರುಕಟ್ಟೆ ಸಾಧ್ಯತೆಗಳ ಕುರಿತು ರೈತರಿಗೆ ನೆರವು ನೀಡುವ ‘ಕೃಷಿ ಸೇವಾ ಕೇಂದ್ರ’ಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಿದೆ. ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಆಧರಿಸಿ ಕಾರ್ಯ ನಿರ್ವಹಿಸಲಿರುವ ಈ ಕೇಂದ್ರಗಳ ಮೂಲಕ, ಆಯಾ ಪ್ರದೇಶದ ಮಣ್ಣಿನ ಮಾದರಿ, ಹವಾಗುಣ, ತೇವಾಂಶ, ಮಳೆಯ ಪ್ರಮಾಣದೊಂದಿಗೆ ಪ್ರಸ್ತುತ ಇರುವ ಬೆಳೆ ಪದ್ಧತಿ ಮತ್ತು ಇಳುವರಿಯ ವಿಶ್ಲೇಷಣೆ ನಡೆಯಲಿದೆ. ಈ ವಿಶ್ಲೇಷಣೆಯು ರಾಜ್ಯದ ರೈತರು ಹಾಗೂ ಕೃಷಿ ನೀತಿ ನಿರೂಪಕರಿಗೆ ನೆರವಾಗಲಿದೆ. ಆಯಾ ಪ್ರದೇಶಕ್ಕೆ ಅನುಗುಣವಾಗಿ ಅಧಿಕ ಲಾಭ ತರುವ ಬೆಳೆಗಳನ್ನು ಆಯ್ಕೆ ಮಾಡಿಕೊಳ್ಳುವ ಕುರಿತು ನೆರವಾಗಲು ರಾಜ್ಯಮಟ್ಟದ ತಂತ್ರಜ್ಞರ ಸಮಿತಿಯನ್ನೂ ಸರ್ಕಾರ ರಚಿಸಿದೆ. 2025–26ನೇ ಸಾಲಿನಲ್ಲಿ, ಭತ್ತದ ಬೆಳೆಯಲ್ಲಿ ತಂತ್ರಜ್ಞಾನದ ಮಾದರಿಯನ್ನು (ಎಸ್–ಟೆಕ್) ಅಳವಡಿಸಲು ಬಳ್ಳಾರಿ, ದಾವಣಗೆರೆ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ವಿಜಯನಗರ ಮತ್ತು ಯಾದಗಿರಿ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ರಾಯಚೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ‘ಇ–ಸ್ಯಾಪ್’ ತಂತ್ರಾಂಶ, ಕೀಟದಿಂದ ಉಂಟಾಗುವ ರೋಗಗಳನ್ನು ನಿವಾರಿಸುವುದರ ಜೊತೆಗೆ, ಪೋಷಕಾಂಶಗಳ ಕೊರತೆಯನ್ನು ನೀಗಿಸಲೂ ನೆರವಾಗುತ್ತದೆ. ಈ ತಂತ್ರಾಂಶ ಬಳಸಿ, 52 ಕೃಷಿ ಬೆಳೆಗಳಲ್ಲಿ ಕಂಡುಬರುವ 1,000ಕ್ಕೂ ಹೆಚ್ಚು ಕೀಟ–ರೋಗಗಳನ್ನು ನಿವಾರಣೆ ಮಾಡಲು ಕೃಷಿ ಇಲಾಖೆ ಮುಂದಾಗಿದೆ. ಆಯಾ ವರ್ಷದ ಹವಾಮಾನ, ಅತಿವೃಷ್ಟಿ, ಅನಾವೃಷ್ಟಿಯ ಆಧಾರದಲ್ಲಿ ಯಾವ ಋತುವಿನಲ್ಲಿ ಯಾವ ಬೆಳೆಗೆ ಹೆಚ್ಚಿನ ಬೇಡಿಕೆ ಇರುತ್ತದೆ ಎನ್ನುವುದನ್ನು ಕೃಷಿ ಸೇವಾ ಕೇಂದ್ರಗಳು ಅಂದಾಜು ಮಾಡಲಿವೆ. ಯಾವ ಬೆಳೆಗಳಿಗೆ ಉತ್ತಮ ಬೆಲೆ ದೊರೆಯಬಹುದು ಎನ್ನುವ ಮಾಹಿತಿಯನ್ನೂ ಒದಗಿಸಲಿವೆ. ಇದರಿಂದಾಗಿ, ರೈತರು ತಾವು ಬೆಳೆಯಬಹುದಾದ ಬೆಳೆಗಳನ್ನು ನಿರ್ಧರಿಸುವುದು ಸುಲಭವಾಗುತ್ತದೆ.



ಕೃಷಿಯಲ್ಲಿ ‘ಎಐ’ ತಂತ್ರಜ್ಞಾನದ ಬಳಕೆ ರೈತರಿಗೆ ಹೊಸ ಅವಕಾಶಗಳನ್ನು ಒದಗಿಸಲಿದೆ; ಇಳುವರಿ ಹೆಚ್ಚಳದೊಂದಿಗೆ, ಮಾರುಕಟ್ಟೆ ಸಾಧ್ಯತೆಗಳೂ ತೆರೆದುಕೊಳ್ಳಲಿವೆ.

ಮಳೆಯ ಕಣ್ಣಾಮುಚ್ಚಾಲೆಯಿಂದಾಗಿ ಬಿತ್ತಿದ್ದು ಕೈಗೆ ದೊರೆಯದೆ ಹೋಗುವುದು ಹಾಗೂ ಉತ್ತಮ ಫಸಲು ಬಂದಾಗ ಧಾರಣೆ ಇದ್ದಕ್ಕಿದ್ದಂತೆ ಕುಸಿಯುವುದು ರೈತರು ಎದುರಿಸುವ ಬಹುಮುಖ್ಯವಾದ ಎರಡು ಸಮಸ್ಯೆಗಳು. ಮಳೆಯ ವ್ಯತ್ಯಯ ಹಾಗೂ ರೋಗಬಾಧೆಯಿಂದ ಇಳುವರಿಯಲ್ಲಿ ವ್ಯತ್ಯಾಸವಾದಾಗ ಕಂಗೆಡುವುದಕ್ಕಿಂತಲೂ, ಮಾರುಕಟ್ಟೆಯಲ್ಲಿನ ದಿಢೀರ್ ಏರಿಳಿತಗಳು ಕೃಷಿಕರನ್ನು ತೀವ್ರವಾಗಿ ಗಾಸಿಗೊಳಿಸುತ್ತವೆ. ಟೊಮೆಟೊ, ಈರುಳ್ಳಿ, ಕಲ್ಲಂಗಡಿ ಬೆಳೆಗಾರರು ಆಗಾಗ ದಿಢೀರ್ ಬೆಲೆ ಕುಸಿತದ ವಿದ್ಯಮಾನಗಳಿಂದ ಕಂಗಾಲಾಗಿ, ಬೆಳೆದ ಫಸಲನ್ನು ರಸ್ತೆಗೆ ಚೆಲ್ಲಿ ತಮ್ಮ ಸಂಕಟ– ಪ್ರತಿಭಟನೆ ವ್ಯಕ್ತಪಡಿಸುವುದಿದೆ. ಕೊಬ್ಬರಿ, ಅಡಿಕೆ, ಭತ್ತ, ಕಬ್ಬು ಸೇರಿದಂತೆ ಯಾವ ಬೆಳೆಯೂ ಬೆಲೆಯ ಏರಿಳಿತದಿಂದ ತಪ್ಪಿಸಿಕೊಳ್ಳುವಂತಿಲ್ಲ. ಪ್ರಸ್ತುತ, ಕಲಬುರಗಿ ಜಿಲ್ಲೆಯ ರೈತರು ತೊಗರಿ ಧಾರಣೆ ಕುಸಿತದಿಂದ ಕಂಗೆಟ್ಟಿದ್ದಾರೆ. 2024ರ ಮೇ ತಿಂಗಳಿನಲ್ಲಿ, ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ಗರಿಷ್ಠ ₹12,750 ಇದ್ದ ತೊಗರಿಯ ಧಾರಣೆ ಈಗ ₹6,250ರ ಆಸುಪಾಸಿನಲ್ಲಿದೆ. ಈ ಅನಿರೀಕ್ಷಿತ ಧಾರಣೆ ಕುಸಿತ ತೊಗರಿ ಬೆಳೆಗಾರರನ್ನು ಕಂಗಾಲಾಗಿಸಿದೆ. ಮೂರು ತಿಂಗಳ ಹಿಂದಷ್ಟೇ, ಒಣ ಮೆಣಸಿನಕಾಯಿಯ ಧಾರಣೆ ಕುಸಿತದ ಘಾಟಿನಿಂದ ರಾಜ್ಯದ ರೈತರು ತತ್ತರಿಸಿದ್ದರು. ಬಳ್ಳಾರಿ, ವಿಜಯಪುರ ಸೇರಿದಂತೆ ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಮೆಣಸಿನಕಾಯಿ ಇಳುವರಿ ಉತ್ತಮವಾಗಿದ್ದರೂ, ಧಾರಣೆ ಬೆಲೆ ಕುಸಿತದಿಂದ ಹತಾಶರಾದ ರೈತರು ಮೆಣಸಿನಕಾಯಿಯನ್ನು ಗಿಡಗಳಲ್ಲೇ ಬಿಡುವ ಮೂಲಕ ಪ್ರತಿಭಟಿಸಿದ್ದರು. ಮಾರುಕಟ್ಟೆಯಲ್ಲಿನ ಬೇಡಿಕೆಗಿಂತಲೂ ಹೆಚ್ಚಿನ ಉತ್ಪಾದನೆ ಇರುವುದು ಬೆಲೆ ಕುಸಿತಕ್ಕೆ ಕಾರಣಗಳಲ್ಲೊಂದು. ಬೇಡಿಕೆ ಮತ್ತು ಉತ್ಪಾದನೆಯ ಅಂದಾಜು ಮಾಡಲಾಗದೆ ಅನೇಕ ರೈತರು ಸಮಸ್ಯೆಗೆ ಸಿಲುಕುತ್ತಾರೆ. ಇಂಥ ರೈತರಿಗೆ, ‘ಕೃಷಿ ಸೇವಾ ಕೇಂದ್ರ’ಗಳು ನೆರವಿಗೆ ಬರುವ ನಿರೀಕ್ಷೆಯಿದೆ. ಪ್ರಕೃತಿ ಹಾಗೂ ಮಾರುಕಟ್ಟೆಯ ವೈಪರೀತ್ಯಗಳನ್ನು ತಡೆಗಟ್ಟಲು ಅಗತ್ಯವಾದ ಮಾಹಿತಿಯನ್ನು ಒದಗಿಸುವ ತಂತ್ರಜ್ಞಾನ ಲಭ್ಯವಾದರೆ, ರೈತರ ಕೃಷಿ ಜೀವನದಲ್ಲಿ ತಕ್ಕಮಟ್ಟಿಗೆ ಸುಧಾರಣೆ ಆಗಲಿದೆ. ವಿಶ್ವದಲ್ಲಿ ಸಂಚಲನ ಹುಟ್ಟಿಸಿರುವ ‘ಕೃತಕ ಬುದ್ಧಿಮತ್ತೆ’ಯನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ರೈತರನ್ನು ಸಜ್ಜುಗೊಳಿಸುವ ಜಾಗೃತಿ ಅಭಿಯಾನವೂ ನಡೆಯಬೇಕಾಗಿದೆ.

ಚಾವಡಿ

ನಿರೂಪಿಸಬೇಕಾದ ಕಾಲ



ಮಾನ್ಯ ಸಿದ್ದರಾಮಯ್ಯನವರೇ, ಅಂದು ದೇವರಾಜ ಅರಸು ಅವರು ಕೊಟ್ಟ ಭೂಮಿಯನ್ನು, ಅವರ ನಂತರದ ಪರಂಪರೆ ಎಂದು ಕರೆದುಕೊಳ್ಳುವ ನೀವು ದಯಮಾಡಿ ಕಿತ್ತುಕೊಳ್ಳದಿರಿ. ನೀವು ಸಮಾಜವಾದಿ ರಾಜಕಾರಣಿ ಆಗಿದ್ದೀರಿ. ನಿಮ್ಮ ಸಮಾಜವಾದವನ್ನು ನಿರೂಪಿಸಿಕೊಳ್ಳುವ ಸಂದರ್ಭ ಈಗ ಎದುರಾಗಿದೆ.

ವಿಶಾಲ್ ಮ್ಯಾಸರ್, ವಿದ್ಯಾರ್ಥಿ– ಕವಿ, ಫೇಸ್‌ಬುಕ್‌ನಿಂದ

ಕಿಡಿನುಡಿ



ರಾಜ್ಯದ ಅಭಿವೃದ್ಧಿ ಮರೆತಿರುವ ಕಾಂಗ್ರೆಸ್ ಸರ್ಕಾರವು, ಸಿ.ಎಂ ಕುರ್ಚಿ ಜಗಳದಲ್ಲಿ ಮುಳುಗಿದೆ. ಕೇಂದ್ರದ ಅನುದಾನದಲ್ಲಿ ನಿರ್ಮಾಣವಾದ ಸೇತುವೆಯನ್ನು ಸಂಭ್ರಮಿಸುವ ಬದಲು ತನ್ನ ಕುರ್ಚಿ ಉಳಿಸಿಕೊಳ್ಳುವ ಭರದಲ್ಲಿ, ಶಿಷ್ಟಾಚಾರ ಉಲ್ಲಂಘನೆ, ನನ್ನನ್ನು ಆಹ್ವಾನಿಸಿಯೇ ಇಲ್ಲ ಎಂಬ ಸುಳ್ಳು ಹಾಗೂ ಕೆಟ್ಟ ರಾಜಕಾರಣವನ್ನು ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಪಕ್ಷವು ಮಾಡುತ್ತಿರುವುದು ರಾಜ್ಯಕ್ಕೆ ಮಾಡುತ್ತಿರುವ ದ್ರೋಹ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಶನಿವಾರ, 15-7-2000

• ದಳ (ಯು) ತ್ಯಜಿಸಲು ಹೆಗಡೆ ಇಂಗಿತ

ನವದೆಹಲಿ, ಜುಲೈ 14 (ಪಿಟಿಐ)– ಇನ್ನೊಬ್ಬ ಹಿರಿಯ ಜನತಾ ದಳ (ಯು) ಮುಖಂಡ ರಾಮಕೃಷ್ಣ ಹೆಗಡೆ ಅವರೂ ಪಕ್ಷ ಬಿಟ್ಟು ಹೊರ ನಡೆಯುವ ಬಗ್ಗೆ ಇಂದು ಇಂಗಿತ ವ್ಯಕ್ತಪಡಿಸಿದ್ದಾರೆ.

ಪಕ್ಷದಲ್ಲಿನ ಬೆಳವಣಿಗೆಗಳನ್ನು ಕೇಂದ್ರ ಸಚಿವ ರಾಂ ವಿಲಾಸ್ ಪಾಸ್ವಾನ್ ಅವರು ಟೀಕಿಸಿದ ಒಂದು ದಿನದ ನಂತರ ಹೆಗಡೆ ಅವರು, ಪಕ್ಷ ತ್ಯಜಿಸುವ ಬಗ್ಗೆ ಇಂದು ಇಲ್ಲಿ ಸುದ್ದಿಗಾರರಿಗೆ ಸುಳಿವು ನೀಡಿದರು.

‘ನಿರೀಕ್ಷಿಸಿದಂತೆ ಪಕ್ಷ ಸಕ್ರಿಯವಾಗಿಲ್ಲ. ಪಕ್ಷದ ಕಾರ್ಯವೈಖರಿಯಲ್ಲಿ ಸುಧಾರಣೆ ಕಾಣದಿದ್ದರೆ ಪ್ರತಿಯೊಬ್ಬರೂ ತಮ್ಮದೇ ಆದ ಮಾರ್ಗದಲ್ಲಿ ಹೋಗುತ್ತಾರೆ’ ಎಂದು ಹೆಗಡೆ ಅರ್ಥಗರ್ಭಿತವಾಗಿ ನುಡಿದರು.

• ಗೇರುಸೊಪ್ಪ ಮೊದಲ ಘಟಕ ಕಾರ್ಯಾರಂಭ

ಹೊನ್ನಾವರ, ಜುಲೈ 14– ಪರಿಸರ ಸಮಸ್ಯೆಯಿಂದ ವಿಶ್ವಬ್ಯಾಂಕ್ ನೆರವು ಕೈತಪ್ಪಿಹೋಗಿದ್ದ ಗೇರುಸೊಪ್ಪ ಜಲವಿದ್ಯುತ್ ಯೋಜನೆಯ 60 ಮೆಗಾವಾಟ್ ಸಾಮರ್ಥ್ಯದ ಮೊದಲ ಘಟಕ ಇಂದು ಕಾರ್ಯಾರಂಭ ಮಾಡಿತು.

75 ವರ್ಷಗಳ ಹಿಂದೆ

ಶನಿವಾರ, 15-7-1950

• ವಿಶ್ವಸಂಸ್ಥೆ ಕಮ್ಯುನಿಸ್ಟ್ ಪ್ರಾತಿನಿಧ್ಯಕ್ಕೆ ನೆಹರೂ ಒತ್ತಾಯ

ನವದೆಹಲಿ, ಜುಲೈ 14– ಭಾರತದ ಪ್ರಧಾನಿ ಪಂಡಿತ ಜವಾಹರ ಲಾಲ್ ನೆಹರೂ ಸೋವಿಯತ್ ರಷ್ಯಾ ಪ್ರಧಾನಿ ಮಾರ್ಷಲ್ ಸ್ಟಾಲಿನ್‌ರವರಿಗೂ, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಡೀನ್ ಅಚಿಸನ್‌ರವರಿಗೂ ಖಾಸಗಿ ಪತ್ರಗಳನ್ನು ಬರೆದು ಕೊರಿಯನ್ ಕಲಹವನ್ನು ಶಾಂತ ರೀತಿಯಲ್ಲಿ ಬೇಗ ಇತ್ಯರ್ಥಪಡಿಸಬೇಕೆಂದು ಕೋರಿದ್ದಾರೆ.

ಈ ಕುರಿತು ಭಾರತದ ವಿದೇಶಾಂಗ ಸಚಿವ ಶಾಖೆ ಈ ದಿನ ಪ್ರಕಟಿಸಿದೆ. ಬ್ರಿಟಿಷ್ ಪ್ರಧಾನಿ ಕ್ಲೆಮೆಂಟ್ ಆಟ್ಲಿಯವರೊಂದಿಗೂ ನೇರ ಸಂಪರ್ಕವಿಟ್ಟುಕೊಂಡಿದ್ದಾರೆಂದೂ ಪ್ರಕಟಿಸಲಾಗಿದೆ.

ಸಚಿವ ಶಾಖೆಯ ಪತ್ರಿಕಾ ಪ್ರಕಟಣೆ ‘ಕೊರಿಯಾ ಸಂಗ್ರಾಮ ಆರಂಭವಾದಂದಿನಿಂದಲೂ ಕಲಹದ ಶಾಂತಿಯುತ ಇತ್ಯರ್ಥಕ್ಕಾಗಿ ಭಾರತ, ಲಂಡನ್, ವಾಷಿಂಗ್‌ಟನ್ ಮತ್ತು ಮಾಸ್ಕೋಗಳಲ್ಲಿರುವ ತನ್ನ ರಾಯಭಾರಿ ಕಚೇರಿಗಳ ಮೂಲಕ ಪ್ರಯತ್ನಿಸುತ್ತಲೇ ಇದೆ.

ಕಾಂಗ್ರೆಸ್ ಮತ್ತು ‘ಅಹಿಂದ’



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ಸಭೆ ಇಂದು ಬೆಂಗಳೂರಿನಲ್ಲಿ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಂಚಾಲಕತ್ವದಲ್ಲಿ ನಡೆಯಲಿರುವ ಈ ಸಭೆಗೆ ಕರ್ನಾಟಕವನ್ನು ಆರಿಸಿಕೊಂಡಿರುವ ಸಂದರ್ಭದಲ್ಲಿ ಹಿತಾಸಕ್ತಿ ರಾಜಕಾರಣಗಳು ಸೃಷ್ಟಿಸಿದ ಗೊಂದಲಗಳೇನೇ ಇದ್ದರೂ, ಇದು ಚಾರಿತ್ರಿಕವಾಗಿ ಸರಿಯಾದ ಆಯ್ಕೆ. ಕಾರಣ, ಭಾರತಕ್ಕೇ ಮಾದರಿಯಾಗಬಹುದಾದ ಹಿಂದುಳಿದ ವರ್ಗಗಳನ್ನು ಕುರಿತ ತಾತ್ವಿಕ ಚಿಂತನೆ ಈಚಿನ ದಶಕಗಳಲ್ಲಿ ಹೆಚ್ಚು ನಡೆದಿರುವುದು ಕರ್ನಾಟಕದಲ್ಲೇ. ಇಡೀ ದೇಶಕ್ಕೇ ಹಿಂದುಳಿದ ವರ್ಗಗಳ ಚಲನೆಗಳ ವೈಜ್ಞಾನಿಕ ಹಾದಿ ತೋರಿದ ಎಲ್.ಜಿ. ಹಾವನೂರು ವರದಿ ಜಾರಿಯಾದದ್ದು ಕರ್ನಾಟಕದಲ್ಲಿ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ಮೊದಲು ದೊರೆತಿದ್ದು ಕರ್ನಾಟಕದಲ್ಲಿ.

1993ರಿಂದ ಕರ್ನಾಟಕದಲ್ಲಿ ವಿಕೇಂದ್ರೀಕರಣ ವ್ಯವಸ್ಥೆ ಹಿಂದುಳಿದ ವರ್ಗಗಳಿಗೆ ದೊರಕಿಸಿದ ರಾಜಕೀಯ ಪ್ರಾತಿನಿಧ್ಯ ರಾಜ್ಯ ರಾಜಕಾರಣವನ್ನೇ ಬದಲಿಸಿತು. ಕಳೆದ ಮೂವತ್ತು ವರ್ಷಗಳಲ್ಲಿ ಪ್ರಾತಿನಿಧಿಕವಾಗಿ ಹಿಂದುಳಿದ ವರ್ಗಗಳ ಸರಾಸರಿ ಶೇ 30ರಷ್ಟು ಮಹಿಳೆಯರು, ಪುರುಷರು ಇದರ ರಾಜಕೀಯ ಫಲಾನುಭವಿಗಳಾಗಿದ್ದಾರೆ. ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಸರ್ಕಾರಗಳು ಇಂಥದೊಂದು ಮಸೂದೆಯನ್ನು ಎರಡು ಸಲ ಮಂಡಿಸಿದರೂ, ಕೋಮುವಾದಿಗಳು ಇಡೀ ವಿಕೇಂದ್ರೀಕರಣದ ಪ್ರಯತ್ನಕ್ಕೆ ಒಡ್ಡಿದ ಹಿನ್ನಡೆ ನೆನಪಿಸಿಕೊಂಡರೆ, ಕರ್ನಾಟಕದ ಹಿಂದುಳಿದ ವರ್ಗಗಳ ರಾಜಕೀಯದ ಯಶಸ್ಸು ಸ್ಪಷ್ಟವಾಗುತ್ತದೆ.

ಕಾಂಗ್ರೆಸ್ ಪಕ್ಷ ಅಖಿಲ ಭಾರತ ಮಟ್ಟದಲ್ಲಿ ಅಧಿಕಾರ ಹಿಡಿದಾಗ ಹಿಂದುಳಿದ ವರ್ಗಗಳ ಸಬಲೀಕರಣದ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬಂದಿದ್ದರೂ, ಒಟ್ಟಾರೆಯಾಗಿ ರಾಷ್ಟ್ರಮಟ್ಟದಲ್ಲಿ ಹಿಂದುಳಿದ ವರ್ಗಗಳನ್ನು ಕುರಿತ ಸ್ಪಷ್ಟ ತಾತ್ವಿಕ ಚಿಂತನೆಗಳನ್ನು ರೂಪಿಸಿಕೊಳ್ಳಲು ಅದಕ್ಕೆ ಸಾಧ್ಯವಾಗಿದೆಯೇ ಎಂಬ ಪ್ರಶ್ನೆಯೂ ನಮ್ಮೆದುರಿಗಿದೆ. ‘ಇಂಡಿಯಾ’ ಒಕ್ಕೂಟದ ಭಾಗವಾಗಿರುವ ಸಮಾಜವಾದಿ ಪಕ್ಷದ ‘ಹಿಂದುಳಿದ, ದಲಿತ ಮತ್ತು ಅಲ್ಪಸಂಖ್ಯಾತ’ ಸಮೀಕರಣ ಹಾಗೂ ರಾಷ್ಟ್ರೀಯ ಜನತಾದಳದ ಇಂಥದೇ ಸಮೀಕರಣಗಳಿಗೆ ಮಂಡಲ್ ವರದಿಯ ನಂತರದ ತಾತ್ವಿಕ ಚಿಂತನೆಗಳು, ಲೋಹಿಯಾ ಚಿಂತನೆಗಳು ನೆರವಾಗಿವೆ. ಈ ತಾತ್ವಿಕ ಚಿಂತನೆಗಳು ಆಯಾ ಪಕ್ಷಗಳ ತಳಮಟ್ಟದ ನಾಯಕರಿಂದ ಮೇಲಿನವರೆಗೂ ಪರಿಚಿತವಾಗಿವೆ.

ಈ ಎರಡೂ ಪಕ್ಷಗಳ ಜೊತೆ ಉತ್ತರಪ್ರದೇಶ ಹಾಗೂ ಬಿಹಾರದಲ್ಲಿ ಕಾಂಗ್ರೆಸ್ ಕೆಲಸ ಮಾಡುತ್ತಿದ್ದರೂ ಅವುಗಳ ಹಿಂದುಳಿದ ವರ್ಗಗಳ ತಾತ್ವಿಕ ನೋಟಗಳು ಕಾಂಗ್ರೆಸ್ಸಿಗೆ ದಕ್ಕಿವೆಯೆ? ಹಿಂದುಳಿದ ವರ್ಗಗಳ ಅಭಿವೃದ್ಧಿ–ರಾಜಕಾರಣದ ‘ಕರ್ನಾಟಕ ಮಾದರಿ’ ಕಾಂಗ್ರೆಸ್ ಪಕ್ಷದ ಎದುರು ಇದ್ದರೂ, ಉತ್ತರಭಾರತದ ಹಿಂದುಳಿದ ವರ್ಗಗಳ ರಾಜಕೀಯ ಸವಾಲುಗಳು ದಕ್ಷಿಣಕ್ಕಿಂತ ಬೇರೆ. ಆದ್ದರಿಂದಲೇ ಹಿಂದುಳಿದ ಜಾತಿಗಳ ವಿಭಿನ್ನ ಸಮೀಕರಣಗಳ ಜೊತೆಗೆ, ಪ್ರತಿ ರಾಜ್ಯಗಳಲ್ಲೂ ಹಿಂದುಳಿದ ವರ್ಗಗಳ ತಳಮಟ್ಟದ ನಾಯಕತ್ವ ಹಾಗೂ ಸೈದ್ಧಾಂತಿಕ ನೆಲೆಗಳನ್ನು ರೂಪಿಸಬೇಕಾದ ಸವಾಲು ಕಾಂಗ್ರೆಸ್ ಪಕ್ಷಕ್ಕಿದೆ. ಭಾರತದ ಹಲವು ರಾಜ್ಯಗಳಲ್ಲಿ ಹಿಂದುಳಿದ ಜಾತಿಗಳ ನಾಯಕತ್ವದ ಸಣ್ಣಸಣ್ಣ ಪಕ್ಷಗಳನ್ನು ತಾತ್ವಿಕವಾಗಿ ತನ್ನೊಡನೆ ಒಯ್ಯುವ ಸವಾಲೂ ಕಾಂಗ್ರೆಸ್ಸಿಗಿದೆ.

ಕಾಂಗ್ರೆಸ್ ಈ ಥರದ ಸವಾಲುಗಳನ್ನು ನಿರ್ವಹಿಸಬಲ್ಲ ಖಚಿತ ತಾತ್ವಿಕ ನೆಲೆಗಟ್ಟುಗಳಿಗಾಗಿ ಹಿಂದೊಮ್ಮೆ ಕಾಂಗ್ರೆಸ್ಸಿನ ಕಟು ಟೀಕಾಕಾರರಾಗಿದ್ದ ಅಂಬೇಡ್ಕರ್, ಲೋಹಿಯಾ; ಅಥವಾ ಅವರಿಗಿಂತ ಹಿಂದಿನ ಜ್ಯೋತಿಬಾ ಫುಲೆಯವರ ಚಿಂತನೆಗಳಲ್ಲಿ ನಂಬಿಕೆಯಿಟ್ಟು, ಅರಗಿಸಿಕೊಳ್ಳಬೇಕಾಗುತ್ತದೆ.

ಅಂಬೇಡ್ಕರ್ ಸೂಚಿಸಿದ ಸಬಲೀಕರಣದ ಕಾರ್ಯಕ್ರಮಗಳನ್ನು ಆಗಾಗ್ಗೆ ಅಳವಡಿಸಿಕೊಂಡಿರುವ ಕಾಂಗ್ರೆಸ್, ಐವತ್ತರ ದಶಕದಲ್ಲಿ ಹಿಂದುಳಿದ ಜಾತಿಗಳನ್ನು ಒಂದು ಗೊಂಚಲಾಗಿಸಿ ‘ಅದರ್ ಬ್ಯಾಕ್ವರ್ಡ್ ಕ್ಲಾಸಸ್’ ಎಂದು ಅಂಬೇಡ್ಕರ್ ಕರೆದದ್ದರ ತಾತ್ವಿಕತೆಯನ್ನೂ ಅರಿಯಬೇಕಾಗುತ್ತದೆ. ಅನೇಕ ಬಗೆಯ ಸಮಾನ ಕಷ್ಟಗಳುಳ್ಳ ಹಿಂದುಳಿದ ಜಾತಿಗಳು ಕ್ರಮೇಣ ಒಂದು ವರ್ಗವಾಗಿ ಒಗ್ಗೂಡಿ ಯೋಚಿಸಬೇಕಾಗುತ್ತದೆ ಎಂಬ ಚಿಂತನೆ ಅಂಬೇಡ್ಕರ್ ವರ್ಗೀಕರಣದಲ್ಲಿದೆ. 1947ರಲ್ಲಿ ನೆಹರೂ ಸಂಪುಟದಲ್ಲಿ ಕಾನೂನು ಸಚಿವರಾಗಿದ್ದ ಅಂಬೇಡ್ಕರ್, ಮರಾಠಿ ಸಂಸ್ಥೆಯೊಂದರ ಸ್ಮರಣ ಸಂಚಿಕೆಗೆ ಕೊಟ್ಟ ಸಂದೇಶದಲ್ಲಿ ಬರೆದ ಮೊದಲ ಮಾತು ಇದು: ‘ನಾನು ಹೇಳುತ್ತಿರುವ ತತ್ವ ಮರಾಠರಿಗೆ ಮಾತ್ರವೇ ಅಲ್ಲ, ಎಲ್ಲ ಹಿಂದುಳಿದ ಜಾತಿಗಳಿಗೂ ಅನ್ವಯವಾಗುತ್ತದೆ. ಹಿಂದುಳಿದ ಜಾತಿಗಳು ಇತರರ ಹೆಬ್ಬೆಟ್ಟನಡಿ ಇರಲು ಬಯಸದಿದ್ದರೆ ಎರಡು ಅಂಶಗಳ ಬಗ್ಗೆ ಹೆಚ್ಚು ಗಮನ ಕೊಡಬೇಕು: ಒಂದು, ರಾಜಕಾರಣ. ಮತ್ತೊಂದು, ಶಿಕ್ಷಣ.’

‘ಶಿಕ್ಷಣ ಎಂದರೆ ಉನ್ನತ ಶಿಕ್ಷಣ; ಉನ್ನತ ಶಿಕ್ಷಣದಿಂದ ಮಾತ್ರ ಈ ಸಮುದಾಯಗಳು ಪ್ರಗತಿ ಕಾಣಲು ಸಾಧ್ಯ; ಜಾತಿಪದ್ಧತಿ ಈ ದೇಶದಲ್ಲಿ ಶತಮಾನಗಳಿಂದ ಉಳಿದು ಬಂದಿರುವುದು ವಿವಿಧ ಜಾತಿಗಳಲ್ಲಿನ ಶಿಕ್ಷಣದಲ್ಲಿ ಇರುವ ಈ ಅಗಾಧ ಅಂತರದಿಂದ’ ಎಂಬುದನ್ನು ಅಂಬೇಡ್ಕರ್ ಒತ್ತಿ ಹೇಳಿದ್ದರು. ‘ಯಾವುದೇ ಸಮುದಾಯಕ್ಕೆ ಆಳುವವರ ಮೇಲೆ ನೈತಿಕವಾದ, ಆದರೆ ಪರೋಕ್ಷವಾದ, ಒತ್ತಡ ತರುವ ಶಕ್ತಿಯಿದ್ದರೆ ಮಾತ್ರ ಅದು ನೆಮ್ಮದಿಯಿಂದ ಬದುಕಬಹುದು’ ಎಂಬುದನ್ನೂ ಅಂಬೇಡ್ಕರ್ ಹೇಳಿದ್ದರು. ಆದರೆ ಅಂಬೇಡ್ಕರ್ ಸೂಚಿಸಿದಂತೆ ಹಿಂದುಳಿದವರನ್ನು ವರ್ಗಗಳನ್ನಾಗಿ ರೂಪಿಸುವ ಕೆಲಸ ಸರ್ಕಾರಿ ಯೋಜನೆಗಳು, ಚುನಾವಣೆಗಳ ಮಟ್ಟದಲ್ಲಷ್ಟೇ ಆಗುವುದಿಲ್ಲ. ಅದಕ್ಕಾಗಿ ಕಾಂಗ್ರೆಸ್

> ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿಯ ಸಭೆ ನಡೆಸುತ್ತಿರುವ ಕಾಂಗ್ರೆಸ್‌ಗೆ ಹಿಂದುಳಿದ ಸಮುದಾಯಗಳ ಸಮಸ್ಯೆ– ಸವಾಲುಗಳ ಕುರಿತು ತಾತ್ವಿಕ ಸ್ಪಷ್ಟತೆ ಅಗತ್ಯ. ನಡೆದು ಬಂದ ದಾರಿಯ ಅರಿವಿನೊಂದಿಗೆ, ನಡೆಯಬೇಕಾದ ಮಾರ್ಗದ ಮುನ್ನೋಟ ಪಕ್ಷಕ್ಕೆ ಅಗತ್ಯ. ಈ ಜವಾಬ್ದಾರಿಯನ್ನು ಕಾಂಗ್ರೆಸ್ ನಿರ್ವಹಿಸುವುದೆ?

ತಳಮಟ್ಟದಲ್ಲೇ ತಾತ್ವಿಕ ಚಿಂತನೆ–ಕಾರ್ಯಕ್ರಮಗಳನ್ನು ನಡೆಸುತ್ತಿರಬೇಕಾಗುತ್ತದೆ; ಇದಕ್ಕೆ ಅಗತ್ಯವಾದ ಈ ಕಾಲದ ಪಾಠಗಳನ್ನು ಡಿಎಂಕೆ, ಎಸ್‌ಪಿ, ಆರ್‌ಜೆಡಿ, ಕಮ್ಯುನಿಸ್ಟ್ ಪಕ್ಷಗಳಿಂದಲೂ ಕಲಿಯಬೇಕಾಗುತ್ತದೆ.

ಜಾತಿ ಜನಗಣತಿಗಾಗಿ ಒತ್ತಾಯಿಸುತ್ತಾ ಕಾಂಗ್ರೆಸ್ ಈಗ ಮುಂದಿಡುತ್ತಿರುವ ‘ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಸಮಾನಾವಕಾಶ’ದ ಚಿಂತನೆಯನ್ನು ಲೋಹಿಯಾ ಅವರು ಸಮಾಜವಾದಿ ಪಕ್ಷದೊಳಗೇ ರೂಪಿಸಲೆತ್ನಿಸಿದ್ದರು. ಸಮಾನಾವಕಾಶಗಳ ಅನಿವಾರ್ಯತೆ ಕುರಿತ ತಾತ್ವಿಕ ತಿಳಿವಳಿಕೆಯನ್ನು ಶಿಬಿರ, ಸಂವಾದ, ಬರಹಗಳ ಮೂಲಕ ಕಾರ್ಯಕರ್ತರಲ್ಲಿ ಮೂಡಿಸುತ್ತಿದ್ದರು. ಪಕ್ಷದ ಕಾರ್ಯಕಾರಿಣಿಯಿಂದ ಹಿಡಿದು ಎಲ್ಲ ಮಟ್ಟಗಳಲ್ಲೂ ಹಿಂದುಳಿದವರು, ದಲಿತರು, ಮಹಿಳೆಯರು ಸಹಜವಾಗಿಯೇ ಆಯ್ಕೆಯಾಗುತ್ತಿದ್ದರು. ಹಿಂದುಳಿದ ಜಾತಿಗಳ ಜನರಲ್ಲಿರುವ ಅಸೂಯೆ, ಪರಸ್ಪರ ನಾಶ ಮಾಡಿಕೊಳ್ಳುವ ಪ್ರವೃತ್ತಿಯನ್ನು ಲೋಹಿಯಾ ತೊಡೆಯಲೆತ್ನಿಸಿದರು. ಮುಂದೊಮ್ಮೆ ಕ್ಷೌರಿಕ ಸಮುದಾಯದಿಂದ ಬಂದ ಕರ್ಪೂರಿ ಠಾಕೂರ್ ಬಿಹಾರದ ಮುಖ್ಯಮಂತ್ರಿಯಾಗಿದ್ದರ ಹಿಂದೆ ಹಿಂದುಳಿದ ವರ್ಗಗಳ ಅಧಿಕಾರದ ಇಂಥ ಚಲನೆಗಳು ಜಾತಿ ನಿರ್ಮೂಲನದ ಭಾಗ ಎಂಬ ಸಮಾಜವಾದಿ ಸಿದ್ಧಾಂತವೂ ಕೆಲಸ ಮಾಡಿತ್ತು. ಲೋಹಿಯಾ ಚಿಂತನೆಗಳನ್ನು ಉತ್ತರಪ್ರದೇಶ, ಬಿಹಾರಗಳ ರಾಜಕೀಯ ಪಕ್ಷಗಳು ಮರುವಿವರಿಸಿಕೊಂಡಿವೆ; ಇಂಥ ಚಿಂತನೆಗಳು ಕೇಳಿಸದಂತೆ ಹುಸಿ ಚಿಂತನೆಗಳ ನಗಾರಿ ಬಾರಿಸುವ ಮತೀಯವಾದಿ ಪಕ್ಷಗಳು, ಸರ್ಕಾರಗಳು, ಅವುಗಳ ಬಾಲಂಗೋಚಿ ತಂಡಗಳು ಹಿಂದುಳಿದ ವರ್ಗಗಳ ಏಳಿಗೆಗೆ ಅಡ್ಡಿಯಾಗುತ್ತಲೇ ಇವೆ. ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗಗಳ ಸಲಹಾ ಮಂಡಳಿ ಸಭೆ ಕರ್ನಾಟಕದಲ್ಲಿ ನಡೆಯುತ್ತಿರುವುದರಿಂದ ಅದು ಕರ್ನಾಟಕದ ಸಾಂಸ್ಕೃತಿಕ ಮಾದರಿಯನ್ನೂ ನಿಕಟವಾಗಿ ಅರಿಯಬೇಕು. ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಿಂತನೆಗಳನ್ನು ರಾಜಕೀಯ ವರ್ಗಗಳ ಜೊತೆಗೇ ಹಲಬಗೆಯ ಸಂಸ್ಕೃತಿ ಚಿಂತಕರ ವರ್ಗವೂ ರೂಪಿಸಿದೆ. ಜಾತ್ಯತೀತ ಚಿಂತನೆ, ಕೋಮುವಾದ ವಿರೋಧಿ ಚಿಂತನೆಗಳನ್ನು ರೂಪಿಸುತ್ತಿರುವವರೂ ಈ ಕೆಲಸ ಮಾಡುತ್ತಿದ್ದಾರೆ. ಐವತ್ತು ವರ್ಷಗಳ ಕೆಳಗೆ ಹಾವನೂರು ವರದಿಗೆ ಪ್ರಬಲ ಜಾತಿಗಳ ವಿರೋಧ ಬಂದಾಗ, ಎಂ.ಡಿ. ನಂಜುಂಡಸ್ವಾಮಿ ಹಿಂದುಳಿದ ವರ್ಗಗಳ ಮೀಸಲಾತಿ ಪರವಾದ ಖಚಿತವಾದ ಸೈದ್ಧಾಂತಿಕ ವಿವರಣೆಗಳನ್ನು ಕೊಟ್ಟು, ಹಾವನೂರು ವರದಿಯನ್ನು ಬೆಂಬಲಿಸಿದರು.

ಕಳೆದ ಎಪ್ಪತ್ತೈದು ವರ್ಷಗಳಲ್ಲಿ ಶಾಂತವೇರಿ ಗೋಪಾಲಗೌಡ, ಪೂರ್ಣಚಂದ್ರ ತೇಜಸ್ವಿ, ಕಲ್ಲೆ ಶಿವೋತ್ತಮರಾವ್, ದೇವನೂರ ಮಹಾದೇವ, ಕೆ.ಬಿ. ಸಿದ್ದಯ್ಯ, ಲಂಕೇಶ್, ಬರಗೂರು ರಾಮಚಂದ್ರಪ್ಪ, ವಡ್ಡರ್ಸೆ ರಘುರಾಮಶೆಟ್ಟಿ, ಮೀನಾಕ್ಷಿ ಬಾಳಿ, ರವಿವರ್ಮ ಕುಮಾರ್, ದಿನೇಶ್ ಅಮಿನ್ ಮಟ್ಟು, ವಸು ಮಳಲಿ, ಬಂಜಗೆರೆ ಜಯಪ್ರಕಾಶ್ ಮುಂತಾದ ಹಲವು ಹಿನ್ನೆಲೆಗಳ ಚಿಂತಕ, ಚಿಂತಕಿಯರು ಹಿಂದುಳಿದ ವರ್ಗಗಳ ತಾತ್ವಿಕ ನೆಲೆಗಟ್ಟುಗಳನ್ನು ರೂಪಿಸುತ್ತಾ ಬಂದಿದ್ದಾರೆ. ಕಳೆದ ಮೂವತ್ತು ವರ್ಷಗಳಲ್ಲಿ ಸಿದ್ದರಾಮಯ್ಯನವರ ರಾಜಕೀಯ ಮಾದರಿಯ ಮೂಲಕ ಹಿಂದುಳಿದ ವರ್ಗಗಳ ಪ್ರಬಲ ರಾಜಕೀಯ ಧ್ರುವೀಕರಣದ ಜೊತೆಗೆ ಸಾಂಸ್ಕೃತಿಕ ಧ್ರುವೀಕರಣವೂ ನಡೆದಿದೆ.

ದಲಿತ ಚಿಂತನೆ, ಹಿಂದುಳಿದ ವರ್ಗಗಳ ಚಿಂತನೆ, ಪ್ರಗತಿಪರ ಚಿಂತನೆಗಳು ತಾತ್ವಿಕವಾಗಿ ಬೆಸೆದುಕೊಂಡಿರುವ ಕರ್ನಾಟಕದಲ್ಲಿ ದಲಿತ ಚಳವಳಿಯ ನಾಯಕರು, ಕಾರ್ಯಕರ್ತರು ದಲಿತ–ಹಿಂದುಳಿದ ವರ್ಗಗಳ ಐಕ್ಯತೆಯ ಚಿಂತನೆಗಳನ್ನು ರೂಪಿಸುತ್ತಲೇ ಬಂದಿದ್ದಾರೆ. ಕೋಲಾರದಲ್ಲಿ ‘ಅಹಿಂದ’ ಚಿಂತನೆ ಆರಂಭಗೊಂಡಾಗ ದಲಿತ ಚಳವಳಿ ಹಾಗೂ ಹಿಂದುಳಿದ ವರ್ಗಗಳ ಚಿಂತಕರು ಅದರ ಬುನಾದಿ ಹಾಕಿದ್ದರು. ಸಿದ್ದರಾಮಯ್ಯನವರ ಪ್ರವೇಶದಿಂದಾಗಿ ಅದು ವಿಶಾಲ ರಾಜಕೀಯ ವ್ಯಾಪ್ತಿ ಪಡೆಯಿತು; ಅವರು ಮಂಡಿಸಿದ ಬಜೆಟ್ಟುಗಳಲ್ಲಿ ಆರ್ಥಿಕ ವಿಸ್ತಾರವನ್ನೂ ಪಡೆಯಿತು. ಕರ್ನಾಟಕದ ರೈತ, ಶ್ರಮಿಕ, ಜಾತ್ಯತೀತ ಚಳವಳಿಗಳೂ ಹಿಂದುಳಿದ ವರ್ಗಗಳ ತಾತ್ವಿಕತೆಗೆ ದನಿಯಾಗಿವೆ. ಆದರೆ ಈ ದಿಸೆಯಲ್ಲಿ ವಿಸ್ತೃತ ಚರ್ಚೆಗಳನ್ನು ರೂಪಿಸಬಹುದಾಗಿದ್ದ ಹಿಂದುಳಿದ ವರ್ಗಗಳ ಆಯೋಗ ಈಚಿನ ವರ್ಷಗಳಲ್ಲಿ ಜಡವಾಗತೊಡಗಿದೆ. ಹಾವನೂರು ವರದಿಯ ಘಟ್ಟದಲ್ಲಿ ಆದಂತೆ, ಆಯೋಗದ ವರದಿಗಳನ್ನು ಕೇಂದ್ರವಾಗಿಟ್ಟುಕೊಂಡು ನಡೆಯಬಹುದಾದ ಹಿಂದುಳಿದ ವರ್ಗಗಳ ಬೌದ್ಧಿಕ ಸಂವಾದಗಳು ಕಡಿಮೆಯಾಗತೊಡಗಿವೆ. ರಾಷ್ಟ್ರಮಟ್ಟದಲ್ಲಂತೂ ಇಂಥ ಆಯೋಗವಿರುವುದೇ ಮರೆತುಹೋಗಿದೆ!

ಇದೀಗ ಬೆಂಗಳೂರಿನಲ್ಲಿ ನಡೆಯುತ್ತಿರುವ ಹಿಂದುಳಿದ ವರ್ಗಗಳ ಸಲಹಾ ಮಂಡಳಿ ಸಭೆಯಲ್ಲಿ ಇಡೀ ದೇಶದ ಹಿಂದುಳಿದ ವರ್ಗಗಳ ಕಳೆದ 75 ವರ್ಷಗಳ ಚಲನೆಯ ಏಳುಬೀಳು ಅನುಭವಗಳ ಆಳವಾದ ಅಧ್ಯಯನದ ಮೂಲಕ ತಳಮಟ್ಟದಲ್ಲಿ ಹಿಂದುಳಿದ ವರ್ಗಗಳ ನಾಯಕ, ನಾಯಕಿಯರನ್ನು ಸಿದ್ಧಮಾಡುವ ಶಕ್ತಿ ಕಾಂಗ್ರೆಸ್ಸಿಗಿದೆಯೇ? ಹಿಂದುಳಿದ ವರ್ಗಗಳ ಭವಿಷ್ಯ ಕುರಿತ ದೀರ್ಘ ಕಾಲದ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಲು ಕಾಂಗ್ರೆಸ್ ಹೊರಟಿದೆಯೇ ಎಂಬ ಬಗೆಗೂ ಸ್ಪಷ್ಟತೆ ಬೇಕಾಗುತ್ತದೆ. ಕಾರಣ, ಅರೆ ಮನಸ್ಸಿನ ಪ್ರಯೋಗಗಳು ಅರೆಹಾದಿಯಲ್ಲೇ ಕೊನೆಗೊಳ್ಳಬಲ್ಲವು.

ವಾಚಕರ ವಾಣಿ

ಸರೋಜಾದೇವಿ ಕೊಡುಗೆ ಅನನ್ಯ

ಸರೋಜಾದೇವಿ ಅವರು ಮೃದು ಸ್ವಭಾವದ ನಟಿಯಾಗಿದ್ದರು. ನಡೆ–ನುಡಿಯಿಂದ ಚಿತ್ರರಸಿಕರ ಮನಸ್ಸು ಗೆದ್ದಿದ್ದರು. ಭಾರತೀಯ ಚಿತ್ರರಂಗಕ್ಕೆ ಅನನ್ಯ ಕೊಡುಗೆ ನೀಡಿದ್ದಾರೆ. ಸೌಂದರ್ಯ ಹಾಗೂ ಪ್ರತಿಭೆಯ ಗಣಿಯಾಗಿದ್ದ ಅವರ ಅಗಲಿಕೆಯು ಅಭಿಮಾನಿಗಳಿಗೆ ದುಃಖ ತರಿಸಿದೆ.

ಎಂ.ಎಸ್. ಉಷಾ ಪ್ರಕಾಶ್, ಮೈಸೂರು

ರೈತರ ಬೆವರಿಗೆ ಬೆಲೆ ಇಲ್ಲವೇ?

ಕೇಂದ್ರ ಸರ್ಕಾರವು ಬಂಡವಾಳಶಾಹಿಗಳ ₹16.5 ಲಕ್ಷ ಕೋಟಿ ಸಾಲವನ್ನು ರೈಟ್ ಆಫ್ ಹೆಸರಿನಲ್ಲಿ ಮನ್ನಾ ಮಾಡಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ. ಮತ್ತೊಂದೆಡೆ ರೈತರು ಬೆಳೆಗೆ ಸೂಕ್ತ ಬೆಲೆ ದೊರೆಯದೆ ಸಾಲದ ಸುಳಿಗೆ ಸಿಲುಕಿ ಆತ್ಮಹತ್ಯೆಯ ಹಾದಿ ಹಿಡಿದಿದ್ದಾರೆ. ಗ್ರಾಮೀಣರು ಉದ್ಯೋಗ ಇಲ್ಲದೆ ನಗರ ಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ. ಸರ್ಕಾರಗಳು ಮಾತ್ರ ಬಂಡವಾಳಶಾಹಿಗಳ ಪರವಾಗಿವೆ. ರೈತರ ಬೆವರಿಗೆ ಬೆಲೆಯೇ ಇಲ್ಲವೇ?

ಎಂ. ಆಂಜನೇಯ, ಹಾವೇರಿ

ಜೀವರಕ್ಷಕ ಮಾಹಿತಿಗೆ ‘ಗೋಲ್ಡನ್ ಗಳಿಗೆ’

ಏನಾಗಿದೆ ನಮ್ಮ ಸರ್ಕಾರಕ್ಕೆ, ವಿರೋಧ ಪಕ್ಷಗಳಿಗೆ? ಹಠಾತ್ ಹೃದಯಾಘಾತದಿಂದ ಇಷ್ಟೊಂದು ಜನ ಸಾಯುತ್ತಿದ್ದಾರೆ, ಸಮಾಜಕ್ಕೆ ವೈದ್ಯಕೀಯ ಸಲಹೆ, ಮಾರ್ಗದರ್ಶನ ನೀಡುವ ಒಂದಾದರೂ ಜಾಹೀರಾತು ಪತ್ರಿಕೆಗಳಲ್ಲಿ ಬಂತೆ? ಹೃದಯಾಘಾತದ ಮೊದಲ ಮುನ್ಸೂಚನೆ ಸಿಕ್ಕ ‘ಗೋಲ್ಡನ್ ಗಳಿಗೆ’ಯಲ್ಲಿ ಏನು ಮಾಡಬೇಕೆಂದು ವೈದ್ಯಕೀಯ ಸಂಘ, ಸಂಸ್ಥೆಗಳೂ ಬಾಯಿ ಬಿಡುತ್ತಿಲ್ಲ ಏಕೆ?

ನಾನು ಸಂಗ್ರಹಿಸಿದ ಕೆಲವು ಮಾಹಿತಿಗಳು ಹೀಗಿವೆ: ಅಲ್ಪವೆಚ್ಚದ, ಬಾಯಲ್ಲಿ ಕರಗುವ ಆಸ್ಪಿರಿನ್ ಗುಳಿಗೆಯನ್ನು ಕಿಸೆಯಲ್ಲಿ ಸದಾ ಇಟ್ಟುಕೊಂಡಿರಬೇಕು. ಎದೆನೋವು ಕಾಣಿಸಿಕೊಂಡ ತಕ್ಷಣ ಆ ಮಾತ್ರೆಯನ್ನು ಅಗಿಯಬೇಕು, ನುಂಗಬಾರದು. ತುರ್ತು ಪರಿಸ್ಥಿತಿಯಲ್ಲಿ ಅದು ಹೃದಯದ ರಕ್ತನಾಳ ಮುಚ್ಚಿಕೊಳ್ಳದಂತೆ ಶೀಘ್ರ ತಡೆದು ಜೀವರಕ್ಷಣೆ ಮಾಡುತ್ತದೆ (ಕೆಲವೊಮ್ಮೆ ಆಸಿಡಿಟಿ, ಅಜೀರ್ಣದಿಂದಲೂ ಎದೆನೋವು ಬಂದೀತು; ಆಗ ಇದು ಸೂಕ್ತವಲ್ಲ; ಕೆಲ ಮಾದರಿಯ ಲಕ್ವ ಹೊಡೆದಾಗಲೂ ಆಸ್ಪಿರಿನ್ ಸೇವನೆ ಸೂಕ್ತವಲ್ಲ). ತುರ್ತಾಗಿ ಆಂಬುಲೆನ್ಸ್‌ಗೆ (108) ಕರೆ ಮಾಡಿ. ಆಸ್ಪತ್ರೆಗಳಲ್ಲೂ ತುರ್ತು ಸಹಾಯಕ್ಕೆಂದು ಆಸ್ಪಿರಿನ್ ಅಗಿಯಲು ಹೇಳುತ್ತಾರೆ. ಆಂಬುಲೆನ್ಸ್ ನಿಮ್ಮೂರಲ್ಲಿ ಸದಾ ಸಜ್ಜಾಗಿದೆಯೆ ಎಂದು ಸಾಮಾನ್ಯ ದಿನಗಳಲ್ಲೂ ಆಗಾಗ ಪರೀಕ್ಷೆ ಮಾಡುತ್ತಿರಬೇಕು. ಕೃತಕ ಶ್ವಾಸೋಚ್ಛ್ವಾಸದ (ಸಿಪಿಆರ್) ತಂತ್ರವನ್ನು ಕುಟುಂಬದ ಒಂದಿಬ್ಬರಾದರೂ ಕಲಿತಿರಬೇಕು.

ಇನ್ನೊಂದು ಮುಖ್ಯ ವಿಷಯ: ಲೈಂಗಿಕ ದೌರ್ಬಲ್ಯವನ್ನು ಮೀರಲೆಂದು ವಯಾಗ್ರಾ ಮಾದರಿಯ ಮಾತ್ರೆಗಳ ಬಳಕೆ ಈಗೀಗ ಯುವಕರಲ್ಲೂ ಹೆಚ್ಚಿದೆ. ವೈದ್ಯರ ಸಲಹೆ ಇಲ್ಲದೇ ಸೇವಿಸಬೇಡಿ. ಅದೂ ಕೆಲವರಲ್ಲಿ ಹೃದಯಾಘಾತಕ್ಕೆ ಕಾರಣವಾಗುತ್ತದೆ. ಶಕ್ತಿವರ್ಧಕ ಪೇಯದ ಜೊತೆಗಂತೂ ಅದರ ಸೇವನೆ ಮಾಡಲೇಬಾರದು. ರಕ್ತದೊತ್ತಡ ಹಠಾತ್ ಕಮ್ಮಿ ಆದೀತು. ಜಿಮ್‌ಗೆ ಹೋಗುವವರೂ ಅಲ್ಲಿ ಶಿಫಾರಸು ಮಾಡುವ ಪೇಯ ಮತ್ತು ಆಹಾರದ ಬಗ್ಗೆ ಹುಷಾರಾಗಿರಿ. ಈಗಂತೂ ಇಸಿಜಿ ಮಾಡಿಸಿಕೊಳ್ಳಲು ಅನೇಕರು ದೌಡಾಯಿಸುತ್ತಿದ್ದಾರೆ. ನೆನಪಿರಲಿ, ಇಸಿಜಿ ಪರೀಕ್ಷೆ ಎಲ್ಲ ಸಮಯದಲ್ಲೂ ನಂಬಲರ್ಹ ಕ್ಷೇಮಚಿತ್ರಣ ನೀಡುವುದಿಲ್ಲ.

ಇಂಥ ಮತ್ತು ಇನ್ನೂ ಕೆಲವು ಮುನ್ನೆಚ್ಚರಿಕೆಯ ಕ್ರಮಗಳ ಬಗ್ಗೆ ವೈದ್ಯರ ಅಧಿಕೃತ ಮಾಹಿತಿ ವಿವಿಧ ಮಾಧ್ಯಮಗಳಲ್ಲಿ ಏಕೆ ಬರುತ್ತಿಲ್ಲ? ಸರ್ಕಾರ ಮತ್ತು ರಾಜಕೀಯ ಪಕ್ಷಗಳು ತಮಗೆ ಬೇಕಿದ್ದಾಗ ಏನೆಲ್ಲ ಬಗೆಯ ದೊಡ್ಡ ಜಾಹೀರಾತುಗಳಿಗೆ ಹಣ ಸುರಿಯುತ್ತಿವೆ. ಇಂಥ ಆತಂಕದ ಸಮಯದಲ್ಲಿ ಜನಜಾಗೃತಿಯ ವೈದ್ಯಕೀಯ ಸಲಹೆಗಳನ್ನು ಪ್ರಕಟಿಸುತ್ತಿಲ್ಲ.

ನಾಗೇಶ ಹೆಗಡೆ, ಬೆಂಗಳೂರು

ರಾಜಕಾರಣಿಗಳಿಗೆ ಪ್ರಚಾರದ ಮೋಹ

ಸಾಗರ ತಾಲ್ಲೂಕಿನ ಅಂಬಾರಗೋಡ್ಲು– ಕಳಸವಳ್ಳಿ ಸೇತುವೆ ಲೋಕಾರ್ಪಣೆ ವಿಚಾರಕ್ಕೆ ಸಂಬಂಧಿಸಿದ ‘ಸಿ.ಎಂಗೆ ಅಗೌರವ; ಜಟಾಪಟಿ’ (ಪ್ರ.ವಾ., ಜುಲೈ 14) ಸುದ್ದಿ ಓದಿ ನಗು ಬಂತು. ದೇಶದ ಆರ್ಥಿಕ ಮೂಲವೆಂದರೆ ಜನರು ನೀಡುವ ತೆರಿಗೆ ಹಣ. ಸಾರ್ವಜನಿಕರಿಗೆ ಅನುಕೂಲ ಆಗುವಂತಹ ಯಾವುದೇ ಅಭಿವೃದ್ಧಿ ಯೋಜನೆಯು ಸಾರ್ವಜನಿಕರ ಆಸ್ತಿ. ಇದಕ್ಕೆ ರಾಜಕಾರಣಿಗಳು ಸ್ವಂತವಾಗಿ ನಯಾಪೈಸೆ ಖರ್ಚು ಮಾಡುವುದಿಲ್ಲ. ಆದರೆ, ಈ ಯೋಜನೆಗಳ ಹೆಗ್ಗಳಿಕೆಯನ್ನು ತಮ್ಮದೆಂದು ಬಿಂಬಿಸಿಕೊಳ್ಳುತ್ತಾರೆ. ಸೇತುವೆಗೆ ಸರಳವಾಗಿ ಪೂಜೆ ಸಲ್ಲಿಸಿ ಲೋಕಾರ್ಪಣೆ ಮಾಡಬಹುದಿತ್ತಲ್ಲವೇ?

ವಿ. ತಿಪ್ಪೇಸ್ವಾಮಿ, ಹಿರಿಯೂರು

ಪೊಲೀಸರಿಗೆ ಹಗುರ ಟೋಪಿ ಬೇಕು

ರಾಜ್ಯದ ಹೆಡ್ ಕಾನ್‌ಸ್ಟೆಬಲ್‌ಗಳು ಮತ್ತು ಕಾನ್‌ಸ್ಟೆಬಲ್‌ಗಳು ಧರಿಸುತ್ತಿರುವ ‘ಸ್ಲೋಚ್ ಹ್ಯಾಟ್’ (ಟೋಪಿ) ಬದಲಾವಣೆಗೆ ಪೊಲೀಸ್ ಇಲಾಖೆ ಮುಂದಾಗಿದೆ. ಈಗಾಗಲೇ, ಸಾಕಷ್ಟು ಕ್ಯಾಪ್‌ಗಳನ್ನು ಪರಿಶೀಲಿಸಿದರೂ ಒಮ್ಮತ ಮೂಡಿಲ್ಲ.

ಮಿಲಿಟರಿ ಕ್ಯಾಪ್ ನೋಡಲು ಸುಂದರವಾಗಿದ್ದು, ಹಗುರವಾಗಿದೆ. ಈ ಕ್ಯಾಪ್ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ ಲಾಂಛನದೊಂದಿಗೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ‘ಕರ್ನಾಟಕ ರಾಜ್ಯ ಪೊಲೀಸ್’ ಎಂದು ಬರೆಯಿಸಿ ಅಧಿಕೃತಗೊಳಿಸಬಹುದು. ಈ ಕ್ಯಾಪ್ ತಲೆಯ ಮೇಲೆ ಭಾರ ಎನಿಸುವುದಿಲ್ಲ. ಸ್ವಚ್ಛಗೊಳಿಸಲು ಸುಲಭ. ಕೈಯಲ್ಲಿ ಹಿಡಿದುಕೊಳ್ಳಲು ಮತ್ತು ಕೆಲಸ ಮಾಡುವಾಗ ಓಡಾಡಿದರೂ ಬೀಳುವುದಿಲ್ಲ. ಈಗಾಗಲೇ, ಇದನ್ನು ಹೆಚ್ಚು ಪೊಲೀಸರು ಧರಿಸುತ್ತಿದ್ದಾರೆ. ಇದಕ್ಕೆ ಹೊಂದಿಕೊಳ್ಳುವುದಕ್ಕೆ ಸಮಯ ಬೇಕಾಗಿಲ್ಲ.

ರವಿರಾಜ ಕೆಂದೂರ, ಹುಬ್ಬಳ್ಳಿ

ಚುರುಮುರಿ



ಶಕ್ತಿ ಪ್ರದರ್ಶನ

• ಲಿಂಗರಾಜು ಡಿ.ಎಸ್.

‘ನಮ್ಮ ರಾಜಕೀಯ ಪಕ್ಷಗಳ ತಿಮಿರು ನೋಡಿದ್ರೆ ಅನ್ನಂಗುಲ್ಲ ಆಡಂಗುಲ್ಲ. ಶಕ್ತಿ ಪ್ರದರ್ಶನ ಮಾಡಕ್ಕೆ ಸಮಾವೇಶ ಮಾಡ್ಕ್ಯಂಡು ರೋಡು ತುಂಬಾ ಬ್ಯಾನರ್ರು, ಪುಟಗಟ್ಟಲೇ ಜಾಹೀರಾತು ಹಾಕ್ಸಿಕ್ಯಳೋ ರೋಸು ನೋಡಿದರೆ ಉಂಡುದ್ದೆಲ್ಲಾ ಬಾಯಿಗೆ ಬತ್ತದೆ’ ಅಂತ ತಿಪ್ಪಣ್ಣ ಬೇಜಾರಾಗಿದ್ದ.

‘ಹೂ ಕಯ್ಯಾ, ಮೊನ್ನೆ ಯಾರೋ ಬುದ್ಧಿಜೀವಿಗಳು ರಾಜಕಾರಣಿಗಳಿಗೆ ‘ಯಾಕೆ ಹಿಂಗೆ ನೀವು ನೀವೇ ಶಕ್ತಿ–ಬಲಾಬಲ ಅಂತ ಉರಕಂದು ಸಾಯ್ತೀರಿ. ಆಟದ ನಿಯಮ ಅನುಸರಿಸಿಕ್ಯಂದು ಒಂದು ಸಾರ್ವಜನಿಕ ಶಕ್ತಿ ಪ್ರದರ್ಶನದ ಓಪನ್ ಟೂರ್ನಮೆಂಟ್ ಮಡೀಕಳಿ’ ಅಂತ ಉಚಿತ ಸಲಹೆ ಕೊಟ್ಟರಂತಲ್ಲಾ?’ ಅಂತಂದೆ.

‘ದಿಟ ಅಣ್ತಮ್ಮ, ರಾಜಕಾರಣಿಗಳು ಟೇಬಲ್ ಮುಂದೆ ಕೂಕಂದು ಇನ್ನೊಬ್ಬರ ಬಲಗೈ ಹಿಡಕಂದು ಬಗ್ಗಿಸದು. ಯಾರು ಅವರ ಎಡಗಡೆಗೆ ಬೇಗನೆ ಬಗ್ಗಿಸ್ತಾರೋ ಅವರು ನಾಕೌಟಿಗೋಯ್ತರೆ ಅಂತ ತೀರ್ಮಾನಾತು. ನಾಕ್‌ಔಟ್ ಹಂತದಲ್ಲಿ ಮೂರು ಪಕ್ಷದ ಪಂಟ್ರುಗಳಿಗೆ ಆರು ಸೆಮಿ ಫೈನಲ್ಲು, ಒಂದು ಗ್ರಾಂಡ್ ಫಿನಾಲೆ ನಡೀಬೇಕು ಅಂತ ತೀರ್ಮಾನಾತು’.

‘ಹಸಿರು ಪಕ್ಷದೋರು, ಬ್ರದರ್, ನಮಗೆ ವಾಕ್‌ಓವರ್ ಕೊಟ್ಟು ಒಂದೇ ಫೈನಲ್ ಮಡಗಿ ಅಂದ್ರಂತೆ’.

‘ನೀವಿರೋರೇ ಮೂರು ಜನ. ಪಕ್ಷದಾಗೆ ಬ್ಯಾರೇಗೂ ಅವಕಾಶ ಕೊಡ್ರಿ’ ರೆಫ್ರಿ ರಿಜೆಕ್ಟ್ ಮಾಡಿದರು.

ಕಮಲದ ರೆಬೆಲ್ಲುಗಳು, ಟ್ರಬಲ್ಲುಗಳು ‘ನಾವೇ ಕನ್ರಿ ಫೈನಲ್ಲಿಗೆ ಬರೋರು’ ಅಂತಾ ಕೊಚ್ಚಿಗ್ಯತಿದ್ರಂತೆ’ ಅಂತಂದೆ.

‘ನಿನಗೆ ಗೊತ್ತಾ ಅಣ್ತಮ್ಮ? ಹಳೇ ಪಕ್ಷದಲ್ಲಿ ಮಾತ್ರ ಫೈನಲ್ ಯಾಕೆ? ಅವರಿಗೆ ಶಾಸಕರ ಸಪೋರ್ಟ್ಟಿಲ್ಲ ಕನ್ರಿ ಅಂದಿದ್ರಲ್ಲ ದೊಡ್ಡ ನಾಯಕರು. ಅಷ್ಟರಲ್ಲಿ ಮೂರೂ ಪಕ್ಷಗಳ ಮಹಿಳೆಯರು, ಈ ಸರ್ತಿ ನಮಗೆ ಮೀಸಲಾತಿ ಬೇಕೇಬೇಕು. ಇಲ್ಲೀಗಂಟಾ ನಿಮ್ಮದೇ ಆಯ್ತು ಅಂತ ಜಗಳ ತೆಗುದ್ರು. ಇದ ಕಂಡು ಹೈಕಮಾಂಡು, ನಾನೇಳಗಂಟಾ ಸುಮ್ಮಗೆ ಕುಕಂದಿರಿ ಅಂದೇಟಿಗೆ ಎಲ್ಲಾ ತೆಪ್ಪಗಾದ್ರು’ ತಿಪ್ಪಣ್ಣ ಶರಾ ಬರೆದ.

ಸಂಗತ

ಒಲವಿನ ಕೊಳಕ್ಕೆ ಎಸೆಯಬಹುದೆ ಕಲ್ಲು?

ಮದುವೆ ಮುರಿದುಕೊಳ್ಳುವವರು ಹೆಚ್ಚುತ್ತಿರುವುದು ಹಾಗೂ ಗಂಡ– ಹೆಂಡತಿ ಪರಸ್ಪರ ಕೊಂದುಕೊಳ್ಳುವ ಹಂತಕ್ಕೆ ಹೋಗುತ್ತಿರುವುದು ಕಳವಳಕಾರಿ.

• ಪ. ರಾಮಕೃಷ್ಣ ಶಾಸ್ತ್ರಿ

‘ನಾನು ಬಡವಿ ಆತ ಬಡವ, ಒಲವೆ ನಮ್ಮ ಬದುಕು’ ಎಂಬ ವರಕವಿ ದ.ರಾ. ಬೇಂದ್ರೆ ಅವರ ಕವಿತೆಯ ಸಾಲುಗಳ ಜೀವಂತ ನಿದರ್ಶನಗಳನ್ನು ಈಗ ಕಾಣುವುದು ಕಷ್ಟ. ಒಲವೇ ಜೀವನ ಸಾಕ್ಷಾತ್ಕಾರ ಎನ್ನುವ ಹಾಡು ಜ್ಞಾಪಕ ಚಿತ್ರಶಾಲೆಯಲ್ಲಷ್ಟೇ ಉಳಿದಿದೆ. ಒಲವು ಒಡಕಾಗಿ, ದಾಂಪತ್ಯ ಹಳಿ ತಪ್ಪುತ್ತಿರುವ ಪ್ರಸಂಗಗಳು ಪ್ರತಿದಿನ ವರದಿಯಾಗುತ್ತಿವೆ.

ಮದುವೆಯಾದ ಮೂರೇ ತಿಂಗಳಿಗೆ ಪತಿಯನ್ನು ನದಿಗೆ ತಳ್ಳಿದ ಪತ್ನಿ ಇಲ್ಲವೇ ಹೆಂಡತಿಯನ್ನು ಚುಚ್ಚಿ ಚುಚ್ಚಿ ಕೊಲೆ ಮಾಡಿದ ಗಂಡ, ಇಬ್ಬರೂ ‘ಸಖೀಗೀತ’ವನ್ನು ಓದಿಕೊಂಡವರಲ್ಲ. ಸಖ್ಯದ ಆಖ್ಯಾನವನ್ನು ಅನುಭವದಿಂದ ದಕ್ಕಿಸಿಕೊಂಡವರೂ ಅಲ್ಲ. ಒಂದಾಗಿ ಬೆರೆತು ಸಮರಸದಿಂದ ಬಾಳಬೇಕಾದ ಕುಟುಂಬಗಳಲ್ಲಿ ಒಬ್ಬರನ್ನು ಇನ್ನೊಬ್ಬರು ಕೊಲೆ ಮಾಡಿ ಜೈಲು ಸೇರುವ ಉದಾಹರಣೆಗಳು ಹೆಚ್ಚಾಗುತ್ತಿವೆ. ಅವರಿಗೆ ಮಕ್ಕಳಿದ್ದರೆ ಅವರ ಗತಿಯೇನು?

ಲೈಂಗಿಕ ಶಿಕ್ಷಣ ಪಠ್ಯದ ಭಾಗವಾಗಬೇಕು ಎಂದು ವೈದ್ಯರು, ತಜ್ಞರು ಹಲವು ವರ್ಷಗಳಿಂದ ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಲೈಂಗಿಕ ಶಿಕ್ಷಣ ಪಡೆಯದೆಯೇ ಕಲಿಕೆಯ ಹಂತದಲ್ಲಿ ಅನಾಹುತಗಳಾಗುತ್ತಿವೆ; ಇನ್ನು ಶೈಕ್ಷಣಿಕ ಮಾರ್ಗದರ್ಶನ ಸಿಕ್ಕಿದರೆ ಏನೇನಾಗಬಹುದೋ ಎಂದು ಮೂಗು ಮುರಿಯುವವರೂ ಇದ್ದಾರೆ. ಆದರೆ, ವೈವಾಹಿಕ ಬದುಕಿನ ಸುಗಮಯಾನಕ್ಕೆ ಯಾರೂ ಶಿಕ್ಷಣ ಕೊಡುವುದಿಲ್ಲ. ಹಣೆಗೆ ಸಿಂಧೂರ, ಕತ್ತಿಗೆ ತಾಳಿ ಮುಂತಾದ ಹಳೆಯ ಪಾಠಗಳನ್ನು ವೇದಿಕೆಗಳಲ್ಲಿ ರಂಜನೀಯವಾಗಿ ಉಪನ್ಯಾಸ ಮಾಡಿದರೆ, ಹಳೆಯ ಕಾಲದ ಒಂದಷ್ಟು ಮುತ್ತೈದೆಯರನ್ನು ಬಿಟ್ಟರೆ ಇಂದಿನ ಪೀಳಿಗೆಯವರು ಕಿವಿಗೊಡುವ ಸಾಧ್ಯತೆ ತೀರಾ ಕಡಿಮೆ. ಮದುವೆಯಾದ ವರ್ಷಕ್ಕೇ ವಿಚ್ಛೇದನದ ಹಾದಿ ಹಿಡಿಯುವ ಸಾಲು ಸಾಲು ಪ್ರಕರಣಗಳನ್ನು ಗಮನಿಸಿದರೆ ದಾಂಪತ್ಯದ ಕಲ್ಪನೆಯ ತಳಹದಿಯೇ ಅಲುಗಾಡುತ್ತಿರುವ ಲಕ್ಷಣ ಗೋಚರಿಸುತ್ತದೆ.

ಗಂಡ– ಹೆಂಡತಿ ನಡುವಿನ ಅತೃಪ್ತಿ, ಅಸಹನೆ ಅಥವಾ ಜಗಳ, ಕೊಲೆಯಲ್ಲಿ ಪರ್ಯಾವಸಾನ ಆಗುತ್ತಿರುವುದು ಏಕೆ ಎಂಬುದರ ಬಗೆಗೆ ತಾರ್ಕಿಕವಾದ ನಿರ್ಣಯಗಳು ಲಭ್ಯವಿಲ್ಲ. ಹೆಂಡತಿ ತನಗೆ ಅಡಿಯಾಳಾಗಿರಬೇಕೆಂಬ ಗಂಡಿನ ಆಕ್ರಮಣಕಾರಿ ಮನೋವೃತ್ತಿಯತ್ತ ಆಕೆ ಕೈ ತೋರಿಸಿದರೆ– ಹೆಂಡತಿಗೆ ತಾನು ದುಡಿಯುತ್ತಿದ್ದೇನೆ, ಯಾರ ಹಂಗೂ ಇಲ್ಲದೆ ಬದುಕಬಲ್ಲೆ ಎಂಬ ಹಮ್ಮು ತಲೆಗೇರಿದೆ ಎಂದು ಆತ ಆರೋಪ ಮಾಡುತ್ತಾನೆ. ಮದುವೆಯಾದ ತಿಂಗಳಿಗೇ ಬಿಡುಗಡೆಯ ಹಾದಿ ಹಿಡಿಯುವವರು, ಅದಕ್ಕೆ ನೀಡುವ ಸಾಮಾನ್ಯ ಕಾರಣ, ಸಂಗಾತಿಯ ದೈಹಿಕ– ಮಾನಸಿಕ ಸಮಸ್ಯೆ.

ವೈದ್ಯಕೀಯ ಜಗತ್ತು ಸಾಕಷ್ಟು ಮುಂದುವರಿದಿದೆ.



ದೈಹಿಕ ಸಮಸ್ಯೆಗಳನ್ನು ಸರಿಪಡಿಸಬಲ್ಲ ಚಿಕಿತ್ಸೆಗಳು ಕೈಗೆಟಕುವಂತಿವೆ. ಮಾನಸಿಕ ತಜ್ಞರು ಸಮಸ್ಯೆಯ ಮೂಲವನ್ನು ಹುಡುಕಿ ಹೊಂದಿಕೊಂಡು ಬಾಳುವ ವಿಧಾನವನ್ನು ತೋರಿಸಿಕೊಡಬಲ್ಲರು. ಹೀಗಿದ್ದರೂ, ದಾಂಪತ್ಯದ ಕೀಲು ಯಾಕೆ ಸಡಿಲವಾಗುತ್ತಿದೆ ಎನ್ನುವ ಬಗ್ಗೆ ಉತ್ತರ ಹುಡುಕುವ ಅಗತ್ಯವಿದೆ.

ಕಲಿತವರ ದಾಂಪತ್ಯವೇ ನೆಲೆ ಕಳೆದುಕೊಳ್ಳುತ್ತಿರುವ ಪ್ರಸಂಗ ಎದ್ದು ಕಾಣುವಂತಿದೆ. ಎಲ್ಲ ವಿದ್ಯೆ ಕಲಿತರೂ ದಾಂಪತ್ಯ ಪಾಠದ ಕೊರತೆ ಕಾಡುತ್ತದೆ. ಸಂಬಂಧದಲ್ಲಿನ ಅತೃಪ್ತಿ ಇಬ್ಬರಲ್ಲಿ ಒಬ್ಬರನ್ನು ಅನೈತಿಕ ವ್ಯವಹಾರದತ್ತ ನೂಕುವಂತೆ ಭಾಸವಾಗುತ್ತಿದೆ. ವಿವಾಹ ವಿಚ್ಛೇದನ ಕಾನೂನಿನ ಜಾಗೃತಿಯಿಂದಾಗಿ, ದಾಂಪತ್ಯ ಕಷ್ಟವೆನ್ನಿಸಿದಾಗ ಅದರಿಂದ ಹೊರಬರುವ ಅವಕಾಶ ಮುಕ್ತವಾಗಿದೆ. ಹಿಂದೆಲ್ಲ, ಮದುವೆ ಮುರಿದುಕೊಳ್ಳಲಿಕ್ಕೆ ಕೌಟುಂಬಿಕ ನ್ಯಾಯಾಧೀಶರು ಸುಲಭವಾಗಿ ಒಪ್ಪುತ್ತಿರಲಿಲ್ಲ. ಶಿಥಿಲವಾದ ಸಂಬಂಧವನ್ನು ಮರುಸ್ಥಾಪಿಸಲು ಮಾತುಕತೆ ಮಾಡಿ ಮನವೊಲಿಸುತ್ತಿದ್ದರು. ಈಗ ಅಂತಹ ಪದ್ಧತಿಗಳು ಕಡಿಮೆಯಾಗಿವೆ.

ದಾಂಪತ್ಯದ ಮಾದರಿಗೆ ಭಾರತದಂತೆ ಉದಾಹರಣೆಯಾಗುವ ದೇಶ ಇನ್ನೊಂದಿರಲಾರದು. ಹಕ್ಕಿಗೂಡಿನಂತಹ ಸಂಸಾರ. ಒಲವನ್ನೇ ಬದುಕು ಎಂದುಕೊಂಡ ಸತಿ, ಪತಿ. ಮುದ್ದಾದ ಮಕ್ಕಳು. ಇಂಥ ಸುಂದರ ಕುಟುಂಬವನ್ನು ಕಥೆ–ಕಾವ್ಯಗಳಲ್ಲಿ ಮಾತ್ರವಲ್ಲದೆ, ನಿಜ ಜೀವನದಲ್ಲೂ ಕಾಣಬಹುದಾಗಿತ್ತು. ಈಗ ಕಾಲ ಬದಲಾಗಿದೆ. ಕುಟುಂಬದ ಕನ್ನಡಿಯಲ್ಲಿ ಒಡಕಲು ಬಿಂಬಗಳು! ಸಾಂಸಾರಿಕ ಹಲ್ಲೆಯ ಪ್ರಕರಣಗಳನ್ನು ನೋಡಿದರೆ, ದಾಂಪತ್ಯದ ಪರಿಕಲ್ಪನೆಯಲ್ಲಿ ಸಾಕಷ್ಟು ವ್ಯತ್ಯಾಸಗಳಾಗಿರುವುದು ಸ್ಪಷ್ಟವಾಗುತ್ತದೆ. ಸಂಗಾತಿಯನ್ನು ಕೊಲ್ಲುತ್ತಿರುವವರು ಅಪ್ರಬುದ್ಧರಲ್ಲ, ಅಶಿಕ್ಷಿತರೂ ಅಲ್ಲ. ಕಾನೂನಿನ ಪರಿಣಾಮಗಳನ್ನು ತಿಳಿಯದವರೂ ಅಲ್ಲ. ಹೀಗಿದ್ದೂ ಯಾಕೆ ಕೊಲೆಯಂಥ ಘಟನೆಗಳು ನಡೆಯುತ್ತವೆ? ಗಂಡ– ಹೆಂಡತಿ ಆಜನ್ಮ ವೈರಿಗಳಂತೆ ಪ್ರತೀಕಾರಕ್ಕೆ ಯಾಕೆ ಮುಂದಾಗುತ್ತಾರೆ? ಇವು ಸುಲಭಕ್ಕೆ ಉತ್ತರ ದೊರಕದ ಪ್ರಶ್ನೆಗಳು. ಕೊಲ್ಲುವ ಬದಲು ಸಂಗಾತಿಯನ್ನು ಎಲ್ಲಾದರೂ ಬದುಕಿಕೊಳ್ಳಲು ಅವಕಾಶ ನೀಡುವ ಮಾನವೀಯತೆಯೇ ಮರೆಯಾಗುತ್ತಿರುವುದು ಅಚ್ಚರಿ ಮೂಡಿಸುತ್ತಿದೆ.

ವಿವಾಹಪೂರ್ವ ಲೈಂಗಿಕ ಶಿಕ್ಷಣ ಬೇಕೋ ಬೇಡವೋ ಎನ್ನುವ ಚರ್ಚೆಯಾಚೆಗೆ, ಸಾಮರಸ್ಯದಿಂದ ಬದುಕುವ ಜೀವನ ಪಾಠ ಕಲಿಸುವ ಶಿಕ್ಷಣವಂತೂ ನಮ್ಮ ಮಕ್ಕಳಿಗೆ, ತರುಣ, ತರುಣಿಯರಿಗೆ ಅಗತ್ಯವಾಗಿದೆ. ಅಸಹನೆ, ಕ್ರೋಧ, ಕೊಲೆಗೆ ಮುಂದಾಗುವ ರಾಕ್ಷಸೀ ಪ್ರವೃತ್ತಿ ಮಾಯವಾಗುವಂತಹ ಮನೋಭೂಮಿಕೆ ಸೃಷ್ಟಿಯಾಗದೆ ಹೋದರೆ, ದಾಂಪತ್ಯದ ಸೌಧ ಜಡ ಸ್ಥಾವರವಾಗುತ್ತದೆ. ಸಂಸಾರ ಹಾಲಿನಂತಿಲ್ಲದೆ ಹೋದರೂ ಪರವಾಗಿಲ್ಲ; ಹಾಲಾಹಲ ಆಗಬಾರದು ಎನ್ನುವ ವಿವೇಕವನ್ನು ಕಲಿಸುವ, ಕಲಿತುಕೊಳ್ಳುವ ಮನೋಭಾವ ಯುವಜನರಿಗೆ ಅಗತ್ಯ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.







1.ಬೆಂಗಳೂರಿನಲ್ಲಿ ನಡೆದಿದ್ದ ಗುಬ್ಬಿ ವೀರಣ್ಣ ಅವರ ಜನ್ಮಶತಮಾನೋತ್ಸವ (1991) ಕಾರ್ಯಕ್ರಮದಲ್ಲಿ ವರನಟ ರಾಜ್‌ಕುಮಾರ್ ಅವರೊಂದಿಗೆ ಸರೋಜಾದೇವಿ 2.ಶ್ರೀಹರ್ಷ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಕ್ಷಣ (1.3.1967) 3.ಕಾರ್ಯಕ್ರಮವೊಂದರಲ್ಲಿ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ, ಲೇಖಕ ಅನಂತಮೂರ್ತಿ, ರಂಗಕರ್ಮಿ ಚಿಂದೋಡಿ ಲೀಲಾ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರೊಂದಿಗೆ 4.ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ರಾಜ್‌ಕುಮಾರ್ ಸ್ಮಾರಕ ಪ್ರಾರಂಭೋತ್ಸವದಲ್ಲಿ ನಟರಾದ ಅಂಬರೀಷ್, ಚಿರಂಜೀವಿ, ರಜನಿಕಾಂತ್, ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್ ಅವರೊಂದಿಗೆ 5. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ —ಪ್ರಜಾವಾಣಿ ಸಂಗ್ರಹ ಚಿತ್ರಗಳು

ಬೊಗಸೆ ಕಂಗಳ ಭಾವಾಧ್ಯಾಯ

• ವಿಶಾಖ ಎನ್.

ವಿಶಾಲ ಕಣ್ಣು, ಬಿಲ್ಲಿನಂತೆ ಕೆಳಗೊಂದು ಕಾಡುವ ಮಚ್ಚೆ, ಕಣ್ಣಿಗೆ ದಟ್ಟ ಕಾಡಿಗೆಯ ಚೌಕಟ್ಟು, ನೆರಿಗೆಗಳನ್ನೆಲ್ಲ ಮುಚ್ಚಲೇಬೇಕೆಂಬ ಹಟಕ್ಕೆ ಬಿದ್ದಂತಹ ಮೇಕಪ್. ಮಾತಿನಲ್ಲಿ ಸದಾ ಗತ್ತು, ಸೂಪರ್‌ಸ್ಟಾರ್‌ಗಿರಿಯನ್ನು ಉಜ್ಜುವಂತಹ ಧೋರಣೆ... ನಟಿ ಬಿ. ಸರೋಜಾದೇವಿ ಪ್ರತಿಫಲಿಸುತ್ತಿದ್ದ ಬಗೆ ಇದು.

ಇಪ್ಪತ್ತೊಂಬತ್ತು ವರ್ಷ ಸತತವಾಗಿ ಬಹುಭಾಷಾ ಚಿತ್ರಗಳಲ್ಲಿ ನಾಯಕಿಯಾಗಿ ಮೆರೆದ ಅಭಿನೇತ್ರಿಗೆ ಅಂತಹ ಗತ್ತು ಇರುವುದು ಅಸಹಜವೇನೂ ಅಲ್ಲ. 200ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿ, ಅಪ್ಪಳಿಗತಪ್ಪದಂತೆ ಕಂಡುಂಡ ಸರೋಜಾದೇವಿ ಅವರಿಗೆ 'ಅಭಿನಯ ಸರಸ್ವತಿ' ಎನ್ನುವ ಬಿರುದು ಇದೆ. ಅವರನ್ನು ಹತ್ತಿರದಿಂದ ಕಂಡವರು ದೈವೀಸ್ವರೂಪವನ್ನೇ ನೋಡಿದಂತೆ ಕೈಮುಗಿದ ಪ್ರಸಂಗಗಳು ಒಂದೆರಡಲ್ಲ. ಕಿತ್ತೂರಿಗೆ ಒಮ್ಮೆ ಅವರು ಹೋದಾಗ, ಚೆನ್ನಾಗಿ ಅಲಂಕಾರ ಮಾಡಿ, ಅವರಲ್ಲಿಯೇ ಚೆನ್ನಮ್ಮನನ್ನು ನೋಡಿ ಆ ಊರಿನ ಜನರು ಕೃತಾರ್ಥರಾಗಿದ್ದರು. ಕಿತ್ತೂರು ರಾಣಿ ಚೆನ್ನಮ್ಮನ ಮೂರ್ತಿ ಅಥವಾ ಪ್ರತಿಮೆ ಕಟೆದ ಶಿಲ್ಪಿಗಳ ಮನದಲ್ಲಿ ಇವರದ್ದೇ ಚಹರೆ ಮೂಡಿದ್ದು ನಟಿಯಾಗಿ ಇವರು ಒತ್ತಿರುವ ಛಾಪಿಗೆ ಉದಾಹರಣೆಯಷ್ಟೆ.



'ಕನ್ನಡತ್ತು ಪೈಂಗಿಳಿ' (ಕನ್ನಡದ ಅರಗಿಣಿ) ಎಂದೇ ತಮಿಳುನಾಡು ಇವರನ್ನು ಕೊಂಡಾಡಿದೆ. ಆ ಬಿರುದಿನಲ್ಲಿಯೂ ಇರುವುದು ಕನ್ನಡದ ಬೇರು.

ಬಿ. ಸರೋಜಾದೇವಿ ಅವರ ಮೂಲ ಚನ್ನಪಟ್ಟಣ ತಾಲ್ಲೂಕಿನ ದಶಾವರ ಗ್ರಾಮ. ಓದಿದ್ದು ಬೆಂಗಳೂರಿನ ಸೇಂಟ್ ಥೆರೆಸಾ ಶಾಲೆಯಲ್ಲಿ. 'ಶ್ರೀರಾಮ ಪೂಜಾ' ಸಿನಿಮಾದಲ್ಲಿ ಚಿಕ್ಕ ಪಾತ್ರದಲ್ಲಿ ಅಭಿನಯಿಸಿದ್ದರು. ಅದು ಚಿತ್ರರಂಗಕ್ಕೆ ಅವರ ಮೊದಲ ಪ್ರವೇಶ.

ಬಾಲ್ಯದಿಂದಲೂ ಅವರಿಗೆ ಹಾಡು, ನೃತ್ಯ ಎಂದರೆ ಮೆಚ್ಚು. ಒಮ್ಮೆ ಬೆಂಗಳೂರಿನ ಪುರಭವನದಲ್ಲಿ ನಡೆದ ಸಮಾರಂಭದಲ್ಲಿ ಲತಾ ಮಂಗೇಶ್ಕರ್ ಕಂಠದ ಹಿಂದಿ ಗೀತೆಯೊಂದನ್ನು ಸರೋಜಾದೇವಿ ಹಾಡಿದರು. ಹೊನ್ನಪ್ಪ ಭಾಗವತರ್ ಅದನ್ನು ನೋಡಿದರು. ಮೊದಲಿಗೆ, ಹಿನ್ನೆಲೆ ಗಾಯಕಿಯಾಗುವ ಅರ್ಹತೆ ಈ ಹುಡುಗಿಗೆ ಇದೆ ಎಂದು ಹೊನ್ನಪ್ಪ ಅವರಿಗೆ ಅನಿಸಿತು. ಹತ್ತಿರದಿಂದ ನೋಡಿದ ಮೇಲೆ, ಇಷ್ಟು ದೊಡ್ಡ ಕಣ್ಣುಗಳಿರುವ ಹುಡುಗಿ ನಟಿಯೇ ಯಾಕಾಗಬಾರದು ಎಂದೆನಿಸಿ, 'ಮಹಾಕವಿ ಕಾಳಿದಾಸ' ಚಿತ್ರದ ನಟನೆಗೆ ಆಹ್ವಾನವಿತ್ತರು. ಕು.ರಾ. ಸೀತಾರಾಮ ಶಾಸ್ತ್ರಿ ಆ ಸಿನಿಮಾದ ನಿರ್ದೇಶಕರಷ್ಟೇ ಅಲ್ಲದೆ, ಸಂಪೂರ್ಣ ನಿರ್ವಹಣೆ ವಹಿಸಿಕೊಂಡಿದ್ದರು. ಮೇಕಪ್ ಸುಬ್ಬಣ್ಣ ಸರೋಜಾದೇವಿ ಹೆಸರನ್ನು ಮೊದಲು ಸೂಚಿಸಿದ್ದರಿಂದ ಇಷ್ಟೆಲ್ಲ ಆಯಿತು. ಆಗಿನ್ನೂ ಶಾಲೆಯಲ್ಲಿ ಕಲಿಯುತ್ತಿದ್ದ ಪ್ರತಿಭೆಗೆ ಸಾಣೆ ಹಿಡಿದದ್ದು ಸೀತಾರಾಮ ಶಾಸ್ತ್ರಿ.

ಸರೋಜಾದೇವಿ ಅವರು ತಾಯಿ ರುದ್ರಮ್ಮನವರ ಇಷ್ಟದ ಕೂಸು. ತಂದೆ ಬೈರಪ್ಪನವರಿಂದ ಶಿಸ್ತನ್ನೂ ಕಲಿತಿದ್ದರು. ಸಿನಿಮಾ ಎಂದರೆ ತಾಯಿಗೆ ಪಂಚಪ್ರಾಣ. ಮಗಳಿಗೋ ಶಾಲೆಯ ಮೇಲೆ ಒಲವು. ಹೀಗಾಗಿ ಸಿನಿಮಾದಲ್ಲಿ ನಟಿಸುವ ಅವಕಾಶ ಆ ದಿನಮಾನದಲ್ಲಿ ರೋಚಕವಾಗಿಯೇನೂ ಕಂಡಿರಲಿಲ್ಲ. ಅದೊಂದು ಸಿನಿಮಾದಲ್ಲಿ ನಟಿಸಿ, ಶಾಲೆಗೆ ಮರಳಿದರಾಯಿತು ಎಂದು ತಾಯಿ ತಲೆ ನೇವರಿಸಿದರು. 'ಮಹಾಕವಿ ಕಾಳಿದಾಸ' ಸಿನಿಮಾಕ್ಕೆ ರಾಷ್ಟ್ರ ಪ್ರಶಸ್ತಿ ಬಂತು. ಅವಕಾಶಗಳ ದಿಡ್ಡಿ ಬಾಗಿಲು ತೆರೆಯಲು ಇನ್ನೇನು ಬೇಕು?

ಅದಾಗಿ ಮರುವರ್ಷ 'ಕಚದೇವಯಾನಿ' ಸಿನಿಮಾ ಚಿತ್ರೀಕರಣ ಆಗಿನ ಮದ್ರಾಸ್‌ನ ಸ್ಟುಡಿಯೊದಲ್ಲಿ ನಡೆಯುತ್ತಿತ್ತು. ಅಲ್ಲಿಗೆ ಒಬ್ಬರು ಬಂದರು. ಅವರು ಬಂದೊಡನೆ ಅಲ್ಲಿದ್ದವರೆಲ್ಲ ಎದ್ದು ನಿಂತು, ಗೌರವ ಸೂಚಿಸಿದರು. ಈ ಹುಡುಗಿಯನ್ನು ನೋಡಿದ ಅವರು, ಕನ್ನಡದಲ್ಲಿ 'ಚೆನ್ನಾಗಿ ಇದ್ದೀಯ' ಎಂದು ಹೇಳಿ ಹೊರಟರು. ಆಗ ಸರೋಜಾದೇವಿ ಅವರಿಗೆ ಅವರು ಯಾರೆನ್ನುವುದು ಕೂಡ ಗೊತ್ತಿರಲಿಲ್ಲ. ಕನ್ನಡದಲ್ಲಿಯೂ ಮಾತನಾಡಬಲ್ಲವರಾಗಿದ್ದ ಎಂ.ಜಿ. ರಾಮಚಂದ್ರನ್ (ಎಂ.ಜಿ.ಆರ್) ಈ ಹುಡುಗಿಗೆ ಒಂದು ಸನ್ನಿವೇಶದ ಟೆಸ್ಟ್ ಕೊಟ್ಟರು– ಪಟವೊಂದನ್ನು ಹಿಡಿದು ನೋಡುತ್ತಾ, ಭಾವಾವೇಶದಲ್ಲಿ ಅದನ್ನು ಕೆಳಕ್ಕೆ ಕೆಡವಿ, ಒಂದು ಸುತ್ತು ಹಾಕಬೇಕು. ಪಟ ಕೆಡವಿದ ಮೇಲೆ ಅದರ ಗಾಜು ಚೆಲ್ಲಾಪಿಲ್ಲಿಯಾಯಿತು. ಸರೋಜಾದೇವಿ ಅದರ ಮೇಲೆಯೇ ನಡೆದಾಡಿಬಿಟ್ಟರು. ತಕ್ಷಣವೇ ಆಕೆಯನ್ನು ತಡೆದು, ಪಾದಗಳನ್ನು ಕೈಯಲ್ಲಿ ಹಿಡಿದು, ಪಾದಕ್ಕೆ ನಾಟಿದ್ದ ಗಾಜಿನ ಚೂರನ್ನು ಹೊರತೆಗೆದು, ಬಟ್ಟೆ ಕಟ್ಟಿದರು. ಸರೋಜಾದೇವಿ ತಾವು ಅವರಲ್ಲಿ ಮಾನವೀಯತೆಯ ಒರತೆಯನ್ನು ಆಗ ಕಂಡಿದ್ದಾಗಿ ಹೇಳಿಕೊಳ್ಳುತ್ತಲೇ ಇದ್ದರು. ಆ ಭೇಟಿಯ ನಂತರ 'ನಾಡೋಡಿ ಮನ್ನನ್' (1956) ತಮಿಳು ಸಿನಿಮಾದಲ್ಲಿ ಸರೋಜಾದೇವಿ ನಾಯಕಿಯಾದರು.

ಕನ್ನಡವೇ ಬೇರು

ಬೇರೆ ಭಾಷೆಗಳಲ್ಲಿ ಅವಕಾಶದ ಚಿಗುರು ಮೂಡಿದರೂ ಕನ್ನಡದ ಬೇರನ್ನು ಅವರು ಮರೆಯಲಿಲ್ಲ. ರಾಜ್‌ಕುಮಾರ್, ಉದಯಕುಮಾರ್, ಕಲ್ಯಾಣ್‌ಕುಮಾರ್ ಅವರೊಟ್ಟಿಗೆ ಅಭಿನಯ ಮುಂದುವರಿಸಿದರು. ರಾಜ್‌ಕುಮಾರ್ ಜೋಡಿಯಾಗಿ ಈ ನಟಿಯ ನೆನಪು ಉಳಿಯಲು ಹಲವು ಕಾರಣಗಳಿವೆ. 'ಅಣ್ಣ ತಂಗಿ' ಚಿತ್ರದಲ್ಲಿನ ದೇಸಿ ಸೊಗಡಿನ ಮಾತಿನಲ್ಲಿ ಇಬ್ಬರದ್ದೂ ಜುಗಲ್‌ಬಂದಿ. 'ಭಾಗ್ಯವಂತರು' ಚಿತ್ರದಲ್ಲಿನ ಭಾವತೀವ್ರತೆಯ ಕ್ಷಣಗಳನ್ನು ಇಬ್ಬರೂ ಜೀವಿಸಿರುವುದು ಚಿತ್ರಪ್ರಿಯರ ಕಣ್ಣಲ್ಲಿದೆ. 'ಮಲ್ಲಮ್ಮನ ಪವಾಡ', 'ಬಬ್ರುವಾಹನ' ಇವೆಲ್ಲವೂ ಸರೋಜಾದೇವಿ ನಟನಾ ಸಾಮರ್ಥ್ಯದ ಮಾದರಿಗಳು. ಕಿತ್ತೂರು ರಾಣಿ ಚೆನ್ನಮ್ಮನಾಗಿ ಅವರು 'ನಿಮಗೇಕೆ ಕೊಡಬೇಕು ಕಪ್ಪ' ಎಂದು ಹೇಳಿರುವ ಸಂಭಾಷಣೆಯನ್ನು ಇವತ್ತಿಗೂ ಮಕ್ಕಳು ಕಣ್ಣಿಗೊತ್ತಿಕೊಂಡಂತೆ ಅಭಿನಯಿಸಿ ತೋರುತ್ತಿದ್ದಾರೆ.

ಎಂ.ಜಿ.ಆರ್. ಸಿನಿಮಾಗಳ ನಾಯಕಿಯರಿಗೆ ಆಗ ಶಿವಾಜಿ ಗಣೇಶನ್ ಚಿತ್ರಗಳಲ್ಲಿ ಅಭಿನಯಿಸುವ ಅವಕಾಶ ಸಿಗುತ್ತಿರಲಿಲ್ಲ. ಆದರೆ, ಸರೋಜಾದೇವಿ ವಿಷಯದಲ್ಲಿ ಹಾಗೆ ಆಗಲಿಲ್ಲ. ಅವರು ಶಿವಾಜಿ ಚಿತ್ರಗಳಲ್ಲೂ ಅಭಿನಯಿಸಿದರು. ಅಷ್ಟೇ ಏಕೆ, ಮುಂದುವರಿದು ತಮಿಳುನಾಡಿನ ವಿಜಯ್, ಸೂರ್ಯ ಸಿನಿಮಾಗಳಲ್ಲಿಯೂ ಅಭಿನಯಿಸಿ ತಮ್ಮ ಗತವೈಭವವನ್ನು ಮತ್ತೆ ಅನುಭವಿಸಿ ಬಂದರು.

ತಮಿಳಿನಿಂದ ತೆಲುಗಿಗೆ ಗಾಳಿ ಬೀಸಿತು. ಅಕ್ಕಿನೇನಿ ನಾಗೇಶ್ವರರಾವ್, ಎನ್.ಟಿ. ರಾಮರಾವ್ (ಎನ್.ಟಿ.ಆರ್) ಅವರಿಗೂ ನಾಯಕಿಯಾದರು.

ಸರೋಜಾದೇವಿ ಅವರ ಸೌಂದರ್ಯ ಹಾಗೂ ಅಭಿನಯದ ಟೈಮಿಂಗ್ ಜನಪ್ರಿಯವಾದದ್ದೇ ಹಿಂದಿ ಚಿತ್ರರಂಗಕ್ಕೂ ಆಹ್ವಾನ ಬಂದಿತು. ದಿಲೀಪ್ ಕುಮಾರ್, ರಾಜೇಂದ್ರ ಕುಮಾರ್, ಶಮ್ಮಿ ಕಪೂರ್, ಸುನಿಲ್ ದತ್ ಚಿತ್ರಗಳಲ್ಲಿ ನಾಯಕಿಯ ಪಾತ್ರಗಳು ಸಿಕ್ಕವು.

ಭರ್ಜರಿ ಫಾರ್ಮ್

ಎಂ.ಜಿ.ಆರ್ ಜೋಡಿಯಾಗಿ 26, ಶಿವಾಜಿ ನಾಯಕಿಯಾಗಿ 22 ಸಿನಿಮಾಗಳಲ್ಲಿ ಸರೋಜಾದೇವಿ ನಾಯಕಿಯಾಗಿ ನಟಿಸಿದ್ದು ಅವರ ಅಭಿನಯದ ಇನಿಂಗ್ಸ್‌ನ ಭರ್ಜರಿ ಫಾರ್ಮ್‌ಗೆ ಹಿಡಿದ ಕನ್ನಡಿ.

ಕಳೆದ ಎರಡು ದಶಕಗಳಿಂದ ಸರೋಜಾದೇವಿ ಅಷ್ಟಾಗಿ ಸಿನಿಮಾಗಳಲ್ಲಿ ಕಾಣಿಸಿಕೊಳ್ಳಲಿಲ್ಲ. 'ನಟಸಾರ್ವಭೌಮ' ಅವರ ನಟನೆಯ ಕೊನೆಯ ಸಿನಿಮಾ. ಪುನೀತ್ ರಾಜ್‌ಕುಮಾರ್ ಜೊತೆ 'ಯಾರಿವನು' ಸಿನಿಮಾದಲ್ಲಿ ನಟಿಸಿದ್ದಾಗಲೇ, 'ಆ ಹುಡುಗ ಮುಂದೆ ಬೆಳೆಯುತ್ತಾನೆ' ಎಂದು ಭವಿಷ್ಯ ನುಡಿದಿದ್ದ ಪ್ರಾಂಜಲ ಮನಸ್ಸು ಅವರದ್ದು. ರಾಜ್ ಕುಟುಂಬದ ಜೊತೆಗೆ ನಿಕಟವಾದ ನಂಟು ಇತ್ತು.

ಅಭಿನಯದ ಉತ್ತುಂಗದಲ್ಲಿ ಇರುವಾಗಲೇ ಮನೆಯವರು ತೋರಿಸಿದ ಶ್ರೀಹರ್ಷ ಅವರನ್ನು ಸರೋಜಾದೇವಿ 1967ರಲ್ಲಿ ಮದುವೆಯಾದರು. ಹಣಕಾಸು ವ್ಯವಹಾರದ ಸಮಸ್ಯೆಗೆ ಪತ್ನಿ ಸಿಲುಕಿದಾಗ, ಕೈಹಿಡಿದು ದಾರಿ ತೋರಿದವರು ಶ್ರೀಹರ್ಷ. 1986ರಲ್ಲಿ ಅವರು ಹೃದಯಾಘಾತದಿಂದ ತೀರಿಕೊಂಡರು.

ತಾವು ತುಂಬಾ ಇಷ್ಟಪಡುತ್ತಿದ್ದ ತಾಯಿಯನ್ನು ಕಳೆದುಕೊಂಡ ಮೇಲೆ ಸರೋಜಾದೇವಿ ಅವರಲ್ಲಿ ಶೂನ್ಯ ಆವರಿಸಿಕೊಂಡಿತ್ತು. ಪತಿ ಅಗಲಿದ ಮೇಲೆ ಸಂಕಷ್ಟಗಳ ಸರಮಾಲೆ ಎದುರಾಯಿತು ಎಂದೂ ಅವರು ಹೇಳಿಕೊಂಡಿದ್ದರು.

ಪದ್ಮಶ್ರೀ, ಪದ್ಮಭೂಷಣ ಪುರಸ್ಕಾರಗಳು, ರಾಜ್ಯೋತ್ಸವ ಪ್ರಶಸ್ತಿ, ಎಂ.ಜಿ.ಆರ್. ಪ್ರಶಸ್ತಿ, ಎನ್‌.ಟಿ.ಆರ್. ಪ್ರಶಸ್ತಿ, ಬೆಂಗಳೂರು ವಿವಿಯ ಗೌರವ ಡಾಕ್ಟರೇಟ್‌ಗೆ ಭಾಜನರಾಗಿದ್ದ ಅವರನ್ನು ತಮಿಳುನಾಡಿನ ಅಭಿಮಾನಿಗಳು ಇಳಿಗಾಲದಲ್ಲೂ ಕೊಂಡಾಡುತ್ತಲೇ ಇದ್ದರು. ಹುಟ್ಟೂರಿನ ಸರ್ಕಾರಿ ಶಾಲೆಯನ್ನು ಪುನರುಜ್ಜೀವನಗೊಳಿಸಿದ್ದೇ ಅಲ್ಲದೆ, ಕೆಲವು ಆಸ್ಪತ್ರೆಗಳಿಗೂ ಸರೋಜಾದೇವಿ ನೆರವು ನೀಡಿದ್ದರು.

'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮದಲ್ಲಿ ಮಾತನಾಡುವಾಗಲೂ ಅವರು ತಮ್ಮ ವಯಸ್ಸನ್ನು ಹೇಳಲು ಅನುಮತಿ ಕೊಟ್ಟಿರಲಿಲ್ಲ. ಸರ್ವಾಲಂಕಾರಭೂಷಿತೆಯಾಗಿಯೇ ಕಾಣಿಸಿಕೊಳ್ಳಲು ಬಯಸುತ್ತಿದ್ದ ಅವರಲ್ಲಿ ಸದಾ ಜೀವಂತಿಕೆ ಹಾಗೂ ಹೆಮ್ಮೆ ತುಂಬಿ ತುಳುಕುತ್ತಿತ್ತು.

ಬೊಗಸೆ ಕಂಗಳಲ್ಲೇ ಭಾವಸ್ಫುರಿಸುತ್ತಿದ್ದ ಸೂಪರ್ ಸ್ಟಾರ್ ನಟಿ ಇನ್ನು ನೆನಪಿನ ಅಧ್ಯಾಯವಾಗಿದ್ದಾರೆ. ಅವರು ಉಳಿಸಿರುವ ಸಿನಿಮಾಗಳು ಉಸಿರಾಡುತ್ತಲೇ ಇರುತ್ತವೆ.



ಪ್ರಮುಖ ಚಿತ್ರಗಳು

ಕನ್ನಡ: ರತ್ನಗಿರಿ ರಹಸ್ಯ, ಸ್ಕೂಲ್ ಮಾಸ್ಟರ್, ವಿಜಯನಗರದ ವೀರಪುತ್ರ, ಲಕ್ಷ್ಮೀ, ಸರಸ್ವತಿ, ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮಾ, ಶ್ರೀ ಶ್ರೀನಿವಾಸ ಕಲ್ಯಾಣ
ತಮಿಳು: ನಾಡೋಡಿ ಮನ್ನನ್, ಅನ್ಬೇವಾ, ಎಂಗವೀಟ್ಟು ಪಿಳ್ಳೈ, ತಿರುಡಾದೆ, ಪಡಕೋಟಿ, ಆಲಯಮಣಿ, ಪಾಲುಂ ಪಳಮುಂ, ಪುದಿಯ ಪರವೈ
ತೆಲುಗು: ಭೂಕೈಲಾಸ್, ಪೆಳ್ಳಿ ಸಂದಡಿ, ಇಂಟಿಕಿ ದೀಪಂ ಇಲ್ಲಾಲೆ, ಜಗದೇಕ ವೀರುನಿ ಕಥಾ, ಶ್ರೀ ಸೀತಾರಾಮ ಕಲ್ಯಾಣಂ, ಮಂಚಿ ಚೆಡು, ಶಕುಂತಲಾ, ಭಾಗ್ಯಚಕ್ರಮು
ಹಿಂದಿ: ಒಪೆರಾ ಹೌಸ್, ಪರೀಕ್ಷಾ, ಪ್ಯಾರ್ ಕಿಯಾ ತೊ ಡರ್ನಾ ಕ್ಯಾ, ಪ್ರೀತ್ ನ ಜಾನೆ ರೀತ್

'ನಾವು ಭಾಗ್ಯವಂತರಾದೆವು'

• ಭಾರ್ಗವ

ನನ್ನ ನಿರ್ದೇಶನದ ಚೊಚ್ಚಲ ಸಿನಿಮಾ 'ಭಾಗ್ಯವಂತರು'. ಅದರ ಆರಂಭದ ಸಾಲುಗಳು ಹೀಗಿದ್ದವು: ಒಬ್ಬರಿಗಾಗಿ ಒಬ್ಬರು ಉಸಿರಾಡುತ್ತಾ ಅನುಕ್ಷಣವೂ ತ್ಯಾಗದಿಂದ ದೊರಕುವ ಆನಂದದ ಅಮೃತವನ್ನು ಸವಿಯುವ ದಂಪತಿಯೇ 'ಭಾಗ್ಯವಂತರು'. ತೆರೆಯಲ್ಲಿ ಇಂತಹ ದಂಪತಿಯಾಗಿ ಕಾಣಿಸಿಕೊಂಡು, ಆ ಪಾತ್ರಗಳಿಗೆ ಜೀವತುಂಬಿ, ಪ್ರೇಕ್ಷಕರನ್ನು ಸೆಳೆದವರು ವರನಟ ರಾಜ್‌ಕುಮಾರ್ ಹಾಗೂ ಬಿ.ಸರೋಜಾದೇವಿ.

ಹಲವು ಸಿನಿಮಾಗಳಲ್ಲಿ ಸಹ ನಿರ್ದೇಶಕನಾಗಿದ್ದ ನಾನು ನಿರ್ದೇಶಕನಾಗಬೇಕಿತ್ತು. ದ್ವಾರಕೀಶ್ ಅವರು 'ಕೌಬಾಯ್ ಕುಳ್ಳ' ಮುಂತಾದ ಸಿನಿಮಾಗಳ ಆಫರ್ ಕೊಟ್ಟರು. ಆದರೆ ಅವುಗಳನ್ನು ತಿರಸ್ಕರಿಸಿದ್ದೆ. ಆ್ಯಕ್ಷನ್‌ಗಿಂತ ಕಥೆಯಿರುವ ಸಿನಿಮಾಗಳನ್ನು ನಿರ್ದೇಶಿಸೋಣ ಎಂದು ನಿರ್ಧರಿಸಿದ್ದೆ. ಇದೇ ರೀತಿ ಕಥೆ ಹುಡುಕುತ್ತಿರುವಾಗ 'ಭಾಗ್ಯವಂತರು' ದೊರೆಯಿತು. ಸಹ ನಿರ್ದೇಶಕನಾಗಿ ನನ್ನ ಕೆಲಸವನ್ನು ಇವರಿಬ್ಬರೂ ನೋಡಿದ್ದರು. ಹೀಗಾಗಿಯೇ ನನ್ನ ನಿರ್ದೇಶನದಲ್ಲಿ ಕೆಲಸ ಮಾಡಲು ಸುಲಭವಾಗಿ ಒಪ್ಪಿಕೊಂಡಿದ್ದರು. ಸರೋಜಾದೇವಿ ಮೇಧಾವಿ ನಟಿ. ನಿರ್ಮಾಪಕರಾದ ದ್ವಾರಕೀಶ್, ಚಿ.ಉದಯಶಂಕರ್ ಅವರಿಗೂ ಸರೋಜಾದೇವಿಯವರೇ ಆ ಪಾತ್ರ ಮಾಡಬೇಕು ಎಂದಿತ್ತು.

> **ನಮ್ಮಿಬ್ಬರದು 50 ವರ್ಷಗಳ ಪರಿಚಯ. ನಾನು ಬೆರಗಾಗಿ ನೋಡಿದ, ನನ್ನ ಮೇಲೆ ಪ್ರಭಾವ ಬೀರಿದ ಕಲಾವಿದೆ ಅವರು. ಗೌರವದಿಂದ, ಘನತೆಯಿಂದ ಬದುಕಲು ಕಲಿಸಿದವರು. ಶತಮಾನಕ್ಕೆ ಒಬ್ಬರೇ ಸರೋಜಾದೇವಿ**
> **ಜಯಮಾಲಾ,** ನಟಿ

ಈ ಸಿನಿಮಾದಲ್ಲಿ ಯೌವನದಿಂದ ಹಿಡಿದು ವೃದ್ಧರಾಗುವವರೆಗಿನ ದಂಪತಿಯ ಕಥೆ ಇದೆ. ವಯಸ್ಸಾದಾಗ ವಿಗ್ ಹಾಕುವುದೇ ಅಥವಾ ಇರುವ ಕೂದಲಿಗೆ ಬಣ್ಣ ಹಚ್ಚುವುದೇ ಎಂಬ ಪ್ರಶ್ನೆ ಮೂಡಿತ್ತು. ಕೂದಲಿಗೇ ಬಣ್ಣ ಬಳಿದರೆ ದೃಶ್ಯಗಳು ಚೆನ್ನಾಗಿ ಬರುತ್ತವೆ ಎಂದುಕೊಂಡು ರಾಜ್‌ಕುಮಾರ್ ಅವರಿಗೆ ತಿಳಿಸಿದೆ. ಅವರು ಒಪ್ಪಿಕೊಂಡರು. ಆದರೆ ಸರೋಜಾದೇವಿಯವರು ಬೇರೆ ಸಿನಿಮಾಗಳು, ಕಾರ್ಯಕ್ರಮಗಳು ಇವೆ ಎಂದು ಒಪ್ಪಿಕೊಳ್ಳಲಿಲ್ಲ. ಕೊನೆಗೆ ರಾಜ್‌ಕುಮಾರ್ ಅವರು ವಿಗ್ ಹಾಕಿಕೊಳ್ಳುತ್ತಿಲ್ಲ ಎಂದು ತಿಳಿದಾಗ ಅವರೂ ಒಪ್ಪಿಕೊಂಡರು. ಅವರಿಬ್ಬರ ಅಮೋಘ ಅಭಿನಯ ಸಿನಿಮಾವನ್ನು ಗೆಲ್ಲಿಸಿತು.

ರಾಜ್‌ಕುಮಾರ್ ಹಾಗೂ ಸರೋಜಾದೇವಿಯವರ ನಟನೆಯಲ್ಲಿ ಒಂದು ಆರೋಗ್ಯಕರ ಸ್ಪರ್ಧೆಯನ್ನು ನಾನು ಗಮನಿಸಿದ್ದೆ. ಒಬ್ಬರು ಸಂಭಾಷಣೆ ಮಾಡುವಾಗ ಪ್ರತ್ಯುತ್ತರವಾಗಿ ಪೈಪೋಟಿಗೆ ಬಿದ್ದವರಂತೆ ಮತ್ತೊಬ್ಬರು ಭಾವನೆಗಳನ್ನು ಪ್ರದರ್ಶಿಸುತ್ತಿದ್ದರು. ಸರೋಜಾದೇವಿಯವರ ನಡಿಗೆಗೇ ಚಪ್ಪಾಳೆ ಬೀಳುತ್ತಿತ್ತು. ಅವರ ದನಿ ಗಿಣಿಯ ದನಿಯಂತೆ ಇಂಪಾಗಿತ್ತು. ಇದು ಎಲ್ಲರನ್ನೂ ಸೆಳೆದ ಅಂಶ. ಎಲ್ಲಿಯೂ ಕೆಟ್ಟ ಹೆಸರು ತೆಗೆದುಕೊಳ್ಳದೆ ಎಲ್ಲರಿಗೂ ಬೇಕಾದವರಾದರು.

ಯಾವುದೇ ಅಹಂಕಾರವಿಲ್ಲದ ವ್ಯಕ್ತಿತ್ವ ಅವರದು. 'ಭಾಗ್ಯವಂತರು' ಸಿನಿಮಾದ ಚಿತ್ರೀಕರಣದ ಸಂದರ್ಭದಲ್ಲಿ ಸರೋಜಾದೇವಿ–ಶ್ರೀಹರ್ಷ ಅವರು ಇಡೀ ಚಿತ್ರತಂಡಕ್ಕೆ ಪ್ರೀತಿಯಿಂದ ಊಟ ಹಾಕಿದ್ದರು. ನನ್ನನ್ನು ನೋಡಿದಾಕ್ಷಣ 'ಭಾಗ್ಯವಂತರು ಭಾರ್ಗವ' ಎಂದೇ ಕರೆಯುತ್ತಿದ್ದರು. ಅಮೋಘ ಅಭಿನಯದಿಂದ ಎಲ್ಲಾ ಭಾಷಿಕರನ್ನೂ ಸೆಳೆದ ಸರೋಜಮ್ಮ ಅಚ್ಚಳಿಯದೆ ಉಳಿದಿದ್ದಾರೆ, ಉಳಿಯಲಿದ್ದಾರೆ.

ಲೇಖಕ: ನಿರ್ದೇಶಕ, ನಿರೂಪಣೆ: ಅಭಿಲಾಷ್ ಪಿ.ಎಸ್.



ನಟಿಯರಾದ ಉಮಾಶ್ರೀ, ಜಯಮಾಲಾ, ಜಯಂತಿ, ಭಾರತಿ ಅವರೊಂದಿಗೆ ಸರೋಜಾದೇವಿ

ಜೀವಮಾನ ಸಾಧನೆ ಪುರಸ್ಕಾರ

ಬಿ.ಸರೋಜಾದೇವಿಯವರ ಸುದೀರ್ಘ ಸಿನಿಪಯಣವನ್ನು ಗುರುತಿಸಿ 2024ರಲ್ಲಿ ನಡೆದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿಯಲ್ಲಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು

ನಮಗೆ ಹೆಮ್ಮೆಯಿತ್ತು

ನಾನು 1951ರಲ್ಲಿ 'ಜಗನ್ಮೋಹಿನಿ' ಸಿನಿಮಾ ಮೂಲಕ ಚಿತ್ರರಂಗಕ್ಕೆ ಬಂದೆ. ಸರೋಜಾದೇವಿಯವರೂ ಇದೇ ಕಾಲಘಟ್ಟದಲ್ಲಿ ಸಿನಿಮಾರಂಗಕ್ಕೆ ಬಂದವರು. ಮದ್ರಾಸ್‌ನಲ್ಲಿ ನಮ್ಮಿಬ್ಬರ ಮೊದಲ ಭೇಟಿಯಾಗಿತ್ತು. ವೈಯಕ್ತಿಕ ಕಷ್ಟಸುಖ, ಕನ್ನಡ ಚಿತ್ರರಂಗ ಮತ್ತದರ ಕಲಾವಿದರ ಕಷ್ಟಸುಖಗಳ ಬಗ್ಗೆ ಮಾತುಕತೆ ನಡೆಸುತ್ತಿದ್ದೆವು. ಮದ್ರಾಸ್‌ನಲ್ಲಿ ಕನ್ನಡ ಕಲಾವಿದರಿಗೆ ಸಹಾಯ ಮಾಡುತ್ತಿದ್ದ ಕಲಾವಿದೆ ಆಕೆ. ನಾವು ಅವರನ್ನು ಬಹಳ ಹೆಮ್ಮೆಯಿಂದ ನೋಡುತ್ತಿದ್ದೆವು. ಸುದೀರ್ಘ ಅವಧಿಗೆ ನಾಯಕಿಯಾಗಿ ನಟಿಸಿದ ಮತ್ತೊಬ್ಬ ಕಲಾವಿದೆ ದೇಶದಲ್ಲೇ ಇಲ್ಲ

ಹರಿಣಿ, ನಟಿ



'ಸರೋಜಾದೇವಿ'ಯಾಗಿಯೇ ನಟಿಸಿದ್ರು

'ನಟಸಾರ್ವಭೌಮ' ಚಿತ್ರದ ದೃಶ್ಯ. ಅಲ್ಲಿ ಸರೋಜಾದೇವಿಯವರನ್ನು ಪುನೀತ್ ಸಂದರ್ಶನ ಮಾಡುತ್ತಾ, 'ನಿಮ್ಮ ಫೇವರಿಟ್ ಸಿನಿಮಾ ಯಾವುದು' ಎಂದು ಕೇಳುತ್ತಾರೆ. ಆಗ ಸರೋಜಾದೇವಿಯವರು, 'ಯಾರಿವನು' ಸಿನಿಮಾ. ಏಕೆಂದರೆ ಅದರಲ್ಲಿ ಎವರ್‌ಗ್ರೀನ್ ಸೂಪರ್‌ಸ್ಟಾರ್ ಮತ್ತು ಭವಿಷ್ಯದ ತಾರೆ ಜೊತೆ ನಟಿಸಿದ್ದೀನಲ್ಲ. ಬಂಗಾರದಂಥ ಅನುಭವ ಅದು..' ಎನ್ನುತ್ತಾರೆ.

ಈ ದೃಶ್ಯ ಹುಟ್ಟಿಕೊಂಡ ಬಗ್ಗೆ ಚಿತ್ರದ ನಿರ್ದೇಶಕ ಪವನ್ ಒಡೆಯರ್ ನೆನಪಿಸಿಕೊಂಡರು.

'ಈ ಸಿನಿಮಾದಲ್ಲಿ ಪುನೀತ್ ಅವರು ಪತ್ರಕರ್ತನ ಪಾತ್ರ ಮಾಡಿದ್ದಾರೆ. ಅದರಲ್ಲಿ ಅವರಿಗೆ ಬಿ. ಸರೋಜಾದೇವಿಯವರನ್ನೇ ಸಂದರ್ಶನ ಮಾಡುವ ದೃಶ್ಯವಿತ್ತು. ಸರೋಜಾದೇವಿಯವರನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು ಆ ಪಾತ್ರ ಬರೆದಿದ್ದೆ. ಇದು ಅಪ್ಪು ಅವರಿಗೂ ಖುಷಿಯಾಗಿತ್ತು. ಸರೋಜಾದೇವಿಯವರ ಬಳಿ ತೆರಳಿ ನೀವೊಂದು ಪಾತ್ರವನ್ನು ಮಾಡಬೇಕು ಎಂದಾಗ ಮೊದಲು ಒಪ್ಪಿಕೊಂಡಿರಲಿಲ್ಲ. ಬಳಿಕ ನೀವು ನೀವಾಗಿಯೇ ಅಭಿನಯಿಸಬೇಕು ಎಂದಾಗ ಖುಷಿಯಿಂದ ಒಪ್ಪಿಕೊಂಡರು. 'ಸುಮಾರು 160 ಸಿನಿಮಾ ಮಾಡಿದ್ದೇನೆ, ಆದರೆ ಯಾವತ್ತೂ ಬಿ.ಸರೋಜಾದೇವಿಯಾಗಿ ಕಾಣಿಸಿಕೊಂಡಿಲ್ಲ. ಖಂಡಿತವಾಗಿಯೂ ಮಾಡುತ್ತೇನೆ' ಎಂದಿದ್ದರು. ಅವರಿಗೆ ಅವರದ್ದೇ ಆದ ಒಂದು ಸ್ಟೈಲ್ ಇದೆ. ಚಿತ್ರೀಕರಣಕ್ಕೂ ಅವರೇ ಸಿದ್ಧವಾಗಿ ಬಂದಿದ್ದರು. ಆಗಲೇ ಅವರು ಪ್ಯಾನ್ ಇಂಡಿಯಾ ಸ್ಟಾರ್. ಎಲ್ಲಾ ಸೂಪರ್‌ಸ್ಟಾರ್‌ಗಳ ಜೊತೆ ಅವರು ಕೆಲಸ ಮಾಡಿದ್ದಾರೆ' ಎಂದು ಭಾವುಕರಾದರು ಪವನ್.

ಮಾರ್ಗದರ್ಶಕರು ಬೇಕಾಗಿದ್ದಾರೆ



ನುಡಿ ಬೆಳಗು
ದೀಪಾ ಹಿರೇಗುತ್ತಿ

ಶಿಕ್ಷಕರೊಬ್ಬರು ತಮ್ಮ ವಿದ್ಯಾರ್ಥಿಗಳಿಗೆ ಜನಸಾಮಾನ್ಯರ ಸಂಕಷ್ಟಗಳ ಅರಿವು ಮೂಡಿಸಬೇಕೆಂದು ಹಳ್ಳಿಯೊಂದಕ್ಕೆ ಕರೆದುಕೊಂಡು ಹೋಗುತ್ತಾರೆ. ಹಳ್ಳಿಯಲ್ಲಿ ಹೊಲದ ಬದುವಿನ ಮೇಲೆ ನಡೆದುಕೊಂಡು ಹೋಗುತ್ತಿರುವಾಗ ಶಿಷ್ಯರಿಗೆ ಒಂದೆಡೆ ಹರಿದು ಹೋದ ಒಂದು ಜೊತೆ ಚಪ್ಪಲಿ ಮತ್ತು ಊಟದ ಡಬ್ಬಿಯಿರುವ ಚೀಲ ಕಾಣಿಸುತ್ತದೆ. ಅವರು ಗುರುಗಳ ಹತ್ತಿರ, 'ಸರ್, ಇವು ಇಲ್ಲಿ ಕೆಲಸ ಮಾಡುತ್ತಿರುವವರದ್ದು ಅನ್ನಿಸುತ್ತದೆ. ಒಂದು ಕೆಲಸ ಮಾಡುತ್ತೇವೆ, ನಾವು ಇವೆರಡನ್ನೂ ಅಡಗಿಸಿಡುತ್ತೇವೆ. ಮರದ ಮರೆಯಲ್ಲಿ ಕುಳಿತು ಅವರು ಹೇಗೆ ಪ್ರತಿಕ್ರಿಯಿಸುತ್ತಾರೆಂದು ನೋಡೋಣ' ಎಂದರು ಹುಡುಗಾಟಿಕೆಯಿಂದ.

ಶಿಕ್ಷಕ ಏನನ್ನೂ ಹೇಳಲಿಲ್ಲ. ಈ ರೀತಿಯ ಕಿತಾಪತಿ ಏಕೆಂದು ಶಿಷ್ಯರನ್ನು ಬಯ್ಯಲೂ ಇಲ್ಲ. ಅದರ ಬದಲು ಮಾಮೂಲಿ ಧ್ವನಿಯಲ್ಲಿ, 'ಅಲ್ಲ, ನೀವು ಹೇಳಿದ್ದನ್ನು ಸ್ವಲ್ಪ ಬದಲಾಯಿಸೋಣ. ಅವನ್ನು ಅಡಗಿಸಿಡುವ ಬದಲು ಆ ಚೀಲದಲ್ಲಿ ನೂರು ರೂಪಾಯಿಯ ಎರಡು ನೋಟು ಹಾಕಿಡೋಣ. ಮತ್ತು ಮರೆಯಲ್ಲಿ ಕುಳಿತು ನೋಡೋಣ' ಎಂದರು.

ಊಟದ ಸಮಯವಾಯಿತು. ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಬಂದವನು ಚೀಲದಲ್ಲಿದ್ದ ಹಣವನ್ನು ನೋಡಿ ಒಂದು ಕ್ಷಣ ಗಾಬರಿಯಾದ. ಸುತ್ತಮುತ್ತಲೂ ನೋಡಿದ. ಯಾರೂ ಇಲ್ಲ. ಆತ ಕಣ್ಣಲ್ಲಿ ನೀರು ತುಂಬಿಕೊಂಡು ಆಕಾಶದತ್ತ ಮುಖ ಮಾಡಿ ಜೋರಾಗಿ ಹೇಳಿದ, 'ದೇವರೇ, ನೀನು ನನ್ನ ಮೊರೆ ಕೇಳಿದೆ. ಹೆಂಡತಿಯ ಮಾತ್ರೆಗೂ ಇವತ್ತು ನನ್ನ ಹತ್ತಿರ ದುಡ್ಡಿರಲಿಲ್ಲ, ಧನ್ಯವಾದಗಳು ನಿನಗೆ'.

ಗುರುಗಳು ಮುಗುಳ್ನಗುತ್ತ ಶಿಷ್ಯರ ಕಡೆ ನೋಡಿದರು. ಶಿಷ್ಯರೆಲ್ಲ ಮೌನವಾಗಿದ್ದರು. ಅವರ ಕಣ್ಣಂಚಿನಲ್ಲಿ ನೀರಿತ್ತು. ಗುರುಗಳ ಹತ್ತಿರ 'ಸರ್, ಇನ್ನೊಬ್ಬರಿಗೆ ತೊಂದರೆ ಕೊಡುವುದಕ್ಕಿಂತ ಸಹಾಯ ಮಾಡುವುದರಲ್ಲಿ ಹೆಚ್ಚಿನ ಸಂತೋಷವಿದೆ ಎಂಬುದನ್ನು ಎಷ್ಟು ಸರಳವಾಗಿ ಹೇಳಿಕೊಟ್ಟಿರಿ' ಅಂದರು.

ಇನ್ನೊಬ್ಬರ ಪಾಲಿಗೆ ದೇವರಾಗುವ ಅವಕಾಶ ಪ್ರತಿಯೊಬ್ಬರಿಗೂ ಸಿಗುತ್ತದೆ. ಅದಕ್ಕಾಗಿ ಬಹಳ ದೊಡ್ಡ ದೊಡ್ಡ ಕೆಲಸಗಳನ್ನೇನೂ ಮಾಡಬೇಕೆಂದಿಲ್ಲ. ಸಣ್ಣ ಸಣ್ಣ ಸಹಾಯಗಳನ್ನು ನಮ್ಮ ನಮ್ಮ ವ್ಯಾಪ್ತಿಯಲ್ಲೇ ಮಾಡುವುದರ ಮೂಲಕ ಇತರರ ಮುಖದಲ್ಲಿ ಮುಗುಳ್ನಗೆ ಮೂಡಿಸಬಹುದು.


ಈ ಮೇಲಿನ ಕಥೆಯ ಶಿಕ್ಷಕರಂತಹ ವ್ಯಕ್ತಿಗಳು ಇಂದು ಸಮಾಜಕ್ಕೆ ಬೇಕಾಗಿದ್ದಾರೆ. ಯಾರಾದರೂ ಹೀಗೆ ಹುಡುಗಾಟದಲ್ಲಿ ತರಲೆ ಮಾಡಹೊರಟಾಗ ಅವರನ್ನು ಬಯ್ಯದೇ, 'ನೀನು ಮಾಡಬೇಕೆಂದಿರುವುದನ್ನೇ ಇನ್ನೂ ಉತ್ತಮವಾಗಿ, ವಿಭಿನ್ನವಾಗಿ ಹೇಗೆ ಮಾಡಬಹುದು ನೋಡು' ಎಂದು ತಿದ್ದಿ ಹೇಳಿಕೊಡುವವರು ಬೇಕಾಗಿದ್ದಾರೆ. ನಾವು ನಿಮ್ಮ ವಯಸ್ಸಿನಲ್ಲಿರುವಾಗ ಹಾಗೆ ಮಾಡುತ್ತಿದ್ದೆವು. ಹೀಗೆ ಮಾಡುತ್ತಿದ್ದೆವು ಎಂಬ ಹಳೆಯ ಕಥೆಯನ್ನೇ ಮತ್ತೆ ಮತ್ತೆ ಹೇಳುತ್ತ, ಹೊಸ ಪೀಳಿಗೆಯನ್ನು ದೂಷಿಸುವ ಬದಲು ಅವರ ಮನಃಸ್ಥಿತಿಯನ್ನು ಅರ್ಥ ಮಾಡಿಕೊಂಡು ಬದುಕಿನ ದೈನಂದಿನ ಸಂಗತಿಗಳನ್ನು, ಜೀವನ ಮೌಲ್ಯಗಳನ್ನು ಅವರಿಗೆ ಸರಳವಾಗಿ ಹೇಳಿಕೊಡುವ ಮಾರ್ಗದರ್ಶಕರು ಬೇಕಾಗಿದ್ದಾರೆ. ಮತ್ತು ಆ ಜವಾಬ್ದಾರಿಯನ್ನು ನಾವೆಲ್ಲ ನಿರ್ವಹಿಸಬೇಕಾಗಿದೆ.

ಗುಂಡಣ್ಣ



ಪದಬಂಧ 6104

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಹೋಲಿಕೆಗೆ ಮೀರಿದುದು (4)
3.ಮುತ್ತಿಕ್ಕುವಂತೆ ಮಧುರವಾಗಿಹ ತುಟಿ (3)
4.ದೊಡ್ಡ ನಗಾರಿ ಇಲ್ಲಿದೆ (4)
6.ಬೆಳಗಿನ ಜಾವದಲ್ಲೇ ತೆಗೆದುಹಾಕುವಿಕೆ! (2)
8.ಸಂಪಾದಕನು ತಿರುವಿದ ಪುಟ! (2)
9.ಉತ್ತರದವರ ವೇತನ (3)
10.ತಾಪದ ಹೊತ್ತಿನಲ್ಲಿ ತೋರಿದ ಶೌರ್ಯ (3)
11.ಹಡಗಿನ ಚುಕ್ಕಾಣಿಯಿದು (2)
13.ಪಾಂಡವರ ತಾಯಿ ತಿರುಗಿದ್ದಾಳೆ (2)
15.ತಪ್ಪನ್ನು ಮನ್ನಿಸುವಿಕೆ (4)
17.ಬಾಗಿ ತೆರೆದಿರುವ ಕದ (3)
18.ಒಂದು ಸಂಖ್ಯೆಯನ್ನು ಮತ್ತೊಂದರಿಂದ ಗುಣಿಸುವುದು (4)

ಮೇಲಿಂದ ಕೆಳಕ್ಕೆ
1.ಅರವಟ್ಟಿಗೆಯಲ್ಲಿರುವ ತಮಿಳುಭಾಷೆ (3)
2.ಮಧುರ ಫಲ ನೀಡುವ ವೃಕ್ಷ (2)
3.ಸ್ವಲ್ಪ ಮಾತ್ರ ತಿಳಿದಿರುವವ (3)
5.ನಷ್ಟ ಈ ರೀತಿ ಬಂದಿದೆ (3)
7.ಆ ಜಾಗದಲ್ಲಿ ನಿಂತಾಗ ಕಾಣಿಸಿದ್ದು ನವಿಲಿನ ಕುಣಿತ (3)
8.ಕೆಟ್ಟ ಕೆಲಸವಿದು (2)
9.ಸುಪರ್ಣ ಹಿಡಿದಿರುವ ಎಲೆ (2)
10.ನಿಸರ್ಗ ಇಲ್ಲಿ ಕಾಣುತ್ತಿದೆ (3)
11.ಕಕ್ಷದಲ್ಲಿ ದೊರೆತಿರುವ ಅನುಗ್ರಹ (3)
12.ತೊಲಗುವಾಗ ಚರ್ಮ ಕಾಣಿಸಿದೆಯಲ್ಲಾ! (3)
14.ಮಣ್ಣಿನಿಂದ ಪಾತ್ರೆಗಳನ್ನು ಮಾಡುವವ (3)
16.ನಡುಗುವವನ ನೋಡಿಯೇ ಈ ಮಂದಹಾಸ! (2)

6103ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಪ್ರಲಾಪ 3.ಹಲುಬೆ
5.ಗಣಪ 7.ಗಲಾಟೆ
8.ವಿಮಾನಯಾನ 11.ಗುಲಾಬಿ
12.ಕಲಭ 15.ಹರಿಣಿ
16.ವಿಚ್ಛೇದನ

ಮೇಲಿಂದ ಕೆಳಕ್ಕೆ:
1.ವಿಯೋಗ 2.ಪಕ್ಷ
3.ಹರಟೆ 4.ಬೆಸುಗೆ
6.ಪಲ್ಲವಿ 7.ಗಗನಚುಂಬಿ
9.ನಡುಕ 10.ಉತ್ಸಾಹ
11.ಗುರಾಣಿ 13.ಭವನ
14.ಭವಿ

ಸುಡೊಕು 6488

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				8			6	7
	7		1		6			3
3		5		2		9		
	8	7					1	
		4	7	6	3	8		
5	9						7	4
		2		7		1		5
1	4		2		5		9	
	5			4		2		8

6487 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

15 ಜುಲೈ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಪಂಚಮಿ ಗಂ. 22-40 **ನಕ್ಷತ್ರ:** ಶತಭಿಷ ಗಂ. 06-27 **ಯೋಗ:** ಸೌಭಾಗ್ಯ ಗಂ. 14-12 **ಕರಣ:** ಕೌಲವ ಗಂ. 11-22, ಮಿಥುನ ಮಾಸದ 31 ನೇ ದಿನ. **ಮಳೆ ನಕ್ಷತ್ರ :** ಪುನರ್ವಸು 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00– 04-30 , **ಸೂರ್ಯೋದಯ :** 06-15 **ಸೂರ್ಯಾಸ್ತ :** 06-58 **ಮುಸ್ಲಿಂ ದಿನಾಂಕ :** 19 ಮೊಹರಮ್ , **ಅದೃಷ್ಟ ಸಂಖ್ಯೆ :** 3, 7

ಮೇಷ: ಪರಂಪರೆಯಲ್ಲಿ ಬಂದಿರುವ ಆಸ್ತಿಯನ್ನು ಮಾರಾಟ ಮಾಡುವ ಯೋಚನೆಗಳಿದ್ದಲ್ಲಿ ಅದನ್ನು ಕೈ ಬಿಡುವುದು ಸೂಕ್ತ. ದುರದೃಷ್ಟವಶಾತ್ ಆರಂಭವಾಗಿದ್ದ ಹೊಸ ಕೆಲಸವು ನಿಲ್ಲುವಂಥ ಸೂಚನೆಗಳು ಕಾಣಬಹುದು.

ವೃಷಭ: ವೃದ್ಧರು ಹಾಗೂ ಅಶಕ್ತರನ್ನು ಗೌರವದಿಂದ ಕಾಣುವ ಸ್ವಭಾವವು ಇತರರನ್ನು ಆಕರ್ಷಿಸುತ್ತದೆ. ಮಾಡುವ ಕೆಲಸವು ಉತ್ತಮವಾಗಿ, ಸರಾಗವಾಗಿ, ಲಾಭದಾಯಕವಾಗಿ ಮುಗಿಯುತ್ತದೆ.

ಮಿಥುನ: ಹೊಸ ವ್ಯಕ್ತಿಯೊಂದಿಗೆ ವ್ಯವಹಾರ ಮಾತುಕತೆ ನಡೆಸುವುದು ಸರಿಯಲ್ಲ. ಸಹೋದ್ಯೋಗಿಗಳಿಗೆ ಕಿರಿಕಿರಿ ಉಂಟಾಗಬಹುದು. ಮಕ್ಕಳ ಅಭಿವೃದ್ಧಿ ವಿಚಾರವಾಗಿ ಶುಭಸುದ್ದಿಯನ್ನು ಕೇಳುವಿರಿ.

ಕರ್ಕಾಟಕ: ಉತ್ತಮ ಪ್ರಯತ್ನದಿಂದಾಗಿ ಬಯಸಿದ ಕಡೆ ಕೆಲಸ ಸಿಗುವ ಸಾಧ್ಯತೆ ಇದೆ. ಹೊಸ ವೃತ್ತಿ ಪರಿಸರಕ್ಕೆ ಹೊಂದಿಕೊಳ್ಳಲು ಕಷ್ಟಪಡುತ್ತಿರುವವರಿಗೆ ಮಾರ್ಗದರ್ಶನ ನೀಡಿ ಸಮಾಧಾನವಾಗುತ್ತದೆ.

ಸಿಂಹ: ನ್ಯಾಯಾಲಯಕ್ಕೆ ಸಂಬಂಧಿಸಿದ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಲು ಉತ್ತಮ ವ್ಯಕ್ತಿಯನ್ನು ಆರಿಸಿಕೊಳ್ಳಲು ಗಡಿಬಿಡಿ ಬೇಡ, ಸರಿಯಾಗಿ ವಿಚಾರಿಸಿ ತೀರ್ಮಾನಿಸಿ. ವಾಸಕ್ಕೆ ಯೋಗ್ಯವಾದ ಭೂ ಖರೀದಿಯ ಯೋಗವಿದೆ.

ಕನ್ಯಾ: ಎಲ್ಲರ ಜೊತೆಯಲ್ಲೂ ಬೆರೆಯುವುದರಿಂದ ಹೆಚ್ಚಿನ ಕಾರ್ಯಗಳಲ್ಲಿ ಅನುಕೂಲ ಇರುವುದು. ಸಂಶೋಧನೆ ನಡೆಸುವವರು ಒಂದು ವಿಚಾರವಾಗಿ ಆಳವಾದ ಜ್ಞಾನವನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸಿ.

ತುಲಾ: ವ್ಯವಹಾರದಲ್ಲಿ ಎಲ್ಲವೂ ಸಕಾರಾತ್ಮಕವಾಗಿ ಇರುವುದರಿಂದ ನೆಮ್ಮದಿಯ ದಿನ. ಸಾಗರ, ಜಲಾಶಯ, ಜಲಪಾತ ಸಮೀಪದ ಪ್ರವಾಸಗಳನ್ನು ನಿಶ್ಚಯಿಸಿದ್ದರೆ ತಾತ್ಕಾಲಿಕವಾಗಿ ಅದನ್ನು ಮುಂದೂಡಿ.

ವೃಶ್ಚಿಕ: ಚರ್ಮ ಸಂಬಂಧಿ ಕಾಯಿಲೆಗಳನ್ನು ಪರಿಹರಿಸಿಕೊಳ್ಳಲು ಹೊಸ ಔಷಧಿಗಳ ಪ್ರಯೋಗ ಬೇಡ. ಸಾಂಸಾರಿಕ ವಿಷಯದಲ್ಲಿ ಗುರು-ಹಿರಿಯರ ಮಾತು ಮೀರದಿರುವುದು ಲೇಸು. ವಿಪುಲ ಅವಕಾಶಗಳು ದೊರೆಯಲಿವೆ.


ಧನು: ಕೆಲಸದ ಫಲಿತಾಂಶವು ಸರಿಯಾಗಿದ್ದರೂ ವಿಧಾನವನ್ನು ಬದಲಿ-ಕೊಳ್ಳಬೇಕೆಂಬ ಅನಿವಾರ್ಯತೆ ಕಾಡುವುದು. ಗುಣಮಟ್ಟದ ಹಣ್ಣು ಮಾರಾಟಗಾರರಿಗೆ ಉತ್ತಮ ವ್ಯಾಪಾರ ಹಾಗೂ ಲಾಭ ಇರುವುದು.

ಮಕರ: ಸಣ್ಣ ಕೈಗಾರಿಕೆಯನ್ನು ನಡೆಸುತ್ತಿರುವವರು ನೂತನ ಘಟಕಗಳನ್ನು ಆರಂಭಿಸುವ ಬಗ್ಗೆ ಯೋಚಿಸಬಹುದು. ಪ್ರವೃತ್ತಿಯ ಕಾರ್ಯಗಳಿಂದ ವೃತ್ತಿಯ ಕಾರ್ಯದ ವೇಗ, ಗುಣಮಟ್ಟ ಕಡಿಮೆಯಾಗುವ ಸಾಧ್ಯತೆಯಿದೆ.

ಕುಂಭ: ಹೊಸದೊಂದು ಆದಾಯದ ದಾರಿ ಸಿಗಲಿದೆ. ಧೈರ್ಯಂ ಸರ್ವತ್ರ ಸಾಧನಂ ಎನ್ನುವ ವಾಕ್ಯದಂತೆ ಹೆದರದೆ ಒಪ್ಪಿಕೊಳ್ಳಿ. ಕೆಲಸವನ್ನು ಶ್ರದ್ಧೆಯಿಂದ, ಸಮಯಕ್ಕೆ ಸರಿಯಾಗಿ ಮಾಡಿದರೆ ಜಯವಾಗುವುದು.

ಮೀನ: ಕಾರ್ಯ ನಿಮಿತ್ತವಾಗಿ ಕುಟುಂಬದಲ್ಲಿ ಭಿನ್ನಾಭಿಪ್ರಾಯ ತೋರಿ ಬಂದರೂ ತಾಳ್ಮೆ, ಸಮಾಧಾನ ಇರಲಿ. ಮಕ್ಕಳ ವರ್ತನೆಯು ಆತಂಕವನ್ನು ತರಲಿದೆ. ಹಣಕಾಸಿನ ವಿಚಾರದಲ್ಲಿ ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದು.

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ:	25,149
ಇಂದಿನ ಅಂತ್ಯ:	25,082
ದಿನದ ಕನಿಷ್ಠ:	25,001
	67

ಮೊಟ್ಟೆ ಧಾರಣೆ (ಎನ್ಇಸಿಸಿ)

ಬೆಂಗಳೂರು	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹590

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹356-533
ದ್ವಿತಳಿ (ಬಿ.ವಿ)	₹422-666

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹203.50
ಆರ್ಎಸ್ಎಸ್-5	₹197.50
ಗುಡ್ ಲಾಟ್	₹183

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹28300-28300
ತಿಪಟೂರು	₹24000-28500
ದಾವಣಗೆರೆ	₹19800-19800

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1440 (1430)
ಸೋಯಾ (ರಿಫೈನ್ಡ್)	₹1210(1205)
ಸೂರ್ಯಕಾಂತಿ (ರಿಫೈನ್ಡ್)	₹1350(1355)
ಪಾಮೋಲಿನ್	₹1190(1190)

ಅಡಿಕೆ ಧಾರಣೆ

ಸಾಗರ	
ಬಿಳಿಗೋಟು	8569-24899
ಚಾಲಿ	21999-36336
ಕೋಕ	7129-23699
ಕೆಂಪುಗೋಟು	16599-28009
ರಾಶಿ	24299-57099
ಸಿಪ್ಪೆಗೋಟು	9102-19599
ಶಿವಮೊಗ್ಗ	
ಬೆಟ್ಟೆ	53399-59809
ಗೊರಬಲು	16519-30019
ರಾಶಿ	47199-57501
ಸರಕು	81540-86710
ಯಲ್ಲಾಪುರ	
ಬಿಳಿಗೋಟು	16899-30215
ಚಾಲಿ	31899-42169
ಕೋಕ	7699-17710
ಕೆಂಪುಗೋಟು	20969-22999
ರಾಶಿ	42115-56111
ತಟ್ಟಿಬೆಟ್ಟೆ	29106-38189
ಶಿರಸಿ	
ಬೆಟ್ಟೆ	33699-45899
ಬಿಳಿಗೋಟು	20399-33399
ಚಾಲಿ	36699-42612
ರಾಶಿ	45509-46299
ಸಿದ್ದಾಪುರ	
ಬಿಳಿಗೋಟು	24000-30900
ಚಾಲಿ	33899-40399
ಕೋಕ	16399-22699
ಕೆಂಪುಗೋಟು	16900-21900
ರಾಶಿ	42809-46899
ತಟ್ಟಿಬೆಟ್ಟೆ	30199-30199


ಹಣದುಬ್ಬರ 6 ವರ್ಷಗಳ ಕನಿಷ್ಠ

ಆಹಾರ ವಸ್ತುಗಳ ಬೆಲೆ ಇಳಿಕೆ, ರೆಪೊ ದರ ಇನ್ನಷ್ಟು ಕಡಿಮೆ ಆಗುವ ಸಾಧ್ಯತೆ

ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರ ಪ್ರಮಾಣವು ಜೂನ್‌ನಲ್ಲಿ ಆರು ವರ್ಷಗಳ ಕನಿಷ್ಠ ಮಟ್ಟವಾದ ಶೇಕಡ 2.1ಕ್ಕೆ ಇಳಿಕೆ ಕಂಡಿದೆ. ತರಕಾರಿ ಸೇರಿದಂತೆ ಆಹಾರ ವಸ್ತುಗಳ ಬೆಲೆಯಲ್ಲಿನ ಇಳಿಕೆಯು ಹಣದುಬ್ಬರ ಇಳಿಕೆಗೆ ಕಾರಣವಾಗಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರ ಪ್ರಮಾಣವು ಮೇ ತಿಂಗಳಲ್ಲಿ ಶೇ 2.82ರಷ್ಟು ಇತ್ತು. ಇದು ಕಳೆದ ವರ್ಷದ ಜೂನ್‌ನಲ್ಲಿ ಶೇ 5.08ರಷ್ಟು ಇತ್ತು. 2024ರ ನವೆಂಬರ್ ನಂತರದಲ್ಲಿ ಹಣದುಬ್ಬರ ಪ್ರಮಾಣವು ತಗ್ಗುತ್ತಿದೆ.

2019ರ ಜನವರಿಯಲ್ಲಿ ಶೇ 1.97ರಷ್ಟು ಹಣದುಬ್ಬರ ದಾಖಲಾಗಿತ್ತು. ಅದರ ನಂತರದ ಕನಿಷ್ಠ ಮಟ್ಟ ಜೂನ್‌ನಲ್ಲಿ ದಾಖಲಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್ಎಸ್ಒ) ತಿಳಿಸಿದೆ.



ತರಕಾರಿ, ದ್ವಿದಳ ಧಾನ್ಯಗಳು ಮತ್ತು ಅವುಗಳ ಉತ್ಪನ್ನಗಳು, ಮಾಂಸ ಮತ್ತು ಮೀನು, ಏಕದಳ ಧಾನ್ಯಗಳು ಹಾಗೂ ಅವುಗಳ ಉತ್ಪನ್ನಗಳು, ಸಕ್ಕರೆ, ಹಾಲು ಮತ್ತು ಉತ್ಪನ್ನಗಳು, ಸಂಬಾರ ಪದಾರ್ಥಗಳ ಬೆಲೆ ಏರಿಕೆಯ ಪ್ರಮಾಣವು ತಗ್ಗಿರುವುದು ಒಟ್ಟಾರೆ ಹಣದುಬ್ಬರ ಪ್ರಮಾಣ ಕಡಿಮೆ ಆಗಿರುವುದಕ್ಕೆ ಕಾರಣ ಎಂದು ಎನ್ಎಸ್ಒ ಹೇಳಿದೆ.

ಸಗಟು ಹಣದುಬ್ಬರ ಇಳಿಕೆ

ಸಗಟು ಹಣದುಬ್ಬರ ಕೂಡ ಜೂನ್‌ನಲ್ಲಿ ಇಳಿಕೆ ಕಂಡಿದೆ. ಇದು 19 ತಿಂಗಳ ನಂತರದಲ್ಲಿ ಋಣಾತ್ಮಕ ಮಟ್ಟ ಕಂಡಿದ್ದು, (–)0.13ಕ್ಕೆ ತಲುಪಿದೆ. ಆಹಾರ ವಸ್ತುಗಳು, ಇಂಧನ ಬೆಲೆಯಲ್ಲಿ ಇಳಿಕೆ ಆಗಿದ್ದು ಹಾಗೂ ತಯಾರಿಸಿದ ಉತ್ಪನ್ನಗಳ ಬೆಲೆಯು ಇಳಿಕೆಯಾಗಿದ್ದುದು ಇದಕ್ಕೆ ಒಂದು ಕಾರಣ.

ಕಳೆದ ವರ್ಷದ ಜೂನ್‌ನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 3.43ರಷ್ಟು ಇತ್ತು. 'ಆಹಾರ ವಸ್ತುಗಳು, ಖನಿಜ ತೈಲ, ಮೂಲ ಲೋಹಗಳ ತಯಾರಿಕೆ, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಇತ್ಯಾದಿಗಳ ಬೆಲೆಯಲ್ಲಿ ಇಳಿಕೆ ಕಂಡ ಕಾರಣದಿಂದಾಗಿ ಜೂನ್‌ನಲ್ಲಿ ಸಗಟು ಹಣದುಬ್ಬರವು ಋಣಾತ್ಮಕ ಮಟ್ಟದಲ್ಲಿದೆ' ಎಂದು ಕೈಗಾರಿಕಾ ಸಚಿವಾಲಯವು ಹೇಳಿದೆ.

ಹಣದುಬ್ಬರ ಇಳಿಕೆಯ ಬಗ್ಗೆ ಪ್ರತಿಕ್ರಿಯೆ ನೀಡಿರುವ ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್, 'ಆರ್‌ಬಿಐ ರೆಪೊ ದರವನ್ನು ಆಗಸ್ಟ್‌ನಲ್ಲಿ ಶೇ 0.25ರಷ್ಟು ಕಡಿಮೆ ಮಾಡುವ ಸಾಧ್ಯತೆಯನ್ನು ನಾವು ಅಲ್ಲಗಳೆಯುತ್ತಿಲ್ಲ' ಎಂದು ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 4ರಲ್ಲಿ ಇರಿಸುವ ಹೊಣೆಯು ಆರ್‌ಬಿಐ ಮೇಲಿದೆ. ಹಣದುಬ್ಬರ ನಿಯಂತ್ರಣಕ್ಕೆ ಬಂದಿರುವ ಕಾರಣಕ್ಕೆ ಆರ್‌ಬಿಐ, ರೆಪೊ ದರವನ್ನು ಫೆಬ್ರುವರಿ ನಂತರದಲ್ಲಿ ಶೇ 1ರಷ್ಟು ಕಡಿಮೆ ಮಾಡಿದೆ.

'ಅಮೆರಿಕದ ಮಾರುಕಟ್ಟೆಯಲ್ಲಿ ಭಾರತಕ್ಕೆ ಹೆಚ್ಚು ಅವಕಾಶ'

ನವದೆಹಲಿ (ಪಿಟಿಐ): ಚೀನಾ, ಕೆನಡಾ, ಮೆಕ್ಸಿಕೊ ಸೇರಿದಂತೆ ಬೇರೆ ಬೇರೆ ದೇಶಗಳ ಮೇಲೆ ಡೊನಾಲ್ಡ್ ಟ್ರಂಪ್ ನೇತೃತ್ವದ ಸರ್ಕಾರವು ಹೆಚ್ಚಿನ ಸುಂಕ ವಿಧಿಸಿದ ನಂತರದಲ್ಲಿ, ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಉತ್ಪನ್ನಗಳು ಹೆಚ್ಚು ಸ್ಪರ್ಧಾತ್ಮಕ ಆಗಲಿವೆ ಎಂದು ನೀತಿ ಆಯೋಗವು ಸೋಮವಾರ ಹೇಳಿದೆ.

ಅಮೆರಿಕದ ಮಾರುಕಟ್ಟೆಯಲ್ಲಿ ಭಾರತಕ್ಕೆ ಗಮನಾರ್ಹವಾದ ಅವಕಾಶಗಳು ಲಭ್ಯವಾಗಲಿವೆ ಎಂದು ನೀತಿ ಆಯೋಗದ ತ್ರೈಮಾಸಿಕ ವರದಿಯೊಂದು ಹೇಳಿದೆ. 'ಕೆಲವು ಉತ್ಪನ್ನಗಳನ್ನು ಅಮೆರಿಕ್ಕೆ ರಫ್ತು ಮಾಡುವಲ್ಲಿ ಚೀನಾ, ಕೆನಡಾ ಮತ್ತು ಮೆಕ್ಸಿಕೊ ಮುಂಚೂಣಿ ಸ್ಥಾನ ಹೊಂದಿವೆ. ಈ ದೇಶಗಳ ಮೇಲೆ ಹೆಚ್ಚಿನ ಸುಂಕ ವಿಧಿಸಿದ್ದರಿಂದಾಗಿ ಭಾರತವು ಹೆಚ್ಚು ಸ್ಪರ್ಧಾತ್ಮಕವಾಗಲಿದೆ' ಎಂದು ವರದಿಯು ವಿವರಿಸಿದೆ.

ಖನಿಜಗಳು, ಇಂಧನ, ವಸ್ತ್ರ, ಎಲೆಕ್ಟ್ರಾನಿಕ್ಸ್, ಪ್ಲಾಸ್ಟಿಕ್, ಪೀಠೋಪಕರಣ, ಮೀನು ಮತ್ತು ಸಿಗಡಿಯಂತಹ ಸಮುದ್ರ ಆಹಾರೋತ್ಪನ್ನಗಳ ವಿಭಾಗದಲ್ಲಿ ಭಾರತವು ಹೆಚ್ಚಿನ ಪ್ರಯೋಜನ ಪಡೆಯಲಿದೆ ಎಂದು ಅದು ಹೇಳಿದೆ.



ನೇಪಾಳದ ಮಾರುಕಟ್ಟೆಗೆ 'ಕ್ಯಾಂಪಾ'

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್‌ನ ಎಫ್ಎಂಸಿಜಿ ಅಂಗಸಂಸ್ಥೆ ರಿಲಯನ್ಸ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್ ಕಂಪನಿಯು ಕ್ಯಾಂಪಾ ಕೋಲಾ ಉತ್ಪನ್ನವನ್ನು ನೇಪಾಳದ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಕ್ಯಾಂಪಾ ಉತ್ಪನ್ನಗಳನ್ನು ನೇಪಾಳದ ಮಾರುಕಟ್ಟೆಯಲ್ಲಿ ಬಿಡುಗಡೆ ಮಾಡಲು ರಿಲಯನ್ಸ್ ಕಂಪನಿಯು ಅಲ್ಲಿನ ಚೌಧರಿ ಸಮೂಹದ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ ಎಂದು ಪ್ರಕಟಣೆ ತಿಳಿಸಿದೆ. ಕ್ಯಾಂಪಾ ಬ್ರ್ಯಾಂಡ್ ಅನ್ನು ರಿಲಯನ್ಸ್ ಕಂಪನಿಯು 2022ರಲ್ಲಿ ಸ್ವಾಧೀನಕ್ಕೆ ತೆಗೆದುಕೊಂಡಿತ್ತು. ನಂತರ, 2023ರಲ್ಲಿ ಈ ಬ್ರ್ಯಾಂಡ್ ಅಡಿಯಲ್ಲಿ ಅದು ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿತು. ಯುಎಇ, ಒಮಾನ್ ಮತ್ತು ಬಹರೇನ್ ದೇಶಗಳಲ್ಲಿಯೂ ಕ್ಯಾಂಪಾ ಉತ್ಪನ್ನಗಳು ಸಿಗುತ್ತಿವೆ.

'ಭಾರತ–ಚೀನಾ ಸಂಬಂಧ ವೃದ್ಧಿಯಿಂದ ಅನುಕೂಲ'

ಚೀನಾ ಉಪಾಧ್ಯಕ್ಷರ ಜತೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮಾತುಕತೆ

ಬೀಜಿಂಗ್ (ಪಿಟಿಐ): ಭಾರತ–ಚೀನಾ ನಡುವಿನ ಬಾಂಧವ್ಯ, ಸಂಬಂಧ ವೃದ್ಧಿಗೊಳ್ಳುವುದರಿಂದ ಉಭಯ ರಾಷ್ಟ್ರಗಳಿಗೆ ಅನುಕೂಲಕರವಾದ ಫಲಿತಾಂಶ ದೊರೆಯಲಿದೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಸೋಮವಾರ ಹೇಳಿದ್ದಾರೆ.

ಸಿಂಗಾಪುರ ಪ್ರವಾಸ ಮುಕ್ತಾಯಗೊಳಿಸಿ, ಚೀನಾದ ತಿಯಾನ್‌ಜಿನ್ ನಗರದಲ್ಲಿ ಜುಲೈ 15ರಂದು ನಡೆಯುವ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಜೈಶಂಕರ್ ಚೀನಾಕ್ಕೆ ಭೇಟಿ ನೀಡಿದ್ದಾರೆ. ಈ ವೇಳೆ ಚೀನಾದ ಉಪಾಧ್ಯಕ್ಷ ಹನ್ ಜುಂಗ್ ಅವರೊಂದಿಗೂ ಮಾತುಕತೆ ನಡೆಸಿದ್ದಾರೆ.

ಈ ಕುರಿತು ಮಾತನಾಡಿರುವ ಜೈಶಂಕರ್, 'ಕಳೆದ ಅಕ್ಟೋಬರ್‌ನಲ್ಲಿ ಪ್ರಧಾನಿ ಮೋದಿ ಹಾಗೂ ಅಧ್ಯಕ್ಷ ಷಿ ಜಿನ್‌ಪಿಂಗ್ ನಡುವಿನ ಮಾತುಕತೆಯ ಬಳಿಕ ಉಭಯ ರಾಷ್ಟ್ರಗಳ ಸಂಬಂಧ ವೃದ್ಧಿಯಾಗುತ್ತಿದೆ. ಈಗ ನಾನು ತೆಗೆದುಕೊಳ್ಳಲಿರುವ ನಿರ್ಧಾರಗಳು ಕೂಡ ಈ ಬಾಂಧವ್ಯವನ್ನು ಬಲಗೊಳಿಸುತ್ತವೆ ಎಂಬ ವಿಶ್ವಾಸವಿದೆ' ಎಂದಿದ್ದಾರೆ.



ಚೀನಾದ ಉಪಾಧ್ಯಕ್ಷ ಹನ್ ಜುಂಗ್ ಅವರೊಂದಿಗೆ ಎಸ್. ಜೈಶಂಕರ್

'ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಪುನರಾರಂಭಗೊಳಿಸಿರುವ ವಿಚಾರವು ಭಾರತದಲ್ಲಿ ಅತಿಹೆಚ್ಚು ಮನ್ನಣೆ ಗಳಿಸಿದೆ. ಭಾರತ–ಚೀನಾ ನಡುವಿನ ಸಂಬಂಧವನ್ನು ಸುಧಾರಿಸುವ ನಿಟ್ಟಿನಲ್ಲಿ ಕೈಗೊಳ್ಳುವ ಕ್ರಮಗಳಿಂದ ಎರಡೂ ರಾಷ್ಟ್ರಕ್ಕೂ ಅನುಕೂಲವಾಗಲಿದೆ. ಈ ವಿಚಾರವನ್ನು ಹನ್ ಅವರಿಗೂ ತಿಳಿಸಿದ್ದೇನೆ' ಎಂದಿದ್ದಾರೆ.

'ವಿವಾದ, ಸಂಘರ್ಷ ಸಲ್ಲದು'

ಎರಡು ರಾಷ್ಟ್ರಗಳ ನಡುವಿನ ಸಂಬಂಧವು ಸುಸ್ಥಿರ ಅಭಿವೃದ್ಧಿಯತ್ತ ಅವುಗಳನ್ನು ಕೊಂಡೊಯ್ಯಬೇಕೇ ವಿನಃ ಉಭಯ ರಾಷ್ಟ್ರಗಳ ನಡುವಿನ ಭಿನ್ನಾಭಿಪ್ರಾಯಗಳು ವಿವಾದಗಳಾಗಿ, ಸ್ಪರ್ಧಾತ್ಮಕ ನಿಲುವುಗಳು ಸಂಘರ್ಷವಾಗಿ ಬದಲಾಗಬಾರದು ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ. ಅಲ್ಲದೇ, ನಿರ್ಬಂಧಿತ ವ್ಯಾಪಾರ ನೀತಿಗಳಿಂದ ಅಂತರ ಕಾಯ್ದುಕೊಳ್ಳಬೇಕು ಎಂದೂ ಕರೆ ನೀಡಿದ್ದಾರೆ.

ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರೊಂದಿಗೆ ಮಾತುಕತೆ ನಡೆಸುವ ವೇಳೆ ಜೈಶಂಕರ್ ಈ ಸಲಹೆ ನೀಡಿದ್ದಾರೆ. ಅಮೆರಿಕದ ನೀತಿಗಳಿಗೆ ಸಡ್ಡು ಹೊಡೆಯುವ ನಿಟ್ಟಿನಲ್ಲಿ ಚೀನಾ ಸರ್ಕಾರವು ಕೆಲವು ನಿಗದಿತ ಖನಿಜ ಸಂಪನ್ಮೂಲಗಳ ಪೂರೈಕೆಯನ್ನು ಸ್ಥಗಿತಗೊಳಿಸಿದ್ದಕ್ಕೆ ಸಂಬಂಧಿಸಿದಂತೆ ಈ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ.

ಇದೇ ವೇಳೆ ಭಾರತ–ಚೀನಾ ನಡುವಿನ ಸಂಬಂಧವನ್ನು ಸುಧಾರಿಸುವ ಕ್ರಮಗಳಲ್ಲಿ ಪ್ರಗತಿ ಕಂಡುಬಂದಿದೆ. ಈಗ ಉಭಯ ರಾಷ್ಟ್ರಗಳು ವಾಸ್ತವ ಗಡಿ ನಿಯಂತ್ರಣ ರೇಖೆ (ಎಲ್‌ಎಸಿ) ಪರಿಸ್ಥಿತಿಯನ್ನು ತಿಳಿಯಾಗಿಸುವತ್ತ ಗಮನ ನೀಡಬೇಕು ಎಂದೂ ಹೇಳಿದ್ದಾರೆ.

ಸುದ್ದಿ 2 ನಿಮಿಷ


ಕರ್ಣಾಟಕ ಬ್ಯಾಂಕ್ ಸಿಇಒ ಆಗಿ ರಾಘವೇಂದ್ರ ಭಟ್ ನೇಮಕ

ಮಂಗಳೂರು: ಕರ್ಣಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿ (ಎಂ.ಡಿ ಮತ್ತು ಸಿಇಒ) ರಾಘವೇಂದ್ರ ಎಸ್. ಭಟ್ ನೇಮಕಗೊಂಡಿದ್ದಾರೆ.

ಜುಲೈ 16ರಿಂದ ಮುಂದಿನ ಮೂರು ತಿಂಗಳ ಅವಧಿಗೆ ಅವರನ್ನು ನೇಮಿಸಲಾಗಿದೆ. ಬ್ಯಾಂಕ್‌ನ ಮುಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅಥವಾ ಸೆಬಿ ನಿಯಮ 2015ರ ಪ್ರಕಾರ ಅಧಿಕಾರ ವಹಿಸಿಕೊಂಡ ಮೂರು ತಿಂಗಳ ಒಳಗೆ ಈ ನೇಮಕಕ್ಕೆ ಷೇರುದಾರರ ಅನುಮೋದನೆ ಪಡೆಯಬೇಕಾಗುತ್ತದೆ.

ರಾಘವೇಂದ್ರ ಭಟ್ ಅವರು ಕರ್ಣಾಟಕ ಬ್ಯಾಂಕ್‌ನಲ್ಲಿ ಚೀಫ್ ಆಪರೇಟಿಂಗ್ ಆಫೀಸರ್ ಸೇರಿದಂತೆ ಪ್ರಮುಖ ಹುದ್ದೆಗಳಲ್ಲಿ ನಾಲ್ಕು ದಶಕ ಸೇವೆ ಸಲ್ಲಿಸಿದ್ದಾರೆ ಎಂದು ಬ್ಯಾಂಕ್ ಪ್ರಕಟಣೆ ತಿಳಿಸಿದೆ.

'ರಾಘವೇಂದ್ರ ಭಟ್ ಅವರ ಅನುಭವ ಮತ್ತು ಪರಿಣತಿಯು ಬ್ಯಾಂಕ್‌ನ ನಿರಂತರ ಬೆಳವಣಿಗೆಗೆ ಸಹಕಾರಿಯಾಗಲಿದೆ' ಎಂದು ಅಧ್ಯಕ್ಷ ಪಿ. ಪ್ರದೀಪ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.



'ನಂಬಿಕೆ ಮತ್ತು ಸದ್ಭಾವನೆ ಬ್ಯಾಂಕ್‌ನ ತಳಹದಿಯಾಗಿದ್ದು, ಶತಮಾನ ಪೂರೈಸಿರುವ ಬ್ಯಾಂಕ್‌ನ ಅಡಿಪಾಯ ಇನ್ನಷ್ಟು ಗಟ್ಟಿಗೊಳಿಸಲು ಶ್ರಮಿಸುತ್ತೇನೆ' ಎಂದು ರಾಘವೇಂದ್ರ ಭಟ್ ಹೇಳಿದ್ದಾರೆ.

ಕರ್ಣಾಟಕ ಬ್ಯಾಂಕ್ ಎಂ.ಡಿ ಮತ್ತು ಸಿಇಒ ಆಗಿದ್ದ ಶ್ರೀಕೃಷ್ಣನ್ ಹರಿಹರ ಶರ್ಮ ರಾಜೀನಾಮೆಯಿಂದ ಈ ಸ್ಥಾನ ತೆರವಾಗಿತ್ತು.

ಯುರೋಪ್, ಬ್ರಿಟನ್ ಮಾರುಕಟ್ಟೆಗೆ 'ಹೀರೊ' ಪ್ರವೇಶ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ತ್ರೈಮಾಸಿಕದಲ್ಲಿ (ಜುಲೈ–ಸೆಪ್ಟೆಂಬರ್ ಅವಧಿ) ಜರ್ಮನಿ, ಫ್ರಾನ್ಸ್, ಸ್ಪೇನ್ ಮತ್ತು ಬ್ರಿಟನ್ ಮಾರುಕಟ್ಟೆ ಪ್ರವೇಶಿಸುವ ಯೋಜನೆ ಇದೆ ಎಂದು ಹೀರೊ ಮೋಟೊಕಾರ್ಪ್ ಅಧ್ಯಕ್ಷ ಪವನ್ ಮುಂಜಾಲ್ ಹೇಳಿದ್ದಾರೆ.

ಕಂಪನಿಯ ವಾರ್ಷಿಕ ವರದಿಯಲ್ಲಿ ಅವರು ಷೇರುದಾರರನ್ನು ಉದ್ದೇಶಿಸಿ ಈ ವಿಷಯ ತಿಳಿಸಿದ್ದಾರೆ. ವಿದ್ಯುತ್ ಚಾಲಿತ ವಾಹನಗಳ ವಿಭಾಗದಲ್ಲಿ ಕಂಪನಿಯ ನಾಯಕತ್ವದ ಸ್ಥಾನವನ್ನು ಇನ್ನಷ್ಟು ಮುಂದಕ್ಕೆ ಒಯ್ಯಲಾಗಿದೆ ಎಂದು ಅವರು ತಿಳಿಸಿದ್ದಾರೆ.

'ನಾವು 2024–25ರಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದಕ್ಷಿಣ ಏಷ್ಯಾದಿಂದ ಲ್ಯಾಟಿನ್ ಅಮೆರಿಕದವರೆಗೆ ಶೇ 43ರಷ್ಟು ಬೆಳವಣಿಗೆ ಸಾಧಿಸಿದ್ದೇವೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಗುಂಡಿನ ದಾಳಿ: ಮಹಿಳೆಯರ ಸಾವು

ಲೆಕ್ಸಿಂಗ್ಟನ್ (ಎಪಿ): ಅಪಹರಿಸಿದ್ದ ಕಾರನ್ನು ಪೊಲೀಸ್ ಸಿಬ್ಬಂದಿಯೊಬ್ಬರು ಇಲ್ಲಿನ ಕೆಂಟಕಿ ಚರ್ಚ್ ಬಳಿ ತಡೆದಾಗ ಶಂಕಿತ ವ್ಯಕ್ತಿ ಗುಂಡು ಹಾರಿಸಿದ್ದರಿಂದ ಇಬ್ಬರು ಮಹಿಳೆಯರು ಸಾವಿಗೀಡಾಗಿದ್ದಾರೆ. ಆನಂತರ ಪೊಲೀಸರು ನಡೆಸಿದ ಪ್ರತಿದಾಳಿಯಲ್ಲಿ ಶಂಕಿತ ಕೂಡ ಬಲಿಯಾಗಿದ್ದಾನೆ. ಪೊಲೀಸ್ ಸಿಬ್ಬಂದಿಗೆ ಗಾಯಗಳಾಗಿವೆ.

ಅಮೆರಿಕದ ಲೆಕ್ಸಿಂಗ್ಟನ್ ವಿಮಾನ ನಿಲ್ದಾಣ ಸಮೀಪದ ರಿಚ್‌ಮಂಡ್ ರಸ್ತೆಯಲ್ಲಿ ಕರ್ತವ್ಯದಲ್ಲಿದ್ದ ಪೊಲೀಸ್ ಸಿಬ್ಬಂದಿ ಖಚಿತ ಮಾಹಿತಿ ಆಧರಿಸಿ ಕಾರನ್ನು ತಡೆದಿದ್ದರು. ಈ ವೇಳೆ ಶಂಕಿತನು ಮನಬಂದಂತೆ ಗುಂಡು ಹಾರಿಸಿದ್ದಾನೆ.



ಬಹಿರಂಗ ಚರ್ಚೆಗೆ ಬನ್ನಿ: ಬಿಜೆಪಿಗೆ ಪಂಥಾಹ್ವಾನ

ಒಂದನೇ ಪುಟದಿಂದ...

'ರಾಜ್ಯ ಸರ್ಕಾರದ ಬಳಿ ಹಣ ಇಲ್ಲ. ಅಭಿವೃದ್ಧಿ ಸ್ಥಗಿತಗೊಂಡಿದೆ ಎಂದು ಬಿಜೆಪಿ-ಜೆಡಿಎಸ್‌ನವರು ಅಪಪ್ರಚಾರ ಮಾಡುತ್ತಾರೆ. ಅವರಿಗೆ ಕಲ್ಯಾಣ ಕಾರ್ಯಕ್ರಮಗಳ ಮೂಲಕವೇ ಉತ್ತರಿಸುತ್ತೇವೆ' ಎಂದರು.

'ಶಕ್ತಿ ಯೋಜನೆಯಡಿ 500 ಕೋಟಿ ಬಾರಿ ಮಹಿಳೆಯರು ಉಚಿತವಾಗಿ ಬಸ್‌ಗಳಲ್ಲಿ ಪ್ರಯಾಣಿಸಿರುವುದು, 1.23 ಕೋಟಿ ಕುಟುಂಬಗಳು ಗೃಹಲಕ್ಷ್ಮಿ ಹಣ ಪಡೆದಿರುವುದು, 1.64 ಕೋಟಿ ಮನೆಗಳಿಗೆ ಉಚಿತವಾಗಿ 200 ಯೂನಿಟ್ ವಿದ್ಯುತ್ ಸಿಗುತ್ತಿರುವುದು, ಅನ್ನಭಾಗ್ಯ ಮತ್ತು ಯುವನಿಧಿ ಯೋಜನೆಗಳ ಮೂಲಕ ಕೋಟಿ ಕೋಟಿ ಕನ್ನಡಿಗರ ಬದುಕಿಗೆ ನೆರವಾಗಿರುವುದು ಅಭಿವೃದ್ಧಿ ಅಲ್ಲವೇ' ಎಂದೂ ಪ್ರಶ್ನಿಸಿದರು.

'ಇಂಡಿಯಲ್ಲಿ ಹಿಂದೆ ಬರಗಾಲ ಬಂದಾಗ ಜನ ನಿಂಬೆ ಗಿಡ ಕಿತ್ತು ಹಾಕುತ್ತಿದ್ದರು. ಆಗ ನಾನು ಇಲ್ಲಿಗೆ ಬಂದು ಭರವಸೆ ನೀಡಿದಂತೆ ಲಿಂಬೆ ಅಭಿವೃದ್ಧಿ ಮಂಡಳಿ ಸ್ಥಾಪಿಸಿದ್ದೇನೆ. ಈಗ ಮಂಡಳಿಯ ಲಾಂಛನ ಬಿಡುಗಡೆ ಮಾಡಿ ನುಡಿದಂತೆ ನಡೆಯುವ ಕಾಂಗ್ರೆಸ್‌ನ ಪರಂಪರೆ ಮುಂದುವರಿಸಿದ್ದೇನೆ' ಎಂದು ತಿಳಿಸಿದರು.

'ಗ್ಯಾರಂಟಿ ಯೋಜನೆ ದೇಶಕ್ಕೆ ಮಾದರಿ'

ಒಂದನೇ ಪುಟದಿಂದ...

'ಜನರ ಆದಾಯ ಪಾತಾಳಕ್ಕೆ ಕುಸಿದು, ಬೆಲೆ ಏರುತ್ತಿರುವ ವೇಳೆ ಬಡವರ ರಕ್ಷಣೆಗೆ ಗ್ಯಾರಂಟಿ ಯೋಜನೆ ಜಾರಿಗೊಳಿಸಿದ್ದೇವೆ. ಈ ಯೋಜನೆಗಳಿಂದ ಪ್ರತಿ ಕುಟುಂಬಕ್ಕೆ ಮಾಸಿಕ ಸರಾಸರಿ ₹5 ಸಾವಿರ ಉಳಿಯಲಿದೆ. ಇಂತಹ ಜನಪರ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಸರ್ಕಾರದ ಹೊರತಾಗಿ ಬೇರೆ ಯಾರೂ ನೀಡಲು ಸಾಧ್ಯವಿಲ್ಲ' ಎಂದರು.

'ಕಾಂಗ್ರೆಸ್ 70 ವರ್ಷ ಈ ದೇಶವನ್ನು ಆಳಿದೆ. ನಮ್ಮ ಪಕ್ಷ ನೀಡಿದ ಯೋಜನೆಗಳನ್ನು ಯಾರೂ ಬದಲಿಸಲು ಆಗದು. ಯಾರಿಂದಲೂ ನಿಲ್ಲಿಸಲು ಆಗಲಿಲ್ಲ. ಅಂತೆಯೇ, ನಮ್ಮ ಗ್ಯಾರಂಟಿ ಯೋಜನೆಗಳನ್ನು ಬದಲಿಸಲು ಸಾಧ್ಯವಿಲ್ಲ' ಎಂದರು.

ಸಿರಿಯಾದಲ್ಲಿ ಸಂಘರ್ಷ: 30ಕ್ಕೂ ಹೆಚ್ಚು ಸಾವು

ಡಮಾಸ್ಕಸ್ (ಎಪಿ): ಸಿರಿಯಾದಲ್ಲಿ ಅಲ್ಪಸಂಖ್ಯಾತ ದುರೂಸ್ ಪಂಗಡದ ಪಡೆ ಮತ್ತು ಸುನ್ನಿ ಬದಾವಿ ಬುಡಕಟ್ಟು ಪಂಗಡದ ಮಧ್ಯೆ ಸಂಘರ್ಷ ಆರಂಭಗೊಂಡಿದ್ದು, 30ಕ್ಕೂ ಹೆಚ್ಚು ಮಂದಿ ಮೃತಪಟ್ಟು ಸುಮಾರು 100 ಮಂದಿ ಗಾಯಗೊಂಡಿದ್ದಾರೆ ಎಂದು ಸರ್ಕಾರ ಹೇಳಿದೆ. ದುರೂಸ್ ಪಡೆಗಳಿಗೆ ಬೆಂಬಲ ಸೂಚಿಸಿ ಇಸ್ರೇಲ್ ಸಂಘರ್ಷದ ಅಂಗಳಕ್ಕೆ ಇಳಿದಿದೆ.

'ಸಿರಿಯಾದ ಸೇನಾ ಟ್ಯಾಂಕ್‌ಗಳನ್ನು ತಡೆದಿದ್ದೇವೆ' ಎಂದು ಇಸ್ರೇಲ್ ಹೇಳಿದೆ. ಸಿರಿಯಾದ ದಕ್ಷಿಣ ಭಾಗದಲ್ಲಿರುವ ಸ್ವೀದಾ ಪ್ರಾಂತ್ಯದಲ್ಲಿ ಭಾನುವಾರ ಆರಂಭಗೊಂಡ ಸಂಘರ್ಷವು ಸೋಮವಾರವೂ ಮುಂದುವರಿದಿದೆ. ಈವರೆಗೆ ಸುಮಾರು 89 ಮಂದಿ ಮೃತಪಟ್ಟಿದ್ದಾರೆ ಎಂದು ಅಮೆರಿಕದ ಮಾನವ ಹಕ್ಕುಗಳ ಸಂಘಟನೆಯೊಂದು ಹೇಳಿದೆ.

ಮುಂಬೈ ಧಾರಣೆ (ಶೇಂಗಾ)

14-07-2025

ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1450 (1440)
ಒಂದು ವಾರದ ಡೆಲಿವರಿ	1445 (1435)
ಪಾಮ್ ವಾರದ ಡೆಲಿವರಿ	1188 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1265)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,700(97,500)
ಬೆಳ್ಳಿ ಕೆ.ಜಿಗೆ	1,13,000 (1,12,450)

ಆವರಣದಲ್ಲಿ ಶನಿವಾರದ ಧಾರಣೆ

500 ಕೋಟಿ ಪ್ರಯಾಣ ಕಂಡ 'ಶಕ್ತಿ'

ಒಂದನೇ ಪುಟದಿಂದ...

'ನಾವು ಕೊಟ್ಟ ಮಾತನ್ನು ಉಳಿಸಿಕೊಂಡಿರುವ ಕಾರಣಕ್ಕೆ ನಮಗೆ ಹೆಚ್ಚು ಸಂತೋಷವಾಗಿದೆ. ಇವೆಲ್ಲವನ್ನೂ ಜಾರಿ ಮಾಡಲು ಜನ ನೀಡಿರುವ ಶಕ್ತಿಯಿಂದ ನಮಗೆ ಬಲ ಬಂದಿದೆ' ಎಂದು ಹೇಳಿದರು.

'ಶಕ್ತಿ ಯೋಜನೆಯಡಿ 500 ಕೋಟಿ ಬಾರಿ ಮಹಿಳೆಯರು ಪ್ರಯಾಣಿಸುವ ಮೂಲಕ ಹೊಸ ಮೈಲುಗಲ್ಲು ಸ್ಥಾಪನೆಯಾಗಿದೆ. ಎಲ್ಲ ಮಹಿಳೆಯರು ಸಂಭ್ರಮ ಪಟ್ಟಿದ್ದಾರೆ. ಆದರೆ ಬಿಜೆಪಿ ಐಟಿ ಸೆಲ್ ಮಾತ್ರ ಆರಂಭದಿಂದಲೂ ನಕಾರಾತ್ಮಕ ಪ್ರಚಾರ ಮಾಡಿಕೊಂಡು ಬಂದಿದೆ. ಅದನ್ನು ಈಗಲೂ ಮುಂದುವರಿಸಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬೇಸರ ವ್ಯಕ್ತಪಡಿಸಿದರು.

ಯಾರು ಏನೆಂದರು?



ಶಕ್ತಿ ಯೋಜನೆ ಆರಂಭವಾದಾಗಿನಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ನಾವು ಖುಷಿ ಖುಷಿಯಾಗಿ ಕೆಲಸ ಮಾಡುತ್ತಿದ್ದೇವೆ. ಇವತ್ತು 500ನೇ ಕೋಟಿ ಟಿಕೆಟ್ ಅನ್ನು ನಮ್ಮ ಬಸ್‌ನಲ್ಲಿ ನೀಡಿರುವುದು ಬಹಳ ಖುಷಿಯಾಗಿದೆ.

ಭಾಗ್ಯ ಎಚ್., ಬಿಎಂಟಿಸಿ ಬಸ್ ನಿರ್ವಾಹಕಿ



ಹಿಂದೆ ಬಸ್‌ಗಳಲ್ಲಿ ಜನ ಇಷ್ಟೊಂದು ಪ್ರಮಾಣದಲ್ಲಿ ಓಡಾಡುತ್ತಿರಲಿಲ್ಲ. ಶಕ್ತಿ ಯೋಜನೆ ಜಾರಿಯಾದ ಮೇಲೆ ಮಹಿಳೆಯರಿಗೆ ಅನುಕೂಲವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಸುತ್ತಿದ್ದಾರೆ.

ರಾಧಾಮಣಿ ಎನ್.ವಿ., ಬಿಎಂಟಿಸಿ ಬಸ್ ನಿರ್ವಾಹಕಿ



ಲಿಂಗತ್ವ ಅಲ್ಪಸಂಖ್ಯಾತರಾಗಿರುವ ನಮಗೆ ಯಾವುದೇ ಸೌಲಭ್ಯಗಳು ಸಿಗುತ್ತಿರಲಿಲ್ಲ. ಈ ಸರ್ಕಾರ ಬಂದ ಮೇಲೆ ಗೃಹಜ್ಯೋತಿ ಭಾಗ್ಯ ಸಿಕ್ಕಿತು. ಬಸ್‌ಗಳಲ್ಲಿ ನಾವು ಉಚಿತವಾಗಿ ಓಡಾಡುವಂತಾಯಿತು.

ಸೋನು, ರಾಮನಗರ



ಬಸ್‌ನಲ್ಲಿ ಉಚಿತವಾಗಿ ಓಡಾಡಲು ಅವಕಾಶ ನೀಡಿದ ಮೇಲೆ ಖರ್ಚು ಕಡಿಮೆಯಾಗಿದೆ. ಮಕ್ಕಳಿಗೆ, ಮನೆಗೆ ಬೇಕಾದ ವಸ್ತುಗಳನ್ನು ಖರೀದಿಸಲು ಇದರಿಂದ ಅನುಕೂಲವಾಗಿದೆ. ಹಿಂದೆಲ್ಲ ಆಟೊ, ಬಸ್ ಹೀಗೆ ಯಾವುದು ಸಿಗುತ್ತದೆಯೋ ಅದರಲ್ಲಿ ಹೋಗುತ್ತಿದ್ದೆವು. ಶಕ್ತಿ ಯೋಜನೆ ಬಂದ ಮೇಲೆ ಬಸ್ಸಲ್ಲೇ ಓಡಾಡುತ್ತಿದ್ದೇವೆ

ಗೀತಾ, ಮಡಿವಾಳ

ರಷ್ಯಾ ಮೇಲೆ ಅಧಿಕ ಸುಂಕ: ಟ್ರಂಪ್ ಎಚ್ಚರಿಕೆ

ವಾಷಿಂಗ್ಟನ್ (ಎಪಿ): ಉಕ್ರೇನ್ ಜತೆಗಿನ ಯುದ್ಧವನ್ನು ಕೊನೆಗೊಳಿಸಲು 50 ದಿನಗಳಲ್ಲಿ ಒಪ್ಪಂದ ಮಾಡಿಕೊಳ್ಳದಿದ್ದರೆ ರಷ್ಯಾ ಸರಕುಗಳ ಮೇಲೆ ಅಧಿಕ ಸುಂಕ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಜತೆ ಓವಲ್ ಕಚೇರಿಯಲ್ಲಿ ಸೋಮವಾರ ನಡೆದ ಮಾತುಕತೆ ಬಳಿಕ ಅವರು ಈ ಘೋಷಣೆ ಮಾಡಿದ್ದಾರೆ.

'ರಷ್ಯಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 100ರಷ್ಟು ಸುಂಕ ಹಾಗೂ ರಷ್ಯಾದಿಂದ ತೈಲ ಖರೀದಿಸುವ ದೇಶಗಳ ಸರಕುಗಳ ಮೇಲೆ ಶೇ 50ರಷ್ಟು ಸುಂಕ ವಿಧಿಸಲು ಟ್ರಂಪ್ ಬಯಸಿದ್ದಾರೆ' ಎಂದು ಶ್ವೇತಭವನ ತಿಳಿಸಿದೆ.

ಉಕ್ರೇನ್‌ಗೆ ಪೇಟ್ರಿಯಟ್ ವಾಯು ರಕ್ಷಣಾ ವ್ಯವಸ್ಥೆ ಮತ್ತು ಇತರ ಕ್ಷಿಪಣಿ ಮಾರಾಟ ಮಾಡುವುದಾಗಿ ಟ್ರಂಪ್ ಹಾಗೂ ರುಟ್ಟೆ ಜಂಟಿಯಾಗಿ ಹೇಳಿಕೆ ನೀಡಿದ್ದಾರೆ.

ರಷ್ಯಾದ ದಾಳಿ ಎದುರಿಸಲು ಉಕ್ರೇನ್‌ಗೆ ಪೇಟ್ರಿಯಟ್ ವಾಯು ರಕ್ಷಣಾ ವ್ಯವಸ್ಥೆಯನ್ನು ಪೂರೈಕೆ ಮಾಡುವುದಾಗಿ ಟ್ರಂಪ್ ಭಾನುವಾರ ಹೇಳಿದ್ದರು. 'ಪುಟಿನ್ ಒಳ್ಳೆಯ ಮಾತುಗಳನ್ನಾಡುತ್ತಾರೆ. ಆ ಬಳಿಕ ಎಲ್ಲರ ಮೇಲೆ ಬಾಂಬ್ ಹಾಕುತ್ತಾರೆ' ಎಂದು ರಷ್ಯಾದ ಅಧ್ಯಕ್ಷರನ್ನು ಟೀಕಿಸಿದ್ದರು.

ಕೀವ್‌ಗೆ ಬಂದ ಕೆಲಾಗ್: ಉಕ್ರೇನ್ ಮತ್ತು ರಷ್ಯಾಕ್ಕೆ ಅಮೆರಿಕ ಅಧ್ಯಕ್ಷರ ವಿಶೇಷ ಪ್ರತಿನಿಧಿ, ನಿವೃತ್ತ ಲೆಫ್ಟಿನೆಂಟ್ ಜನರಲ್ ಕೀತ್ ಕೆಲಾಗ್ ಅವರು ಸೋಮವಾರ ಕೀವ್‌ಗೆ ಬಂದಿಳಿದರು.

ಟ್ರಂಪ್ ಬ್ರಿಟನ್ ಭೇಟಿ

ಲಂಡನ್: ಡೊನಾಲ್ಡ್ ಟ್ರಂಪ್ ಅವರು ಸೆಪ್ಟೆಂಬರ್ 17ರಿಂದ 19ರವರೆಗೆ ಬ್ರಿಟನ್‌ಗೆ ಭೇಟಿ ನೀಡಲಿದ್ದಾರೆ. ಟ್ರಂಪ್ ತಮ್ಮ ಮೊದಲ ಅವಧಿಯಲ್ಲಿ 2019ರಲ್ಲೂ ಬ್ರಿಟನ್‌ಗೆ ಭೇಟಿ ಕೊಟ್ಟಿದ್ದರು. ಅಮೆರಿಕದ ಯಾವುದೇ ಅಧ್ಯಕ್ಷರನ್ನು ಬ್ರಿಟನ್ ಎರಡು ಸಲ ಆಹ್ವಾನಿಸಿಲ್ಲ.

ಬ್ರಿಟನ್ ರಾಜ ಮೂರನೇ ಚಾರ್ಲ್ಸ್ ಮತ್ತು ಪತ್ನಿ ರಾಣಿ ಕ್ಯಾಮಿಲಾ ಅವರು ಟ್ರಂಪ್ ಅವರಿಗೆ ಅಧಿಕೃತ ಸ್ವಾಗತ ನೀಡಲಿದ್ದಾರೆ ಎಂದು ಬಕ್ಕಿಂಗ್‌ಹ್ಯಾಂ ಅರಮನೆಯ ಪ್ರಕಟಣೆ ತಿಳಿಸಿದೆ. ಮೂರು ದಿನಗಳ ಭೇಟಿ ವೇಳೆ ಟ್ರಂಪ್ ಜತೆ ಪತ್ನಿ ಮೆಲಾನಿಯಾ ಕೂಡಾ ಇರುವರು ಎಂದು ಹೇಳಿದೆ.

ಅಕ್ಟೋಬರ್‌ನಲ್ಲಿ ತೆರೆಗೆ KD ಚಿತ್ರ



ರೀಷ್ಮಾ, ಧ್ರುವ, ವೆಂಕಟ್ ನಾರಾಯಣ್, ರಮೇಶ್ ಅರವಿಂದ್, ಪ್ರೇಮ್

ಈ ವರ್ಷದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾದ ಪ್ರೇಮ್ ನಿರ್ದೇಶನದ, ಧ್ರುವ ಸರ್ಜಾ ನಟನೆಯ 'KD' ಇದೇ ಅಕ್ಟೋಬರ್‌ನಲ್ಲಿ ತೆರೆಗೆ ಬರಲಿದೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮದಲ್ಲಿ ಚಿತ್ರದ ನಿರ್ಮಾಪಕ ಕೆ.ವೆಂಕಟ್ ನಾರಾಯಣ್ ಈ ಮಾಹಿತಿ ನೀಡಿದ್ದಾರೆ. 'ಏಕ್‌ಲವ್‌ಯಾ' ಸಿನಿಮಾ ನಂತರ ಪ್ರೇಮ್ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, ಈಗಾಗಲೇ ಮುಂಬೈ, ಹೈದರಾಬಾದ್, ಚೆನ್ನೈ ಹಾಗೂ ಕೊಚ್ಚಿಯಲ್ಲಿ 4 ಭಾಷೆಗಳಲ್ಲಿ ಟೀಸರ್ ರಿಲೀಸ್ ಮಾಡಿದೆ ಚಿತ್ರತಂಡ.

'ಪಾತ್ರಗಳನ್ನು ಈ ಟೀಸರ್ ಮೂಲಕ ಪರಿಚಯಿಸಿದ್ದೇವೆ. ಚಿತ್ರದಲ್ಲಿ ಆ್ಯಕ್ಷನ್ ಜೊತೆಗೆ ಕೌಟುಂಬಿಕ ಚಿತ್ರಕ್ಕೆ ಬೇಕಾದ ಅಂಶಗಳೂ ಇವೆ. ಧ್ರುವ, ರವಿಚಂದ್ರನ್, ಶಿಲ್ಪಾ ಶೆಟ್ಟಿ, ರೀಷ್ಮಾ ಈ ರೀತಿಯ ಪಾತ್ರಗಳನ್ನು ಹಿಂದೆ ಮಾಡಿಲ್ಲ. ಈ ಪಾತ್ರಗಳನ್ನು ಕಟ್ಟಲು ಪ್ರೇಮ್ ಮೂರು ವರ್ಷಗಳಿಂದ ಕಷ್ಟಪಟ್ಟಿದ್ದಾರೆ. ಚಿತ್ರದಲ್ಲಿ ಎಲ್ಲರೂ ಮುಖ್ಯ ಹಿಡಿದಿದ್ದಾರೆ. ಅವರು ಮುಖ್ಯ ಹಿಡಿಯುವುದಕ್ಕೆ ಕಾರಣ 'ಸತ್ಯವತಿ'. ಆಕೆಯಿಂದಲೇ ಧ್ರುವ, ರಮೇಶ್ ವೈಲೆಂಟ್ ಆಗಿ ಕಾಣಿಸಿದ್ದಾರೆ.

ಚಿತ್ರದಲ್ಲಿ ಧಾಕ್ ದೇವಾ ಎಂಬ ಭಯಾನಕ ವಿಲನ್ ಪಾತ್ರ ನನ್ನದು. ಈತನಿಗೂ ಒಂದು ಕುಟುಂಬವಿದೆ. ರಮೇಶ್ ಅರವಿಂದ್ ಹಾಗೂ ರವಿಚಂದ್ರನ್ ಜೊತೆಗೆ ಕೆಲಸ ಮಾಡಿರುವುದು ಖುಷಿ ಇದೆ. ಈ ಪಾತ್ರ ಬಹಳ ಅಪಾಯಕಾರಿಯಾಗಿದೆ. ಧ್ರುವ ಸರ್ಜಾ ಬರೀ ಕನ್ನಡದ ನಟ ಅಲ್ಲ, ಆತ 'ಇಂಡಿಯನ್ ಆ್ಯಕ್ಟರ್'.
ಸಂಜಯ್ ದತ್, ನಟ

ಈಗಾಗಲೇ 2 ಹಾಡುಗಳು ಬಿಡುಗಡೆಯಾಗಿದ್ದು, ಇನ್ನುಳಿದ ನಾಲ್ಕು ಹಾಡುಗಳು ಚಿತ್ರದಲ್ಲಿವೆ. ಈ ವರ್ಷದ ಅಕ್ಟೋಬರ್‌ನಲ್ಲಿ 'KD' ಪ್ರೇಕ್ಷಕರ ಮುಂದೆ ಬರಲಿದೆ' ಎಂದರು ವೆಂಕಟ್ ನಾರಾಯಣ್.

'ಇನ್ನೊಂದು ಖ್ಯಾತ ಕಲಾವಿದರ ಜೊತೆ ಕೆಲಸ ಮಾಡುವ ಅವಕಾಶ ನನಗೆ ಈ ಸಿನಿಮಾ ಮೂಲಕ ದೊರಕಿದೆ. ಸಂಜಯ್ ದತ್ ಹಾಗೂ ಶಿಲ್ಪಾ ಶೆಟ್ಟಿ ಅವರಿಂದ ಬಹಳ ಕಲಿತೆ. ಈ ಸಿನಿಮಾದ ನಿಜವಾದ ಹೀರೊ ಪ್ರೇಮ್. ಅವರು ಅತ್ಯುತ್ತಮ ಆತ್ಮ. ಎಷ್ಟು ಕೆಲಸ ಮಾಡಿದರೂ ಅವರಿಗೆ ತೃಪ್ತಿಯಾಗುವುದಿಲ್ಲ' ಎಂದು ನಗೆಚಟಾಕಿ ಹಾರಿಸಿದರು ಧ್ರುವ ಸರ್ಜಾ.

1970–75ರ ಸಮಯದಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಈ ಚಿತ್ರದ್ದು. 'KD' ಅಂದ್ರೆ ಕಾಳಿದಾಸ. ಈತ ಎಷ್ಟು ಮುಗ್ಧನೋ ಅಷ್ಟೇ ಕ್ರೂರಿಯಾಗುತ್ತಾನೆ. 1970ರ ದಶಕದಲ್ಲಿದ್ದ ಬೆಂಗಳೂರನ್ನು ಕಲಾ ನಿರ್ದೇಶಕ ರೋಹನ್ ಬಿ.ಕೆರೆ ಅವರು ಮರುಸೃಷ್ಟಿಸಿದ್ದು, 20 ಎಕರೆ ಪ್ರದೇಶದಲ್ಲಿ ಪುರಭವನ, ಕೆ.ಆರ್.ಮಾರ್ಕೆಟ್, ಮೈಸೂರು ಬ್ಯಾಂಕ್, ಧರ್ಮರಾಯ ದೇವಸ್ಥಾನ, ಶಿವಾಜಿ ಟಾಕೀಸ್ ಸೆಟ್ ಹಾಕಿ ಚಿತ್ರದ ಬಹುತೇಕ ಭಾಗ ಚಿತ್ರೀಕರಣಗೊಂಡಿದೆ. ಸುಮಾರು 180 ದಿನ ಚಿತ್ರೀಕರಣ ನಡೆಸಿರುವ ತಂಡ ಇದೀಗ ಬಿಡುಗಡೆಯ ಸಿದ್ಧತೆ ಆರಂಭಿಸಿದೆ.

ಚಿತ್ರದಲ್ಲಿ ರೀಷ್ಮಾ ನಾಣಯ್ಯ ನಾಯಕಿಯಾಗಿ ನಟಿಸಿದ್ದಾರೆ. ಬಾಲಿವುಡ್‌ನ ಸಂಜಯ್ ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್, ನೋರಾ ಫತೇಹಿ ಅವರು ಸಿನಿಮಾದ ತಾರಾಬಳಗದಲ್ಲಿದ್ದಾರೆ. ವಿಕ್ರಾಂತ್ ರೋಣ ಖ್ಯಾತಿಯ ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

'ಸತ್ಯವತಿ' ಪಾತ್ರಕ್ಕಾಗಿ ಸಿನಿಮಾ ಒಪ್ಪಿಕೊಂಡೆ


ಶಿಲ್ಪಾ ಶೆಟ್ಟಿ

'18 ವರ್ಷಗಳ ಬಳಿಕ 'KD' ಮೂಲಕ ನಾನು ಮತ್ತೆ ಕನ್ನಡ ಸಿನಿಮಾಗೆ ಬರುತ್ತಿದ್ದೇನೆ. ನಾನು ಕರ್ನಾಟಕದ ಹುಡುಗಿ. ನನಗೆ ತುಳು ಭಾಷೆ ಚೆನ್ನಾಗಿಯೇ ಮಾತನಾಡಲು ಬರುತ್ತದೆ. ನಾನು ಈ ಸಿನಿಮಾವನ್ನು ಮೊದಲು ಒಪ್ಪಿಕೊಂಡಿರಲಿಲ್ಲ. ಪ್ರೇಮ್ ಅವರು ಬಂದು ನನಗೆ ಈ ಸಿನಿಮಾದ ಕಥೆ ಹೇಳುವಾಗ ನಾನು ಕಾಲು ಮುರಿದುಕೊಂಡು ವ್ಹೀಲ್‌ಚೇರ್‌ನಲ್ಲಿದ್ದೆ. ಮಕ್ಕಳನ್ನು ಬಿಟ್ಟು ಬೆಂಗಳೂರಿಗೆ ಬರಲು ಸಾಧ್ಯವಿಲ್ಲ ಎಂದಿದ್ದೆ. ಮೊದಲು ನೀವು ಕಥೆ ಹಾಗೂ ನಿಮ್ಮ ಪಾತ್ರವನ್ನು ಕೇಳಿ ಎಂದು ಪ್ರೇಮ್ ಒತ್ತಾಯಿಸಿದರು. ಕಥೆಯು ಮಧ್ಯಂತರಕ್ಕೆ ಬರುವ ಸಂದರ್ಭದಲ್ಲಿ ನಾನು ಕಥೆಯೊಳಗೆ ತಲ್ಲೀನಳಾಗಿ ಹೋಗಿದ್ದೆ. ಆಗ ಕಥೆಯಲ್ಲಿ ಬಂದ ದೃಶ್ಯವೊಂದರಲ್ಲಿ ನಾನು ಪಾತ್ರವನ್ನು ಮಾಡಲು ಒಪ್ಪಿಕೊಂಡೆ. 'ಸತ್ಯವತಿ' ಪಾತ್ರ ಹಾಗಿದೆ. ಧ್ರುವ ಓರ್ವ ಅತ್ಯುತ್ತಮ ನಟ' ಎಂದಿದ್ದಾರೆ ಶಿಲ್ಪಾ ಶೆಟ್ಟಿ.

'ಮಹಾನ್'ನಲ್ಲಿ ರಾಧಿಕಾ ನಾರಾಯಣ್


ರಾಧಿಕಾ

ವಿಜಯ ರಾಘವೇಂದ್ರ ನಾಯಕರಾಗಿ ನಟಿಸುತ್ತಿರುವ, ಪಿ.ಸಿ.ಶೇಖರ್ ನಿರ್ದೇಶನದ 'ಮಹಾನ್' ಚಿತ್ರದಲ್ಲಿ ರಾಧಿಕಾ ನಾರಾಯಣ್ ನಟಿಸುತ್ತಿದ್ದಾರೆ.

ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಬುದ್ದೂರು ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ನಟ ಮಿತ್ರ ಅವರೂ ಮುಖ್ಯಭೂಮಿಕೆಯಲ್ಲಿದ್ದಾರೆ. 'ರಂಗಿತರಂಗ' ಖ್ಯಾತಿಯ ನಟಿ ರಾಧಿಕಾ ನಾರಾಯಣ್ 'ಶಿವಾಜಿ ಸುರತ್ಕಲ್', 'ಎಡಗೈಯೇ ಅಪಘಾತಕ್ಕೆ ಕಾರಣ' ಸಿನಿಮಾದಲ್ಲೂ ನಟಿಸಿದ್ದಾರೆ. "ಮಹಾನ್" ರೈತರ ಕುರಿತಾದ ಚಿತ್ರ. ಪಿ.ಸಿ. ಶೇಖರ್ ಅವರ ನಿರ್ದೇಶನದಲ್ಲಿ ನಟಿಸಬೇಕೆಂಬ ಆಸೆಯಿತ್ತು. ಅದು ಈಗ ಈಡೇರಿದೆ. ಸಾಮಾಜಿಕ ಕಳಕಳಿ ಹೊಂದಿರುವ ಈ ಚಿತ್ರದಲ್ಲಿ ಅಭಿನಯಿಸುತ್ತಿರುವುದಕ್ಕೆ ಖುಷಿಯಿದೆ. ನಾನು ಈ ಚಿತ್ರದಲ್ಲಿ ಹಳ್ಳಿಹುಡುಗಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ" ಎಂದು ಪಾತ್ರದ ಬಗ್ಗೆ ಮಾಹಿತಿ ನೀಡಿದರು ರಾಧಿಕಾ ನಾರಾಯಣ್.

ಭಿನ್ನವಾಗಿದೆ 'ಎಕ್ಕ' ಟ್ರೇಲರ್

'**ಬ್ಯಾಂಗಲ್ ಬಂಗಾರಿ**' ಹಾಡಿನಿಂದಲೇ ಸದ್ದು ಮಾಡುತ್ತಿರುವ ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಸಿನಿಮಾದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಭಿನ್ನವಾದ ಚಿತ್ರ ಕಥೆಯನ್ನು ಟ್ರೇಲರ್‌ನಲ್ಲಿ ಕಟ್ಟಿಕೊಟ್ಟಿದ್ದಾರೆ ನಿರ್ದೇಶಕ ರೋಹಿತ್ ಪದಕಿ.

'ಯುವ' ಸಿನಿಮಾ ಬಳಿಕ ಯುವ ರಾಜ್‌ಕುಮಾರ್ ನಟಿಸುತ್ತಿರುವ ಎರಡನೇ ಸಿನಿಮಾ ಇದಾಗಿದೆ. ಹಳ್ಳಿ ಬಿಟ್ಟು ನಗರಕ್ಕೆ ಬಂದ ಹುಡುಗ ನಡಿಯಿಂದ ಸಮುದ್ರಕ್ಕೆ ಬಿದ್ದ ಕಥೆಯನ್ನು ಟ್ರೇಲರ್‌ನಲ್ಲಿ ಹೇಳಿದ್ದಾರೆ ರೋಹಿತ್. ಒಬ್ಬ ಸಾಮಾನ್ಯ ಹುಡುಗ ಬೆಂಗಳೂರಿಗೆ ಬಂದು ಟ್ರಾಫಿಕ್ ಡ್ರೈವರ್ ಆಗಿ ಭೂಗತಜಗತ್ತಿಗೆ ಹೆಜ್ಜೆ ಇಟ್ಟ ಕಥೆ ಸಿನಿಮಾದಲ್ಲಿದೆ. ಯುವ ತನ್ನ 'ಮುತ್ತು' ಪಾತ್ರದ ಕಥೆಯನ್ನು ತಾವು ದನಿಯಲ್ಲೇ ಟ್ರೇಲರ್‌ನಲ್ಲಿ ವಿವರಿಸಿದ್ದಾರೆ. ಯುವ ಮಾಸ್ ಆಗಿ ಅಬ್ಬರಿಸಿದ್ದು, ಮಗುವಾಗಿ ಮುಗ್ಧನಾಗಿ ಕಾಣಿಸಿಕೊಂಡಿದ್ದಾರೆ. ಸಂಜನಾ ಆನಂದ್ ಹಾಗೂ ಸಂಪದಾ ನಾಯಕಿಯಾಗಿ ಮಿಂಚಿದ್ದಾರೆ.

ಚಿತ್ರದಲ್ಲಿ ಡಿಲ್ಲಿ ಸೋಮು ಖ್ಯಾತಿಯ ನಟ ಅತುಲ್ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದಾರೆ. ಬಾಲಿವುಡ್ ನಟ ಅತುಲ್ ಕುಲಕರ್ಣಿ ಕೂಡಾ ತಾರಾಬಳಗದಲ್ಲಿದ್ದಾರೆ. ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೋಸ್ ಹಾಗೂ ಜಯಣ್ಣ ಕಂಬೈನ್ಸ್ ಬ್ಯಾನರ್‌ಗಳ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ.


ಯುವ ರಾಜ್‌ಕುಮಾರ್

ಸಂಕ್ಷಿಪ್ತ ಸುದ್ದಿ

ಹೈಕೋರ್ಟ್‌ಗೆ ಇಬ್ಬರು ನ್ಯಾಯಮೂರ್ತಿಗಳ ವರ್ಗ




ನವದೆಹಲಿ: ಕರ್ನಾಟಕ ಹೈಕೋರ್ಟ್‌ಗೆ ಇಬ್ಬರು ನ್ಯಾಯಮೂರ್ತಿಗಳನ್ನು ನೇಮಕ ಮಾಡಿ ಕೇಂದ್ರ ಸರ್ಕಾರ ಸೋಮವಾರ ಅಧಿಸೂಚನೆ ಹೊರಡಿಸಿದೆ.

ಕೇರಳ ಹೈಕೋರ್ಟ್‌ನ ದಿನೇಶ್ ಕುಮಾರ್ ಸಿಂಗ್, ಅಲಹಾಬಾದ್ ಹೈಕೋರ್ಟ್‌ನ ಜಯಂತ್ ಬ್ಯಾನರ್ಜಿ ಅವರನ್ನು ಕರ್ನಾಟಕ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿದೆ. ಕರ್ನಾಟಕ ಹೈಕೋರ್ಟ್‌ನಿಂದ ನ್ಯಾಯಮೂರ್ತಿ ವಿ.ಕಾಮೇಶ್ವರರಾವ್ ಅವರನ್ನು ದೆಹಲಿ ಹೈಕೋರ್ಟ್‌ಗೆ ವರ್ಗಾಯಿಸಲಾಗಿದೆ.

ಛತ್ತೀಸಗಢ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಐವರು ನ್ಯಾಯಮೂರ್ತಿಗಳ ಕೊಲಿಜಿಯಂ ವಿವಿಧ ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ವರ್ಗಾವಣೆಗೆ ಮೇ ತಿಂಗಳಲ್ಲಿ ಶಿಫಾರಸು ಮಾಡಿತ್ತು.

ವಿಚ್ಛೇದನ ಸಿಕ್ಕಿದ್ದಕ್ಕೆ ಹಾಲಿನ ಸ್ನಾನ ಮಾಡಿದ ವ್ಯಕ್ತಿ



ನಲ್ಬರಿ (ಅಸ್ಸಾಂ): ಜಿಲ್ಲೆಯ ಬೊರೊಲಿಯಪಾರ ನಿವಾಸಿ ಮಾಣಿಕ್ ಅಲಿ ಅವರು ಪತ್ನಿಯಿಂದ ವಿಚ್ಛೇದನ ಸಿಕ್ಕಿದ್ದಕ್ಕಾಗಿ ಹಾಲಿನ ಸ್ನಾನ ಮಾಡಿ ಸಂಭ್ರಮಿಸಿದ್ದಾರೆ.

ಅಲಿ ಅವರ ಪತ್ನಿಯು ವ್ಯಕ್ತಿಯೊಬ್ಬನ ಜತೆ ಅನೈತಿಕ ಸಂಬಂಧ ಹೊಂದಿದ್ದು, ಎರಡು ಬಾರಿ ಆತನೊಂದಿಗೆ ತೆರಳಿದ್ದರು. ಮಗಳ ಭವಿಷ್ಯದ ದೃಷ್ಟಿಯಿಂದ ಪತ್ನಿಯನ್ನು ಕ್ಷಮಿಸಿ ಮನೆಗೆ ಕರೆತಂದಿದ್ದರು. ಆದರೂ, ಆಕೆ ತನ್ನ ವರ್ತನೆಯನ್ನು ಬದಲಿಸಿಕೊಂಡಿರಲಿಲ್ಲ. ಹೀಗಾಗಿ, ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು.

ಅಧಿಕೃತವಾಗಿ ವಿಚ್ಛೇದನ ಸಿಗುತ್ತಿದ್ದಂತೆ, ನಾಲ್ಕು ಬಕೆಟ್‌ಗಳಲ್ಲಿ 40 ಲೀಟರ್ ಹಾಲು ಸಂಗ್ರಹಿಸಿ ಸ್ನಾನ ಮಾಡಿದ್ದಾರೆ. 'ನಾನು ಇನ್ನು ಸ್ವತಂತ್ರ' ಎಂದು ಅವರು ಸಂಭ್ರಮಪಟ್ಟಿದ್ದಾರೆ. ಈ ವಿಡಿಯೊ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದೆ.

ಗೋವಾಕ್ಕೆ ಗಜಪತಿ ರಾಜು, ಹರಿಯಾಣಕ್ಕೆ ಘೋಷ್ ರಾಜ್ಯಪಾಲ

ನವದೆಹಲಿ: ನಾಗರಿಕ ವಿಮಾನಯಾನ ಖಾತೆಯ ಮಾಜಿ ಸಚಿವ ಪಿ. ಅಶೋಕ್ ಗಜಪತಿ ರಾಜು ಮತ್ತು ಪಶ್ಚಿಮ ಬಂಗಾಳ ಬಿಜೆಪಿ ಘಟಕದ ಮಾಜಿ ಮುಖ್ಯಸ್ಥ ಪ್ರೊ.ಅಶಿಮ್ ಕುಮಾರ್ ಘೋಷ್ ಅವರನ್ನು ಕ್ರಮವಾಗಿ ಗೋವಾ ಮತ್ತು ಹರಿಯಾಣ ರಾಜ್ಯಪಾಲರನ್ನಾಗಿ ಸೋಮವಾರ ನೇಮಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಮಾಜಿ ಉಪ ಮುಖ್ಯಮಂತ್ರಿ ಕವೀಂದರ್ ಗುಪ್ತಾ ಅವರನ್ನು ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಮಾಡಲಾಗಿದೆ.

ಅವರು ಅಧಿಕಾರ ವಹಿಸಿಕೊಳ್ಳುವ ದಿನಾಂಕದಿಂದ ಈ ನೇಮಕಾತಿಗಳು ಜಾರಿಗೆ ಬರಲಿವೆ ಎಂದು ರಾಷ್ಟ್ರಪತಿ ಭವನದ ಪ್ರಕಟಣೆ ತಿಳಿಸಿದೆ.

ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಟಿಡಿಪಿ ನಾಯಕ ರಾಜು ಅವರು ಕೇರಳದ ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ಪಿ.ಎಸ್. ಶ್ರೀಧರನ್ ಪಿಳ್ಳೈ ಅವರ ಉತ್ತರಾಧಿಕಾರಿಯಾಗಲಿದ್ದಾರೆ. ಪಿಳ್ಳೈ 2019ರಿಂದ ಗೋವಾ ರಾಜ್ಯಪಾಲರಾಗಿದ್ದಾರೆ.

ಹರಿಯಾಣದಲ್ಲಿ ಹಿರಿಯ ಆರ್‌ಎಸ್‌ಎಸ್ ನಾಯಕ ಬಂಡಾರು ದತ್ತಾತ್ರೇಯ ಅವರ ಬದಲಿಗೆ ಘೋಷ್ ಅವರನ್ನು ನೇಮಕ ಮಾಡಲಾಗಿದೆ. ಪ್ರಾಧ್ಯಾಪಕರಾಗಿರುವ ಘೋಷ್ 1999 ಮತ್ತು 2001ರ ನಡುವೆ ಪಶ್ಚಿಮ ಬಂಗಾಳ ಬಿಜೆಪಿ ಘಟಕದ ಅಧ್ಯಕ್ಷರಾಗಿದ್ದರು.

ಲಡಾಖ್ ಕೇಂದ್ರಾಡಳಿತ ಪ್ರದೇಶದ ಲೆಫ್ಟಿನೆಂಟ್ ಗವರ್ನರ್ ಆಗಿದ್ದ ಬ್ರಿಗೇಡಿಯರ್ (ನಿವೃತ್ತ) ಬಿ.ಡಿ ಮಿಶ್ರಾ ಅವರ ರಾಜೀನಾಮೆ ಸ್ವೀಕರಿಸಿರುವ ರಾಷ್ಟ್ರಪತಿಯವರು, ಆ ಸ್ಥಾನಕ್ಕೆ ಕವಿಂದರ್ ಗುಪ್ತಾ ಅವರನ್ನು ನೇಮಿಸಿದ್ದಾರೆ.

ಸಾಧ್ಯವಾಗುವುದನ್ನೆಲ್ಲ ಮಾಡುತ್ತಿದ್ದೇವೆ: ಕೇಂದ್ರ

ನರ್ಸ್ ನಿಮಿಷಾ ಪ್ರಿಯಾ ರಕ್ಷಣೆಗೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ: ಕೇಂದ್ರ ಸರ್ಕಾರ ಮಾಹಿತಿ


ನಿಮಿಷಾ



ನವದೆಹಲಿ (ಪಿಟಿಐ): ಯೆಮನ್‌ನಲ್ಲಿ ಸ್ಥಳೀಯ ಪ್ರಜೆಯನ್ನು ಕೊಲೆ ಮಾಡಿದ ಆರೋಪದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿರುವ ಕೇರಳದ ನರ್ಸ್ ನಿಮಿಷಾ ಪ್ರಿಯಾ ಅವರನ್ನು ರಕ್ಷಿಸುವುದಕ್ಕಾಗಿ ಪ್ರಯತ್ನ ಮಾಡಲಾಗುತ್ತಿದೆ. ಆದರೆ, ಯೆಮನ್‌ನಲ್ಲಿ ಪರಿಸ್ಥಿತಿ ಸರಿ ಇಲ್ಲದಿರುವುದರಿಂದ ಅದಕ್ಕಿಂತ ಹೆಚ್ಚು ಏನನ್ನೂ ಮಾಡಲು ಆಗದು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸೋಮವಾರ ತಿಳಿಸಿದೆ.

ಯೆಮನ್ ಆಡಳಿತ ಬುಧವಾರ (ಜುಲೈ 16) ನಿಮಿಷಾ ಪ್ರಿಯಾ ಅವರಿಗೆ ಮರಣ ದಂಡನೆ ಜಾರಿ ಮಾಡಲಿದೆ.

'ಈ ವಿಚಾರದಲ್ಲಿ ಕೇಂದ್ರ ಸರ್ಕಾರವು ಒಂದು ನಿರ್ದಿಷ್ಟ ಹಂತದವರೆಗೆ ಹೋಗಬಹುದು. ನಾವು ಈಗಾಗಲೇ ಆ ಹಂತವನ್ನು ತಲುಪಿದ್ದೇವೆ' ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನೊಳಗೊಂಡ ನ್ಯಾಯಪೀಠಕ್ಕೆ ತಿಳಿಸಿದರು.

ಯೆಮನ್‌ನಲ್ಲಿರುವ ಹುತಿ ಬಂಡುಕೋರ ಸಂಘಟನೆಯ ಬಗ್ಗೆ ಪ್ರಸ್ತಾಪಿಸಿದ ಅಟಾರ್ನಿ ಜನರಲ್, 'ಆ ಸಂಘಟನೆಯನ್ನು ರಾಜತಾಂತ್ರಿಕವಾಗಿಯೂ ಮಾನ್ಯತೆ ನೀಡಿಲ್ಲ' ಎಂದರು.

'ಕೇಂದ್ರ ಸರ್ಕಾರವು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ. ಸದ್ಯದ ಮಟ್ಟಿಗೆ ಗಲ್ಲು ಶಿಕ್ಷೆ ಜಾರಿಯನ್ನು ಅಮಾನತಿನಲ್ಲಿ ಇಡಲು ಸಾಧ್ಯವಾಗುವಂತಹ ದಾರಿಯನ್ನು ಪತ್ತೆ ಮಾಡುವಂತೆ ಆ ಪ್ರದೇಶದ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ಸರ್ಕಾರ ಇತ್ತೀಚೆಗೆ ಪತ್ರವನ್ನೂ ಬರೆದಿತ್ತು. ಯೆಮನ್‌ನಲ್ಲಿ ಹೆಚ್ಚು ಪ್ರಭಾವ ಹೊಂದಿರುವ ಕೆಲವು ಶೇಖ್‌ಗಳ ಜೊತೆಗೆ ಮಾತುಕತೆಯನ್ನೂ ನಡೆಸಿದೆ' ಎಂದೂ ಅವರು ಮಾಹಿತಿ ನೀಡಿದರು.

ಗಲ್ಲು ಶಿಕ್ಷೆಗೆ ಗುರಿಯಾಗಿರುವ 38 ವರ್ಷದ ನಿಮಿಷಾ ಪ್ರಿಯಾ ಅವರನ್ನು ರಕ್ಷಿಸುವುದಕ್ಕೆ ರಾಜತಾಂತ್ರಿಕ ಮಾರ್ಗಗಳನ್ನು ಬಳಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ 'ಸೇವ್ ನಿಮಿಷಾ ಪ್ರಿಯಾ–ಇಂಟರ್‌ನ್ಯಾಷನಲ್ ಆ್ಯಕ್ಷನ್ ಕೌನ್ಸಿಲ್' ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಿಚಾರಣೆ ನಡೆಸಿತು.

ಕೇರಳದ ಪಾಲಕ್ಕಾಡ್ ಜಿಲ್ಲೆಯ ನಿಮಿಷಾ ಪ್ರಿಯಾ ಅವರು 2017ರಲ್ಲಿ ಯೆಮನ್‌ನಲ್ಲಿ ತನ್ನ ಕ್ಲಿನಿಕ್ ಪಾಲುದಾರನಾಗಿದ್ದ ಅಲ್ಲಿನ ಪ್ರಜೆಯನ್ನು ಹತ್ಯೆ ಮಾಡಿದ ಆರೋಪ ಎದುರಿಸುತ್ತಿದ್ದಾರೆ. 2020ರಲ್ಲಿ ಕೆಳ ಹಂತದ ನ್ಯಾಯಾಲಯ ಅವರಿಗೆ ಮರಣ ದಂಡನೆ ವಿಧಿಸಿ ಆದೇಶಿಸಿತ್ತು. ಅವರ ಮೇಲ್ಮನವಿಯನ್ನು ಅಲ್ಲಿನ ಸುಪ್ರೀಂ ಕೋರ್ಟ್ 2023ರಲ್ಲಿ ವಜಾ ಮಾಡಿತ್ತು.

ತನ್ನ ಪ್ರಜೆಗಳನ್ನು ರಕ್ಷಿಸಲು ಸರ್ಕಾರ ಬದ್ಧವಾಗಿದ್ದು, ನಿಮಿಷಾ ಪ್ರಿಯಾ ವಿಚಾರದಲ್ಲಿ ಏನೆಲ್ಲಾ ಮಾಡಬಹುದೋ, ಅದನ್ನೆಲ್ಲ ಮಾಡುತ್ತಿದೆ
ಆರ್.ವೆಂಕಟರಮಣಿ, ಅಟಾರ್ನಿ ಜನರಲ್

'ಶಿಕ್ಷೆ ತಪ್ಪಿಸಲು ಇರುವುದೊಂದೇ ದಾರಿ'

ಅರ್ಜಿದಾರ ಸಂಘಟನೆ ಪರವಾಗಿ ವಾದ ಮಾಡಿದ ವಕೀಲರು, 'ಪ್ರಿಯಾ ಅವರ ತಾಯಿ ಯೆಮನ್‌ನಲ್ಲಿದ್ದು, ಸಾಮಾಜಿಕ ಕಾರ್ಯಕರ್ತರೊಬ್ಬರೊಂದಿಗೆ ಕ್ಷಮಾ ಪರಿಹಾರ ಮೊತ್ತದ (ಬ್ಲಡ್ ಮನಿ) ವಿಚಾರವಾಗಿ ಮೃತಪಟ್ಟ ವ್ಯಕ್ತಿಯ ಕುಟುಂಬದೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ. ಆತನ ಕುಟುಂಬವು ಕ್ಷಮಾ ಪರಿಹಾರ ಮೊತ್ತವನ್ನು ಸ್ವೀಕರಿಸಲು ಒಪ್ಪಿದರೆ ಮಾತ್ರ ಮರಣ ದಂಡನೆಯನ್ನು ತಪ್ಪಿಸಲು ಸಾಧ್ಯ. ಕುಟುಂಬದವರು ಸರ್ಕಾರದಿಂದ ಹಣ ಕೇಳುತ್ತಿಲ್ಲ. ಆ ಮೊತ್ತವನ್ನು ಅವರೇ ಹೊಂದಿಸಿಕೊಳ್ಳಲಿದ್ದಾರೆ' ಎಂದು ಪೀಠಕ್ಕೆ ತಿಳಿಸಿದರು.

'ಪರಿಹಾರ ಮೊತ್ತವಾಗಿ ನೀಡಬೇಕಾದ ಮೊತ್ತವನ್ನು ಕುಟುಂಬವೇ ಹೊಂದಿಸಲಿದೆ ಎಂದು ಅರ್ಜಿದಾರರು ಹೇಳುತ್ತಾರೆ. ಯೆಮನ್ ಆಡಳಿತದೊಂದಿಗೆ ಮಾತುಕತೆ ನಡೆಸುವ ದಾರಿಯದ್ದೇ ಇಲ್ಲಿನ ಪ್ರಶ್ನೆಯಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಇದಕ್ಕೆ ಪ್ರತಿಕ್ರಿಯಿಸಿದ ವೆಂಕಟರಮಣಿ, 'ಯೆಮನ್ ಜಗತ್ತಿನ ಇತರ ದೇಶಗಳಂತಲ್ಲ. ಸರ್ಕಾರವು ರಾಜತಾಂತ್ರಿಕ ಪ್ರಕ್ರಿಯೆ ಮೂಲಕ ಅಥವಾ ಎರಡೂ ಸರ್ಕಾರಗಳ ನಡುವೆ ಮಾತುಕತೆಗೆ ಆಹ್ವಾನಿಸುವುದು ಸುಲಭವಲ್ಲ. ಅದು ತುಂಬಾ ಸಂಕೀರ್ಣ. ಈ ವಿಚಾರವನ್ನು ಸಾರ್ವಜನಿಕಗೊಳಿಸುವ ಮೂಲಕ, ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸುವುದನ್ನು ನಾವು ಬಯಸುವುದಿಲ್ಲ' ಎಂದು ಹೇಳಿದರು.

ಅಮಾನತಿನಲ್ಲಿ ಶಿಕ್ಷೆ ಅನಧಿಕೃತ ಮಾಹಿತಿ

'ಗಲ್ಲು ಶಿಕ್ಷೆ ಜಾರಿಯನ್ನು ಅಮಾನತಿನಲ್ಲಿಡಲಾಗಿದೆ ಎಂಬ ಮಾಹಿತಿ ಅನೌಪಚಾರಿಕ ಮೂಲಗಳಿಂದ ತಿಳಿದು ಬಂದಿದೆ. ಆದರೆ, ಇದು ಎಷ್ಟರ ಮಟ್ಟಿಗೆ ಸತ್ಯ ಎನ್ನುವುದು ನಮಗೆ ಖಾತರಿ ಇಲ್ಲ. ಯೆಮನ್‌ನಲ್ಲಿ ನಿಜಕ್ಕೂ ಏನಾಗುತ್ತಿದೆ ಎನ್ನುವುದು ಸರ್ಕಾರಕ್ಕೆ ತಿಳಿದಿಲ್ಲ' ಎಂದು ಅಟಾರ್ನಿ ಜನರಲ್ ವೆಂಕಟರಮಣಿ ನ್ಯಾಯಪೀಠಕ್ಕೆ ತಿಳಿಸಿದರು.

ಎ.ಪಿ. ಅಬೂಬಕ್ಕರ್ ಮುಸ್ಲಿಯಾರ್ ನೇತೃತ್ವದಲ್ಲಿ ಮಧ್ಯಸ್ಥಿಕೆ

ಕೋಯಿಕ್ಕೋಡ್ (ಪಿಟಿಐ): ನಿಮಿಷಾ ಅವರನ್ನು ರಕ್ಷಿಸುವ ನಿಟ್ಟಿನಲ್ಲಿ ಕೇರಳದ ಪ್ರಭಾವಿ ಸುನ್ನಿ ಮುಸ್ಲಿಂ ಧಾರ್ಮಿಕ ಗುರು ಕಾಂತಪುರಂ ಎ.ಪಿ. ಅಬೂಬಕ್ಕರ್ ಮುಸ್ಲಿಯಾರ್ ಮಧ್ಯಪ್ರವೇಶಿಸಿದ್ದಾರೆ.

ಶೇಖ್ ಅಬೂಬಕ್ಕರ್ ಅವರು ಯೆಮನ್‌ನಲ್ಲಿರುವ ಧಾರ್ಮಿಕ ಮುಖಂಡ ಶೇಖ್ ಹಬೀಬ್ ಉಮರ್ ನೇತೃತ್ವದಲ್ಲಿ ಸಭೆ ನಡೆಸಿದ್ದು, ಇದರಲ್ಲಿ ಮಹ್ದಿ ಕುಟುಂಬದ ಸದಸ್ಯರು ಭಾಗವಹಿಸಿದ್ದಾರೆ. ನಿಮಿಷಾ ಮಾಡಿದ ತಪ್ಪನ್ನು ಕ್ಷಮಿಸುವುದಕ್ಕಾಗಿ ಸಂತ್ರಸ್ತರು ಅಥವಾ ಅವರ ಕುಟುಂಬದವರಿಗೆ ಪ್ರಕರಣದ ಆರೋಪಿಗಳು ಪರಿಹಾರದ ರೂಪದಲ್ಲಿ ನೀಡುವ ಮೊತ್ತ 'ಬ್ಲಡ್ ಮನಿ' ನೀಡುವ ಕುರಿತು ಮಾತುಕತೆಗಳು ನಡೆಯುತ್ತಿವೆ. ಆದರೆ, ಈ ಕುರಿತು ಇದುವರೆಗೂ ಅಧಿಕೃತ ಸಂದೇಶವು ಪ್ರಕಟಗೊಂಡಿಲ್ಲ.

ಅಧ್ಯಕ್ಷರ ಚುನಾವಣೆ ಮತ್ತಷ್ಟು ತಡ

ಪ್ರಜಾವಾಣಿ ವಾರ್ತೆ



ನವದೆಹಲಿ: ಬಿಜೆಪಿಯಲ್ಲಿ ಬಹುನಿರೀಕ್ಷಿತ ರಾಷ್ಟ್ರೀಯ ಅಧ್ಯಕ್ಷರ ಚುನಾವಣಾ ಪ್ರಕ್ರಿಯೆ ಮತ್ತಷ್ಟು ವಿಳಂಬವಾಗಲಿದೆ. ಮುಂಬರುವ ಸಂಸತ್ ಅಧಿವೇಶನಕ್ಕೆ ಮುನ್ನ ಹೊಸ ಅಧ್ಯಕ್ಷರ ಹೆಸರು ಘೋಷಣೆ ಸಾಧ್ಯತೆ ಕಡಿಮೆ.

ಪಕ್ಷವು ಅಧಿಕಾರದಲ್ಲಿರುವ ಒಂಬತ್ತು ಪ್ರಮುಖ ರಾಜ್ಯಗಳಲ್ಲಿ ಹಾಗೂ ಬಲವಾದ ನೆಲೆ ಹೊಂದಿರುವ ಕರ್ನಾಟಕದಲ್ಲಿ ಚುನಾವಣಾ ಪ್ರಕ್ರಿಯೆ ಅಪೂರ್ಣಗೊಂಡಿರುವುದು ಇದಕ್ಕೆ ಕಾರಣ ಎಂದು ಪಕ್ಷದ ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ನಡೆಸಲು 19 ರಾಜ್ಯಗಳಲ್ಲಿ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡಿರಬೇಕು ಎಂದು ಪಕ್ಷದ ಸಂವಿಧಾನದಲ್ಲಿದೆ. ಈವರೆಗೆ 27 ರಾಜ್ಯಗಳಲ್ಲಿ ಅಧ್ಯಕ್ಷರ ನೇಮಕ ಆಗಿದೆ. ತಾಂತ್ರಿಕವಾಗಿ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ನಡೆಸಲು ಸಾಧ್ಯ ಇದೆ. ಆದರೆ, ನಿರ್ಣಾಯಕ ರಾಜ್ಯಗಳಲ್ಲೇ ಬಿಕ್ಕಟ್ಟು ಬಗೆಹರಿಯದ ಕಾರಣ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ನಡೆಸುವುದು ಅನುಮಾನ ಎನ್ನುತ್ತಾರೆ ಪಕ್ಷದ ಹಿರಿಯ ನಾಯಕರೊಬ್ಬರು.

ಜುಲೈ ಮೊದಲ ವಾರದಲ್ಲಿ 14 ರಾಜ್ಯಗಳಲ್ಲಿ ಸಾಂಸ್ಥಿಕ ಚುನಾವಣೆಗಳು ನಡೆದವು. ಒಂದು ವಾರದಲ್ಲಿ ಈ ಪ್ರಕ್ರಿಯೆ ನಡೆಸಲಾಯಿತು. ತ್ರಿಪುರಾದಲ್ಲಿ ಮಾತ್ರ ಸ್ವಲ್ಪ ಸಮಸ್ಯೆ ಎದುರಾಗಿತ್ತು.

'ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯ ಅರಿತುಕೊಳ್ಳಿ'

ಒಂದನೇ ಪುಟದಿಂದ...

ಜಾಲತಾಣಗಳಲ್ಲಿ ಕಂಡು ಬರುವ ಈ ಎಲ್ಲ ರೀತಿಯ ವಿಭಜಕ ಪ್ರವೃತ್ತಿಯನ್ನು ತಡೆಯಲೇಬೇಕಿದೆ. ಆದರೆ ಇದರ ಅರ್ಥ ಸೆನ್ಸಾರ್‌ಶಿಪ್ ಇರಬೇಕು ಎಂದಲ್ಲ ಎಂದು ಪೀಠವು ಸ್ಪಷ್ಟಪಡಿಸಿದೆ.

ಸಂವಿಧಾನದ 19 (2)ನೇ ವಿಧಿಯ ಅಡಿಯಲ್ಲಿ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಕೆಲವು ನಿರ್ಬಂಧಗಳನ್ನು ಹೇರಲಾಗಿದೆ. ಅದು ಸಮಂಜಸವಾಗಿಯೇ ಇದು ಪೀಠವು ಅಭಿಪ್ರಾಯಪಟ್ಟಿತು.

'ವಾಕ್ ಸ್ವಾತಂತ್ರ್ಯದ ದುರುಪಯೋಗ'

ಒಂದನೇ ಪುಟದಿಂದ...

'ನೀವು ಇದನ್ನೆಲ್ಲಾ ಏಕೆ ಮಾಡುತ್ತೀರಿ' ಎಂದು ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅರವಿಂದ ಕುಮಾರ್ ಅವರನ್ನೊಳಗೊಂಡ ಪೀಠವು ವ್ಯಂಗ್ಯಚಿತ್ರಕಾರ ಹೇಮಂತ್ ಮಾಳವೀಯ ಪರ ಹಾಜರಿದ್ದ ವಕೀಲರಾದ ವೃಂದಾ ಗ್ರೋವರ್ ಅವರನ್ನು ಕೇಳಿತು.

'ಈ ಅರ್ಜಿಯು 2021ರಲ್ಲಿ ಕೋವಿಡ್ ಸಮಯದಲ್ಲಿ ಮಾಡಿದ್ದ ವ್ಯಂಗ್ಯಚಿತ್ರಕ್ಕೆ ಸಂಬಂಧಿಸಿದ್ದಾಗಿದೆ. ಅದು (ವ್ಯಂಗ್ಯಚಿತ್ರ) ಕೆಟ್ಟ ಅಭಿರುಚಿ ಹೊಂದಿದೆ ಎಂದು ನಾನು ಹೇಳುತ್ತೇನೆ. ಆದರೆ ಅದು ಅಪರಾಧವೇ? ನಾನು ಇಲ್ಲಿ ಯಾವುದನ್ನೂ ಸಮರ್ಥಿಸಲು ಪ್ರಯತ್ನಿಸುತ್ತಿಲ್ಲ' ಎಂದು ಗ್ರೋವರ್ ಹೇಳಿದರು. ಮಾಳವೀಯ ಮಾಡಿದ್ದ ಪೋಸ್ಟ್ ಅನ್ನು ತೆಗೆದು ಹಾಕಲು ಅವರು ಒಪ್ಪಿಕೊಂಡರು.

'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾವು ಏನೇ ತೀರ್ಪು ನೀಡಿದರೂ, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂಬುದು ಖಚಿತ' ಎಂದು ನ್ಯಾಯಮೂರ್ತಿ ಧುಲಿಯಾ ಹೇಳಿದರು.

ಮಧ್ಯಪ್ರದೇಶ ಸರ್ಕಾರದ ಪರ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್, ಇಂತಹ ಘಟನೆಗಳು ಪದೇ ಪದೇ ನಡೆಯುತ್ತಿವೆ ಎಂಬುದನ್ನು ಪೀಠದ ಗಮನಕ್ಕೆ ತಂದರು. ಪೀಠವು ವಿಚಾರಣೆಯನ್ನು ಮಂಗಳವಾರಕ್ಕೆ ಮುಂದೂಡಿತು.

ನಿರೀಕ್ಷಣಾ ಜಾಮೀನು ನಿರಾಕರಿಸಿ ಮಧ್ಯಪ್ರದೇಶ ಹೈಕೋರ್ಟ್ ಜುಲೈ 3ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಮಾಳವೀಯ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ವಕೀಲ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತ ವಿನಯ್ ಜೋಶಿ ಸಲ್ಲಿಸಿದ ದೂರಿನ ಮೇರೆಗೆ ಮೇ ತಿಂಗಳಲ್ಲಿ ಇಂದೋರ್‌ನ ಲಸೂಡಿಯಾ ಪೊಲೀಸ್ ಠಾಣೆಯಲ್ಲಿ ಮಾಳವೀಯ ವಿರುದ್ಧ ಪ್ರಕರಣ ದಾಖಲಾಗಿದೆ.

ಹುತಾತ್ಮರ ದಿನಾಚರಣೆ: ಜಮ್ಮು–ಕಾಶ್ಮೀರ ಸರ್ಕಾರ– ಎಲ್‌ಜಿ ನಡುವೆ ತಿಕ್ಕಾಟ

ಬ್ಯಾರಿಕೇಡ್ ಹತ್ತಿದ ಒಮರ್ ಅಬ್ದುಲ್ಲಾ

ಪ್ರಜಾವಾಣಿ ವಾರ್ತೆ/ ಪಿಟಿಐ

ಶ್ರೀನಗರ: ಹುತಾತ್ಮರ ದಿನಾಚರಣೆಗೆ ಸಂಬಂಧಿಸಿದಂತೆ ಜಮ್ಮು–ಕಾಶ್ಮೀರದಲ್ಲಿ ಚುನಾಯಿತ ಸರ್ಕಾರ ಹಾಗೂ ಲೆಫ್ಟಿನೆಂಟ್ ಗವರ್ನರ್ (ಎಲ್.ಜಿ) ಆಡಳಿತದ ನಡುವಿನ ತಿಕ್ಕಾಟ ಸೋಮವಾರ ತೀವ್ರಗೊಂಡಿದೆ.

ಭದ್ರತಾ ಪಡೆಗಳ ಬಿಗಿ ಬಂದೋಬಸ್ತ್ ಭೇದಿಸಿದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಪೊಲೀಸರು ಹಾಕಿದ್ದ ಬ್ಯಾರಿಕೇಡ್‌ಯನ್ನು ಹತ್ತಿಳಿದು, ಹುತಾತ್ಮರ ಸ್ಮಾರಕದ ಆವರಣ ಪ್ರವೇಶಿಸಿ ಸಮಾಧಿಗಳ ಬಳಿ ಪ್ರಾರ್ಥಿಸಿದರು.

ಒಮರ್ ಅಬ್ದುಲ್ಲಾ ಅವರು ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳು, ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷದ ಮುಖಂಡರೊಂದಿಗೆ ಹುತಾತ್ಮರ ಸ್ಮಾರಕ ಪ್ರವೇಶಿಸಲು ಮುಂದಾಗುತ್ತಿದ್ದಂತೆ ಭದ್ರತಾ ಸಿಬ್ಬಂದಿ ತಡೆದರು. ಹಳೆಯ ನಗರದ ಖವಾಜಾ ಬಜಾರ್ ಬಳಿ ಈ ನಾಟಕೀಯ ದೃಶ್ಯ ಕಂಡುಬಂದವು.

ಮುಖ್ಯಮಂತ್ರಿಯ ಅಶ್ವದಳವು ಹಳೆಯ ನಗರದ ಖನ್ಯಾರ್ ತಲುಪುತ್ತಿದ್ದಂತೆ ಭಾರಿ ಬಿಗಿಬಂದೋಬಸ್ತ್ ಎದುರಾಯಿತು. ತಕ್ಷಣವೇ ತಮ್ಮ ವಾಹನದಿಂದ ಇಳಿದ ಒಮರ್ ಹುತಾತ್ಮರ ಸ್ಮಾರಕಕ್ಕೆ ತೆರಳಲು ಒಂದು ಕಿ.ಮೀ. ನಡೆದರು. ದಾರಿಯುದ್ದಕ್ಕೂ ಭದ್ರತಾ ಬ್ಯಾರಿಕೇಡ್ ನಿರ್ಮಿಸಲಾಗಿತ್ತು.

ಸ್ಮಾರಕದ ಸನಿಹ ಬರುತ್ತಿದ್ದಂತೆ ಭದ್ರತಾ ಸಿಬ್ಬಂದಿಯು ಮುಖ್ಯಮಂತ್ರಿಯನ್ನು ತಡೆಯಲು ಯತ್ನಿಸಿದರು. ಇದನ್ನು ಲೆಕ್ಕಿಸದೆ ಅಬ್ದುಲ್ಲಾ ಬ್ಯಾರಿಕೇಡ್ ಅನ್ನೇ ಹತ್ತಿಳಿದು ಸ್ಮಶಾನದ ಆವರಣ ಪ್ರವೇಶಿಸಿದರು.

'ಪ್ರಾರ್ಥನೆಗೆ ಅವಕಾಶ ಕೊಡದಿರುವುದು ದುಃಖಕರ. ಗೃಹಬಂಧನದಲ್ಲಿಟ್ಟಿದ್ದು ಲಜ್ಜೆಗೇಡಿತನ. ನಮ್ಮನ್ನು ತಡೆಯಲು ಯತ್ನಿಸಿದರು. ಹಲ್ಲೆ ನಡೆಸಿದರು. ಭಾನುವಾರವೂ ನಿರ್ಬಂಧವಿತ್ತು. ಈಗಲೂ ಏಕೆ ತಡೆದರು' ಎಂದು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಹಾಗೂ ಭದ್ರತಾ ಸಿಬ್ಬಂದಿ ವಿರುದ್ಧ ಮುಖ್ಯಮಂತ್ರಿ ವಾಗ್ದಾಳಿ ನಡೆಸಿದರು.

'ಸ್ವತಂತ್ರ ದೇಶವಿದು. ಆದರೆ ನಮ್ಮನ್ನು ಗುಲಾಮರೆಂದು ಭಾವಿಸಿದ್ದಾರೆ. ನಾವು ಆಡಳಿತಗಾರರಲ್ಲ, ಜನ ಸೇವಕರು. ಭದ್ರತಾ ಸಿಬ್ಬಂದಿಯು ಸಮಸವಸ್ತ್ರದಲ್ಲಿರುವಾಗ ಕಾನೂನನ್ನು ಏಕೆ ನಾಶಪಡಿಸುತ್ತಾರೆ ಎಂಬುದೇ ಅರ್ಥವಾಗುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಜನರಿಂದ ಆಯ್ಕೆಯಾಗದ ಸರ್ಕಾರವು ಹಾದಿಯಲ್ಲೇ ನನ್ನನ್ನು ತಡೆಯಲು ಯತ್ನಿಸಿತು. ಎಲ್ಲ ಅಡೆತಡೆಗಳನ್ನು ದಾಟಿ ನಾನು ಅಲ್ಲಿಗೆ ಹೋಗುವುದನ್ನು ಇಂದು ತಡೆಯಲಾಗಲಿಲ್ಲ' ಎಂದರು.

ನಾನು ಕಾನೂನುಬಾಹಿರವಾಗಿ ಏನನ್ನೂ ಮಾಡುತ್ತಿಲ್ಲ. ಆದರೂ, ಪ್ರಾರ್ಥಿಸುವುದನ್ನು ತಡೆಯಲು ಪೊಲೀಸರು ಯಾವ ಕಾನೂನಿನಡಿ ಯತ್ನಿಸಿದರು ಎಂಬುದನ್ನು ವಿವರಿಸಬೇಕಿದೆ
ಒಮರ್ ಅಬ್ದುಲ್ಲಾ, ಮುಖ್ಯಮಂತ್ರಿ

ಪ್ರಮುಖ ಘಟನಾವಳಿ

- ಎನ್‌ಸಿ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಆಟೊದಲ್ಲಿ ಹಾಗೂ ಸಚಿವರಾದ ಸಕೀನಾ ಇಟ್ಟೂ ಸ್ಕೂಟಿಯಲ್ಲಿ ಸ್ಮಾರಕ ತಲುಪಿದರು
- ಹುತಾತ್ಮರ ಸ್ಮಾರಕಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಭದ್ರತಾ ಪಡೆಗಳು ಮುಚ್ಚಿದ್ದವು
- ಹುತಾತ್ಮರ ಸ್ಮಾರಕಕ್ಕೆ ಭೇಟಿ ನೀಡುವುದಕ್ಕೆ ಸತತ ಎರಡನೇ ವರ್ಷವೂ ನಿಷೇಧ


ಹುತಾತ್ಮರಿಗೆ ಗೌರವ ನಮನ ಸಲ್ಲಿಸಲು ಭದ್ರತಾ ಬ್ಯಾರಿಕೇಡ್ ಹತ್ತಿಳಿದ ಒಮರ್ ಅಬ್ದುಲ್ಲಾ — ಪಿಟಿಐ ಚಿತ್ರ

'ಪೈಲಟ್‌ಗಳದ್ದೇ ತಪ್ಪು ಎನ್ನುವಂತೆ ತನಿಖೆ'

ನವದೆಹಲಿ (ಎಎಫ್‌ಪಿ/ಪಿಟಿಐ): 'ಪೈಲಟ್‌ಗಳದ್ದೇ ತಪ್ಪು ಎನ್ನುವ ರೀತಿಯಲ್ಲಿ ತನಿಖೆ ನಡೆಸಲಾಗುತ್ತಿದೆ. ಇದನ್ನು ನಾವು ಖಂಡಿಸುತ್ತೇವೆ' ಎಂದು ಭಾರತೀಯ ಏರ್‌ಲೈನ್ಸ್ ಪೈಲಟ್‌ಗಳ ಸಂಘ (ಎಎಲ್‌ಪಿಎ ಇಂಡಿಯಾ) ಹೇಳಿದೆ.

ಮಾನವ ದೋಷದ ಕಾರಣದಿಂದಲೇ ಅಹಮದಾಬಾದ್‌ನಿಂದ ಲಂಡನ್‌ಗೆ ತೆರಳುತ್ತಿದ್ದ ವಿಮಾನವು ಪತನಗೊಂಡಿದೆ ಎಂಬ ಆರೋಪವನ್ನು ಸಂಘ ತಳ್ಳಿಹಾಕಿದೆ. ವಿಮಾನ ಅಪಘಾತ ತನಿಖಾ ಬ್ಯೂರೊದ ಪ್ರಾಥಮಿಕ ವರದಿಯು ಬಹಿರಂಗಗೊಂಡ ಬಳಿಕ ಮೃತ ಪೈಲಟ್‌ಗಳನ್ನು ಗುರಿಯಾಗಿಸಲಾಗುತ್ತಿದೆ.

'ತನಿಖಾ ಸಂಸ್ಥೆಯು ತನಿಖೆಯ ಕುರಿತು 'ರಹಸ್ಯ' ಮಾಡುತ್ತಿದೆ. ತನಿಖೆಯಲ್ಲಿ ತಜ್ಞ ವ್ಯಕ್ತಿಗಳು ಭಾಗಿಯಾಗಿಲ್ಲ' ಎಂದು ತನಿಖಾ ಬ್ಯೂರೊಗೆ ಸಂಘ ಮನವಿ ಮಾಡಿದೆ.

'ಪೈಲಟ್‌ಗಳೇ ವಿಮಾನ ಪತನಗೊಳ್ಳುವಂತೆ ಮಾಡಿದ್ದಾರೆ ಎನ್ನಲಾಗುತ್ತಿದೆ. ಇದರಿಂದ ತೀವ್ರ ನೋವಾಗಿದೆ' ಎಂದು ಭಾರತೀಯ ವಾಣಿಜ್ಯ ಪೈಲಟ್‌ಗಳ ಸಂಘ (ಐಸಿಪಿಎ) ಹೇಳಿದೆ.

'ತಾಂತ್ರಿಕ ದೋಷ ಇರಲಿಲ್ಲ'

'ವಿಮಾನದಲ್ಲಾಗಲಿ ಎಂಜಿನ್‌ನಲ್ಲಾಗಲಿ ಯಾವುದೇ ತಾಂತ್ರಿಕ ಅಥವಾ ನಿರ್ವಹಣಾ ದೋಷ ಇರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿಲ್ಲ. ಜೊತೆಗೆ ಎಲ್ಲ ಎಚ್ಚರಿಕೆ ತೆಗೆದುಕೊಳ್ಳಲಾಗಿತ್ತು' ಎಂದು ಏರ್ ಇಂಡಿಯಾದ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಕ್ಯಾಂಪ್‌ಬೆಲ್ ವಿಲ್ಸನ್ ಸೋಮವಾರ ಹೇಳಿದರು.

'ಅಂತಿಮ ವರದಿ ಬರುವವರೆಗೂ ವೈಭವೀಕರಿಸಿದ ತಲೆಬರಹಗಳು ಬರುತ್ತಲೇ ಇರುತ್ತವೆ. ಆದರೆ, ನಮ್ಮ ಆದ್ಯತೆಗಳಿಂದ ನಾವು ಹಿಂದೆ ಸರಿಯುವುದು ಬೇಡ. ಇಂಧನದ ಗುಣಮಟ್ಟದ ಕುರಿತಾಗಲಿ ಟೇಕ್‌ಆಫ್ ಆಗುವ ಪ್ರಕ್ರಿಯೆಯಲ್ಲಾಗಲಿ ಯಾವುದೇ ದೋಷವಾಗಿಲ್ಲ' ಎಂದು ತಮ್ಮ ಸಿಬ್ಬಂದಿಗೆ ವಿಲ್ಸನ್ ಸಂದೇಶ ನೀಡಿದರು.

ಫಲ ನೀಡದ ಬಾಲಂಗೋಚಿಗಳ ಹೋರಾಟ

ರವೀಂದ್ರ ಜಡೇಜ ಕೆಚ್ಚೆದೆಯ ಅರ್ಧಶತಕ
• ಸರಣಿಯಲ್ಲಿ ಇಂಗ್ಲೆಂಡ್‌ಗೆ 2–1 ಮುನ್ನಡೆ

• ಸಿಡ್ನಿ ಕಿರಣ್

ಲಂಡನ್: ನಿಧಾನಗತಿಯಲ್ಲಿ ಸಾಗಿದ ಹೋರಾಟ ಮಧ್ಯಾಹ್ನದ ಬಳಿಕ ಜೀವಕಳೆ ಪಡೆಯಿತು. ಸ್ವಲ್ಪ ರೋಚಕತೆಯತ್ತಲೂ ಸಾಗಿತು. ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯದ ಅಂತಿಮ ದಿನವಾದ ಸೋಮವಾರ ಭಾರತ ಕೊನೆಯವರೆಗೂ ಹೋರಾಟ ನಡೆಸಿತು. ಆದರೆ, ಕೆಚ್ಚೆದೆಯಿಂದ ಆಡಿದ ಇಂಗ್ಲೆಂಡ್ ತಂಡ 22 ರನ್‌ಗಳಿಂದ ಜಯಶಾಲಿಯಾಯಿತು.

ಆತಿಥೇಯರು ಐದು ಟೆಸ್ಟ್‌ಗಳ ಸರಣಿಯಲ್ಲಿ 2–1 ಮುನ್ನಡೆ ಪಡೆದರು.

ತೀವ್ರ ಪೈಪೋಟಿ ಕಂಡಿದ್ದ ಈ ಟೆಸ್ಟ್‌ನಲ್ಲಿ 4 ವಿಕೆಟ್‌ಗೆ 58 ರನ್‌ಗಳೊಡನೆ ಕೊನೆಯ ದಿನದಾಟ ಮುಂದುವರಿಸಿದ ಭಾರತಕ್ಕೆ ಇನ್ನೂ 135 ರನ್ ಗಳಿಸಬೇಕಾಗಿತ್ತು. ಭಾರತದ ಆಸೆ ಕೆ.ಎಲ್.ರಾಹುಲ್ ಮತ್ತು ರಿಷಭ್ ಪಂತ್ ಅವರ ಆಟದ ಮೇಲಿತ್ತು. ಇವರಿಬ್ಬರು ಕೊನೆಯ ಪರಿಣತ ಬ್ಯಾಟರ್‌ಗಳಾಗಿದ್ದರು. ಆದರೆ ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ (48ಕ್ಕೆ3) ಮತ್ತು ತಮ್ಮ ವೇಗದಿಂದಲೇ ಖ್ಯಾತಿ ಹೊಂದಿರುವ ಜೋಫ್ರಾ ಆರ್ಚರ್ (55ಕ್ಕೆ3) ಅವರು ತಮ್ಮ ತಂಡವನ್ನು ದೊಡ್ಡ ಗೆಲುವಿನ ಬಳಿ ತಲುಪಿಸಿದರು. ಭೋಜನದ ವೇಳೆಗೆ 7 ವಿಕೆಟ್‌ಗೆ 82 ರನ್‌ಗಳೊಡನೆ ಭಾರತ ದಯನೀಯ ಸ್ಥಿತಿಯಲ್ಲಿತ್ತು.

ಭಾರತಕ್ಕೆ ಕಡಿಮೆ ರನ್ ಅಂತರದ ಸೋಲು (ಟೆಸ್ಟ್)

ರನ್	ಎದುರಾಳಿ	ತಾಣ	ವರ್ಷ
12	ಪಾಕಿಸ್ತಾನ	ಚೆನ್ನೈ	1999
16	ಆಸ್ಟ್ರೇಲಿಯಾ	ಬ್ರಿಸ್ಬೇನ್	1977
16	ಪಾಕಿಸ್ತಾನ	ಬೆಂಗಳೂರು	1987
22	ಇಂಗ್ಲೆಂಡ್	ಲಾರ್ಡ್ಸ್	2025
25	ನ್ಯೂಜಿಲೆಂಡ್	ವಾಂಖೆಡೆ	2024

ಆದರೆ ಭಾರತ ಸುಲಭವಾಗಿ ಸೋಲೊಪ್ಪಲಿಲ್ಲ. ಹಲವು ಹೋರಾಟಗಳ ಅನುಭವಿ ರವೀಂದ್ರ ಜಡೇಜ (ಅಜೇಯ 61, 181 ಎಸೆತ) ಅವರು ಕೆಚ್ಚೆದೆಯಿಂದ ಆಡಿ ಮೂರು ಜೊತೆಯಾಟಗಳಲ್ಲಿ ಭಾಗಿಯಾದರು. 'ಕ್ರಿಕೆಟ್‌ನ ತವರು ನೆಲ'ದ ಪ್ರೇಕ್ಷಕರಲ್ಲಿ ರೋಮಾಂಚನ ಮೂಡಿಸಿದರು.

ಎಂಟನೇ ವಿಕೆಟ್‌ಗೆ ನಿತೀಶ್ ಕುಮಾರ್ ರೆಡ್ಡಿ ಜೊತೆ 30 ರನ್ ಸೇರಿಸಿದರು. ಈ ಜೊತೆಯಾಟ ಲಂಚ್‌ಗೆ ಕೆಲವೇ ಕ್ಷಣ ಮೊದಲು ಕೊನೆಗೊಂಡಿತು. ಆ ಹಂತದಲ್ಲಿ ಸೋಲಿನ ಕ್ಷಣಗಣನೆ ಆರಂಭವಾಗುವಂತೆ ಕಂಡಿತು. ಏಕೆಂದರೆ ಭಾರತದ ಬಳಿ ಎರಡು ವಿಕೆಟ್ ಗಳಿದ್ದು, ಗುರಿ 81 ರನ್‌ಗಳಷ್ಟು ದೂರವಿತ್ತು.

ಸತತ ನಾಲ್ಕು ಸಲ ಸೊನ್ನೆ ಸುತ್ತಿದ್ದ ಜಸ್‌ಪ್ರೀತ್ ಬೂಮ್ರಾ ಉಳಿದ ಇಬ್ಬರಲ್ಲಿ ಒಬ್ಬ-ರಾಗಿದ್ದರು. ಗೆಲುವಿನ ನಿರೀಕ್ಷೆಯಲ್ಲಿ ಮೊದಲ ಅವಧಿಯಂತೆ ಬೆಂಕಿಯುಂಡೆಗಳಂಥ ಶಾರ್ಟ್‌ಪಿಚ್‌ಗಳಿಂದ ಬಾಲಂಗೋಚಿಗಳನ್ನು ಇಂಗ್ಲೆಂಡ್ ವೇಗಿಗಳು ಕಾಡಿದರು. ಆದರೆ ಬೂಮ್ರಾ ಅವುಗಳನ್ನು ದೃಢ ನಿರ್ಧಾರದಿಂದ, ಅಷ್ಟೇ ವಿಶ್ವಾಸದಿಂದ ನಿಭಾಯಿಸಿದರು. ಪ್ರೇಕ್ಷಕ ವರ್ಗದಲ್ಲಿ ಬಹಳಷ್ಟು ಸಂಖ್ಯೆಯಲ್ಲಿದ್ದ ಭಾರತೀಯರೂ ಹುರಿದುಂಬಿಸಿದರು. ಎಲ್ಲ ತಂತ್ರಗಳನ್ನು ಬಳಸಿದ ಇಂಗ್ಲೆಂಡ್ ಹತಾಶೆಯಲ್ಲಿದ್ದಂತೆ ಕಂಡಿತು.

ಬೂಮ್ರಾ 104 ನಿಮಿಷ ಬ್ಯಾಟ್ ಮಾಡಿದರು. ಸ್ಟೋಕ್ಸ್ ಬೌಲಿಂಗ್‌ನಲ್ಲಿ ಮಹತ್ವಾಕಾಂಕ್ಷಿ ಪುಲ್ ಹೊಡೆತಕ್ಕೆ ಹೋಗಿ ಮಿಡ್‌ಆನ್‌ನಲ್ಲಿ ಕ್ಯಾಚಿತ್ತರು. ಆದರೆ ಆಗಲೂ ಭಾರತ ಶರಣಾಗಲಿಲ್ಲ. ಜಡೇಜ ಜೊತೆಗೂಡಿದ ಸಿರಾಜ್ ನಿಧಾನವಾಗಿ ಗುರಿಯತ್ತ ಸಾಗಿದರು. ಈ ವೇಳೆ ಜೋಫ್ರಾ ಆರ್ಚರ್ ಬೌಲಿಂಗ್‌ನಲ್ಲಿ ಚೆಂಡು ಸಿರಾಜ್ ಅವರ ತೋಳಿಗೆ ಅಪ್ಪಳಿಸಿತು. ಆದರೂ ಆಟ ಮುಂದುವರಿಸಿದರು. ಜಡೇಜ ಅಸಾಧಾರಣ ಗೆಲುವನ್ನು ಕೊಡಿಸುವ ಆಸೆ ಮೂಡಿತ್ತು. ಆದರೆ ಬೆರಳು ಮುರಿದುಕೊಂಡು ಹೆಚ್ಚಿನ ಅವಧಿಯಲ್ಲಿ ಹೊರಗಿದ್ದ ಸ್ಪಿನ್ನರ್ ಶೋಯೆಬ್ ಬಶೀರ್ ಭಾರತದ ಪ್ರತಿರೋಧವನ್ನು ಅಂತಿಮವಾಗಿ ಕೊನೆಗೊಳಿಸಿದರು. ಭಾರತ 170 ರನ್‌ಗಳಿಗೆ ಆಲೌಟ್ ಆಯಿತು.

ತಮ್ಮ ಆಕ್ರಮಣಕಾರಿ ದಾಳಿಯಿಂದ ಬೆನ್ ಸ್ಟೋಕ್ಸ್ ಮೆಚ್ಚುಗೆಗೆ ಪಾತ್ರರಾಗಿರುವ ಜೋಫ್ರಾ ಆರ್ಚರ್ ಅವರು ನಾಯಕನ ವಿಶ್ವಾಸ ಹುಸಿಗೊಳಿಸಲಿಲ್ಲ. 30 ವರ್ಷದ ವೇಗದ ಬೌಲರ್ ಪರಿಣಾಮಕಾರಿ ಎಸೆತಗಳನ್ನು ಪ್ರಯೋಗಿಸಿದರು. ಅದೂ ಕರಾರುವಾಕ್ ಆಗಿ. ದಿನದ ಎರಡನೇ ಓವರಿನಲ್ಲಿ ಅಮೋಘ ಎಸೆತದಲ್ಲಿ ಆಫ್ ಸ್ಟಂಪ್ ಹಾರಿಸಿ ಪಂತ್ ಅವರನ್ನು ಔಟ್ ಮಾಡಿದರು. ಪಿಚ್ ಆದ ನಂತರ ಚೆಂಡು ಚೂರು ತಿರುವು ಪಡೆದು ಪಂತ್ ಅವರನ್ನು ಗಲಿಬಿಲಿಗೊಳಿಸಿತು.

ಎಲ್ಲಾ ಮಾದರಿಗಳಲ್ಲಿ ಶ್ರೇಷ್ಠ ಆಲ್‌ರೌಂಡರ್ ಎನಿಸಿರುವ ಸ್ಟೋಕ್ಸ್ ಕೊನೆ ದಿನ ಬೌಲಿಂಗ್ ಹೊಣೆ ಮುಂದುವರಿಸಿದರು. ಅವರು ರಾಹುಲ್ ವಿಕೆಟ್ ಪಡೆದು ಪ್ರವಾಸಿ ತಂಡಕ್ಕೆ ಬಲವಾದ ಪೆಟ್ಟು ನೀಡಿದರು. ಜೋಫ್ರಾ, ತಮ್ಮದೇ ಬೌಲಿಂಗ್‌ನಲ್ಲಿ ಒಂದೇ ಕೈಲಿ ಹಿಡಿದ ಅಮೋಘ ಕ್ಯಾಚಿಗೆ ವಾಷಿಂಗ್ಟನ್ ಸುಂದರ್ ನಿರ್ಗಮಿಸಬೇಕಾಯಿತು. ಈ ವೇಳೆ ಇಂಗ್ಲೆಂಡ್‌ಗೆ ಸ್ಪಷ್ಟ ಮೇಲುಗೈ ಪಡೆಯಿತು.


ಅಜೇಯ ಅರ್ಧಶತಕ ಗಳಿಸಿದ ಜಡೇಜ


ಮೊಹಮ್ಮದ್ ಸಿರಾಜ್ ಔಟಾದಾಗ ಇಂಗ್ಲೆಂಡ್ ಆಟಗಾರರ ಸಂಭ್ರಮ ಎಎಫ್‌ಪಿ ಚಿತ್ರ

ಅತಿಯಾದ ಆವೇಶ: ಸಿರಾಜ್‌ಗೆ ದಂಡ

ಲಂಡನ್ (ಪಿಟಿಐ): ಲಾರ್ಡ್ಸ್ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಭಾನುವಾರ ಇಂಗ್ಲೆಂಡ್‌ನ ಆರಂಭ ಆಟಗಾರ ಬೆನ್ ಡಕೆಟ್ ಅವರನ್ನು ಔಟ್ ಮಾಡಿದ ನಂತರ ಅತಿಯಾದ ಆವೇಶ ಪ್ರದರ್ಶಿಸಿದ್ದಕ್ಕೆ ಭಾರತದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರಿಗೆ ಸೋಮವಾರ ಪಂದ್ಯ ಸಂಭಾವನೆಯ ಶೇ 15 ರಷ್ಟು ದಂಡ ವಿಧಿಸಲಾಗಿದೆ. ಒಂದು ಡಿಮೆರಿಟ್ ಪಾಯಿಂಟ್ ಕೂಡ ಹಾಕಲಾಗಿದೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್:
ಇಂಗ್ಲೆಂಡ್: 387 (112.3 ಓವರುಗಳಲ್ಲಿ)
ಭಾರತ: 387 (119.2 ಓವರುಗಳಲ್ಲಿ)
ಎರಡನೇ ಇನಿಂಗ್ಸ್:
ಇಂಗ್ಲೆಂಡ್: 192 (62.1 ಓವರುಗಳಲ್ಲಿ)
ಭಾರತ: 170 (74.5 ಓವರುಗಳಲ್ಲಿ)
(ಭಾನುವಾರ: 4 ವಿಕೆಟ್‌ಗೆ 58)
ರಾಹುಲ್ ಎಲ್‌ಬಿಡಬ್ಲ್ಯು ಬಿ ಸ್ಟೋಕ್ಸ್ 39 (58ಎ, 4x6)
ಪಂತ್ ಬಿ ಆರ್ಚರ್ 9 (12ಎ, 4x2)
ಜಡೇಜ ಔಟಾಗದೇ 61 (181ಎ, 4x4, 6x1)
ವಾಷಿಂಗ್ಟನ್ ಸಿ ಮತ್ತು ಬಿ ಆರ್ಚರ್ 0 (4ಎ)
ನಿತೀಶ್ ಸಿ ಸ್ಮಿತ್ ಬಿ ವೋಕ್ಸ್ 13 (53ಎ, 4x1)
ಬೂಮ್ರಾ ಸಿ ಸಬ್ (ಕುಕ್) ಬಿ ಸ್ಟೋಕ್ಸ್ 5 (54ಎ, 4x1)
ಸಿರಾಜ್ ಬಿ ಬಷೀರ್ 4 (30ಎ))
ಇತರೆ: 18 (ಲೆಗ್‌ಬೈ 9, ನೋಬಾಲ್ 3, ವೈಡ್ 6)
ವಿಕೆಟ್ ಪತನ: 5–71 (ರಿಷಭ್ ಪಂತ್, 20.5), 6–81 (ಕೆ.ಎಲ್.ರಾಹುಲ್, 23.5), 7–82 (ವಾಷಿಂಗ್ಟನ್ ಸುಂದರ್, 24.4), 8–112 (ನಿತೀಶ್ ಕುಮಾರ್ ರೆಡ್ಡಿ, 39.3), 9–147 (ಜಸ್‌ಪ್ರೀತ್ ಬೂಮ್ರಾ 61.3), 10–170 (ಮೊಹಮ್ಮದ್ ಸಿರಾಜ್, 74.5)
ಬೌಲಿಂಗ್: ಕ್ರಿಸ್ ವೋಕ್ಸ್ 12–5–21–1; ಜೋಫ್ರಾ ಆರ್ಚರ್ 16–1–55–3; ಬೆನ್ ಸ್ಟೋಕ್ಸ್ 24–4–48–3; ಬ್ರೈಡನ್ ಕಾರ್ಸ್ 16–2–30–2; ಜೋ ರೂಟ್ 1-0-1-0; ಶೋಯೆಬ್ ಬಶೀರ್ 5.5–1–6–1.
ಪಂದ್ಯದ ಆಟಗಾರ: ಬೆನ್ ಸ್ಟೋಕ್ಸ್

ಫಲಿತಾಂಶ: ಇಂಗ್ಲೆಂಡ್‌ಗೆ 22 ರನ್ ಜಯ, ಸರಣಿಯಲ್ಲಿ 2–1 ಮುನ್ನಡೆ

ಸಾತ್ವಿಕ್–ಚಿರಾಗ್ ಮೇಲೆ ನಿರೀಕ್ಷೆ

ಟೋಕಿಯೊ (ಪಿಟಿಐ): ದೇಶದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ, ಮಂಗಳವಾರ ಆರಂಭವಾಗಲಿರುವ ಜಪಾನ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ 15ನೇ ಸ್ಥಾನದಲ್ಲಿರುವ ಸಾತ್ವಿಕ್– ಚಿರಾಗ್ ಜೋಡಿಯು ದಕ್ಷಿಣ ಕೊರಿಯಾದ ಕಾಂಗ್ ಮಿನ್ ಹ್ಯೂಕ್– ಕಿ ಡಾಂಗ್ ಜು ವಿರುದ್ಧ ಅಭಿಯಾನ ಆರಂಭಿಸಲಿದೆ.

ಲಕ್ಷ್ಯ ಸೇನ್ ಅವರು ಲಯಕ್ಕೆ ಮರಳುವ ವಿಶ್ವಾಸದಲ್ಲಿದ್ದಾರೆ. 23 ವರ್ಷ ವಯಸ್ಸಿನ ಈ ಆಟಗಾರ ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಚೀನಾದ ವಾಂಗ್ ಜೆಂಗ್ ಶಿಂಗ್ ಎದುರು ಸೆಣಸಲಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 16ನೇ ಸ್ಥಾನದಲ್ಲಿರುವ ಪಿ.ವಿ. ಸಿಂಧು ಅವರೂ ಪ್ರಶಸ್ತಿಯ ಬರ ತೀರಿಸಿಕೊಳ್ಳಲು ಎದುರು ನೋಡುತ್ತಿದ್ದಾರೆ. ಅವರು, ಕೊರಿಯಾದ ಶಿಮ್ ಯು ಜಿನ್ ಎದುರು ಅಭಿಯಾನ ಆರಂಭಿಸುವರು.

ಇದೇ 20ರವರೆಗೆ ಟೋಕಿಯೊದಲ್ಲಿ ಟೂರ್ನಿ ನಡೆಯಲಿದ್ದು, ಸುಮಾರು ₹8.16 ಕೋಟಿ ಬಹುಮಾನ ಮೊತ್ತವಿದೆ.

ಟಿ20 ತ್ರಿಕೋನ ಸರಣಿ: ದಕ್ಷಿಣ ಆಫ್ರಿಕಾಗೆ ಜಯ

ಹರಾರೆ (ಎಎಫ್‌ಪಿ): ದಕ್ಷಿಣ ಆಫ್ರಿಕಾ ತಂಡವು ಸೋಮವಾರ ನಡೆದ ಟಿ20 ತ್ರಿಕೋನ ಸರಣಿಯ ಉದ್ಘಾಟನಾ ಪಂದ್ಯದಲ್ಲಿ ಐದು ವಿಕೆಟ್‌ಗಳಿಂದ ಜಿಂಬಾಬ್ವೆ ತಂಡವನ್ನು ಮಣಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಜಿಂಬಾಬ್ವೆ ತಂಡವು ನಾಯಕ ಸಿಕಂದರ್ ರಝಾ (ಔಟಾಗದೇ 54;38ಎ) ಅವರ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ ಆರು ವಿಕೆಟ್‌ಗೆ 141 ರನ್ ಗಳಿಸಿತ್ತು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 25 ಎಸೆತಗಳು ಬಾಕಿ ಇರುವಂತೆ ಐದು ವಿಕೆಟ್‌ಗೆ 142 ರನ್ ಗಳಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ನಾಯಕ ರಾಬಿನ್ ಹರ್ಮನ್ (45;37ಎ) ಮತ್ತು ಡೆವಾಲ್ಡ್ ಬ್ರೆವಿಸ್ (41;17ಎ) ಉಪಯುಕ್ತ ಕಾಣಿಕೆ ನೀಡಿದರು.

ನ್ಯೂಜಿಲೆಂಡ್ ತಂಡವು ಬುಧವಾರ ಇದೇ ತಾಣದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸುವ ಮೂಲಕ ಟೂರ್ನಿಯಲ್ಲಿ ಅಭಿಯಾನ ಆರಂಭಿಸಲಿದೆ.

ಚಿಟಿಕೆ ಸುದ್ದಿ

17ರಂದು ಟ್ರಯಲ್ಸ್

ಬೆಂಗಳೂರು: ಸಬ್ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ಗಾಗಿ ರಾಜ್ಯ ತಂಡದ ಆಯ್ಕೆಗಾಗಿ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯು ಟ್ರಯಲ್ಸ್ ಆಯೋಜಿಸಿದೆ.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಇದೇ 17ರಂದು ಮಧ್ಯಾಹ್ನ 3.30ಕ್ಕೆ ಟ್ರಯಲ್ಸ್ ನಡೆಯಲಿದೆ. 2012ರ ಜನವರಿ 1ರಿಂದ 2013ರ ಡಿಸೆಂಬರ್ 31ರ ಅವಧಿಯಲ್ಲಿ ಜನಿಸಿದವರು ಪಾಲ್ಗೊಳ್ಳಬಹುದು. ಆಟಗಾರ್ತಿಯರು ಭಾವಚಿತ್ರ, ಜನನ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್‌ನ ಪ್ರತಿಯೊಂದಿಗೆ ಹಾಜರಾಗುವಂತೆ ಸೂಚಿಸಲಾಗಿದೆ.

ಸನ್‌ರೈಸರ್ಸ್ ಬೌಲಿಂಗ್ ಕೋಚ್ ಆಗಿ ವರುಣ್

ಹೈದರಾಬಾದ್ (ಪಿಟಿಐ): ಭಾರತ ತಂಡದ ಮಾಜಿ ವೇಗದ ಬೌಲರ್ ವರುಣ್ ಆ್ಯರನ್ ಅವರನ್ನು ಸನ್‌ರೈಸರ್ಸ್ ಹೈದರಾಬಾದ್ ಫ್ರಾಂಚೈಸಿಯು (ಎಸ್‌ಆರ್‌ಎಚ್) 2026ನೇ ಸಾಲಿಗೆ ಬೌಲಿಂಗ್ ಕೋಚ್ ಆಗಿ ಸೋಮವಾರ ನೇಮಕ ಮಾಡಿದೆ.


ವರುಣ್ ಆ್ಯರನ್

ಅವರು ನ್ಯೂಜಿಲೆಂಡ್‌ನ ಎಡಗೈ ವೇಗಿ ಜೇಮ್ಸ್ ಫ್ರಾಂಕ್ಲಿನ್ ಸ್ಥಾನ ತುಂಬಲಿದ್ದಾರೆ ಎಂದು ಎಸ್‌ಆರ್‌ಎಚ್ ತನ್ನ ಎಕ್ಸ್ ಖಾತೆಯಲ್ಲಿ ತಿಳಿಸಿದೆ.

35 ವರ್ಷ ವಯಸ್ಸಿನ ಆ್ಯರನ್ 2011 ರಿಂದ 2015ರ ಅವಧಿಯಲ್ಲಿ ಭಾರತ ತಂಡಕ್ಕೆ ಒಂಬತ್ತು ಟೆಸ್ಟ್ ಮತ್ತು ಅಷ್ಟೇ ಸಂಖ್ಯೆಯ ಏಕದಿನ ಪಂದ್ಯಗಳನ್ನು ಆಡಿದ್ದಾರೆ.

ಡ್ರಗ್ಸ್ ಪಿಡುಗು: ಜಾಗೃತಿಗೆ ಚಿಂತನ ಶಿಬಿರ

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಸೇವನೆಯಿಂದ ಆಗುವ ದುಷ್ಪರಿ-ಣಾಮಗಳ ಬಗ್ಗೆ ಯುವ ಸಮೂಹದಲ್ಲಿ ಜಾಗೃತಿ ಮೂಡಿಸಲು ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯವು ಇದೇ 18 ರಿಂದ 20ರವರೆಗೆ ವಾರಾಣಸಿಯಲ್ಲಿ ಚಿಂತನ ಶಿಬಿರ ಏರ್ಪಡಿಸಿದೆ.


ಮನ್ಸುಖ್ ಮಾಂಡವೀಯ

'ಭಾರತದ ಅಭಿವೃದ್ಧಿಗೆ ನಶೆ ಮುಕ್ತ ಭಾರತ' ಹೆಸರಿನ ಈ ಶಿಬಿರವು 2047ರ ಒಳಗೆ ಭಾರತವನ್ನು ಉದ್ದೀಪನ ಮದ್ದು ಸೇವನೆ ಪಿಡುಗಿನಿಂದ ಮುಕ್ತಗೊಳಿಸುವ ಗುರಿಯನ್ನು ಹೊಂದಿದೆ.

18ರಂದು ನೋಂದಣಿ ಆರಂಭವಾಗಲಿದೆ. ಮರುದಿನದಿಂದ ಶಿಬಿರ ನಡೆಯಲಿದೆ. ಚರ್ಚೆಯಲ್ಲಿನ ಪ್ರಮುಖ ಅಂಶ ಆಧರಿಸಿ ಅಂತಿಮ ದಿನ 'ಕಾಶಿ ಘೋಷಣೆ' ಹೆಸರಿನಲ್ಲಿ ಕ್ರಿಯಾ ಯೋಜನೆ ಬಿಡುಗಡೆ ಮಾಡಲಾಗುವುದು ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ತಿಳಿಸಿದರು.

ವಿಂಬಲ್ಡನ್: ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದ ಇಟಲಿಯ ಮೊದಲ ಆಟಗಾರ

ಸಾಕಾರಗೊಂಡ ಯಾನಿಕ್ ಸಿನ್ನರ್ ಕನಸು


ಟ್ರೋಫಿಯೊಂದಿಗೆ ಯಾನಿಕ್ ಸಿನ್ನರ್ ಎಕ್ಸ್ ಚಿತ್ರ

ಲಂಡನ್ (ಎಪಿ): ಯಾನಿಕ್ ಸಿನ್ನರ್ ಅವರಿಗೆ ಈ ಜಯ ಎಲ್ಲದ್ದಕ್ಕಿಂತ ಮಹತ್ವದ್ದಾಗಿತ್ತು. ಎದುರಾಳಿ ಯಾರೇ ಇರಲಿ– ವಿಂಬಲ್ಡನ್ ಗೆಲ್ಲುವುದು ಅವರ ಮಹತ್ವಾಕಾಂಕ್ಷೆಯಾಗಿತ್ತು. ನಾಲ್ಕನೇ ಗ್ರ್ಯಾನ್‌ಸ್ಲಾಮ್ ಗೆಲುವಿನ ಮೂಲಕ ಭಾನುವಾರ ಅವರ ಕನಸು ಸಾಕಾರಗೊಂಡಿತು. ಎರಡು ಬಾರಿಯ ವಿಜೇತ ಕಾರ್ಲೋಸ್ ಅಲ್ಕರಾಜ್ ಅವರನ್ನು ಸೋಲಿಸಿದ್ದರಿಂದ ಈ ಗೆಲುವಿಗೆ ಇನ್ನಷ್ಟು ಮಹತ್ವ ದೊರಕಿದೆ.

ಇವರಿಬ್ಬರ ಪೈಪೋಟಿ ಮುಂದಿನ ಕೆಲವು ವರ್ಷಗಳಲ್ಲಿ ಮುಂದುವರಿಯುಂತೆ ಕಾಣುತ್ತಿದೆ.

'ಇದು ಮಹತ್ವದ ಜಯ, ಅನುಮಾನವಿಲ್ಲ. ಒಬ್ಬ ಆಟಗಾರ ಎದುರಾಳಿಯ ವಿರುದ್ಧ ಅನೇಕ ಬಾರಿ ಸೋತಾಗ ಇಂಥ ಗೆಲುವು ಪಡೆಯುವುದು ಸುಲಭವಲ್ಲ' ಎಂದು ಸಿನ್ನರ್ ಅವರು ಫೈನಲ್‌ನಲ್ಲಿ ಎರಡನೇ ಕ್ರಮಾಂಕದ ಅಲ್ಕರಾಜ್ ವಿರುದ್ಧ 4–6, 6–4, 6–4, 6–4ರಲ್ಲಿ ಗೆದ್ದ ನಂತರ ಪ್ರತಿಕ್ರಿಯಿಸಿದರು. ವಿಂಬಲ್ಡನ್ ಸಿಂಗಲ್ಸ್ ಗೆದ್ದ ಇಟಲಿಯ ಮೊದಲ ಆಟಗಾರ ಎನ್ನುವ ಹಿರಿಮೆಗೂ ಪಾತ್ರರಾದರು.



ಸಿನ್ನರ್ ಜೊತೆಗಿನ ಪೈಪೋಟಿಯಿ ನನಗೆ ತುಂಬಾ ಸಂಸತ ನೀಡಿದೆ. ನಮಗಿಬ್ಬರಿಗೂ ಇದು ಒಳ್ಳೆಯದು. ಟೆನಿಸ್‌ಗೂ ಸಹ. ಪ್ರತಿ ಬಾರಿ ಎದುರಾದಾಗ ನಮ್ಮ ಆಟದ ಮಟ್ಟ ಎತ್ತರಕ್ಕೇರುತ್ತದೆ
ಕಾರ್ಲೋಸ್ ಅಲ್ಕರಾಜ್, ರನ್ನರ್ಸ್ ಅಪ್

23 ವರ್ಷ ವಯಸ್ಸಿನ ಸಿನ್ನರ್ ಅವರು ಸತತವಾಗಿ ಐದು ಸಲ 22 ವರ್ಷದ ಅಲ್ಕರಾಜ್‌ಗೆ ಸೋತಿದ್ದರು. ಅದರಲ್ಲೂ ಫ್ರೆಂಚ್ ಓಪನ್ ಫೈನಲ್‌ನಲ್ಲಿ ಸೋಲು ಅವರಿಗೆ ಎದೆಗುಂದಿಸಿತ್ತು. ಆ ಪಂದ್ಯದಲ್ಲಿ ಎರಡು ಸೆಟ್ ಗೆದ್ದ ಸಿನ್ನರ್ ಮೂರು ಬಾರಿ ಗೆಲುವಿನ ಪಾಯಿಂಟ್ ಪಡೆಯಲಷ್ಟೇ ಬಾಕಿಯಿತ್ತು. ಆಗ ಅಲ್ಕರಾಜ್ ಚೇತರಿಸಿಕೊಂಡು 5 ಗಂಟೆ 29 ನಿಮಿಷಗಳ ಪಂದ್ಯದಲ್ಲಿ ಅವಿಸ್ಮರಣೀಯ ರೀತಿ ಜಯಗಳಿಸಿದ್ದರು.

ಆಗಸ್ಟ್ 24ರಂದು ಆರಂಭವಾಗುವ ನ್ಯೂಯಾರ್ಕ್‌ನಲ್ಲಿ ಆರಂಭವಾಗಲಿರುವ ಅಮೆರಿಕ ಓಪನ್‌ನಲ್ಲಿ ಸಿನ್ನರ್ ಮತ್ತು ಅಲ್ಕರಾಜ್ ಮೊದಲ ಎರಡು ಶ್ರೆಯಾಂಕದ ಪಡೆಯಲಿದ್ದಾರೆ. ಸಿನ್ನರ್ ಅಲ್ಲಿ ಹಾಲಿ ಚಾಂಪಿಯನ್. ಅವರಿಬ್ಬರು ಮತ್ತೆ ಫೈನಲ್‌ನಲ್ಲಿ ಎದುರಾಗಬಹುದಷ್ಟೇ.

ಅಲ್ಕರಾಜ್ 2022ರಲ್ಲಿ ಫ್ಲಷಿಂಗ್ ಮಿಡೋಸ್‌ನಲ್ಲಿ ಚಾಂಪಿಯನ್ ಆಗಿದ್ದರು. ಅಲ್ಲಿಂದ ಇವರಿಬ್ಬರ ನಡುವಣ ಹಣಾಹಣಿ ಬಿರುಸು ಪಡೆಯಿತು. 12 ಪ್ರಮುಖ ಟೂರ್ನಿಗಳಲ್ಲಿ ಒಂಬತ್ತನ್ನು ಇವರಿಬ್ಬರು ಹಂಚಿಕೊಂಡಿದ್ದಾರೆ. ಇತರ ಎದುರಾಳಿಗಳನ್ನು ಇವರಿಬ್ಬರು ಸೋಲಿಸುತ್ತ ಬಂದಿದ್ದಾರೆ.

ಭಾನುವಾರ ಇಬ್ಬರೂ ಉತ್ತಮವಾಗಿ ಸರ್ವ್ ಮಾಡಿದ್ದರೂ, ಸಿನ್ನರ್ ಹೆಚ್ಚು ಪರಿಣಾಮಕಾರಿಯಾದರು. ಮೂರು ಗಂಟೆಗಳ ಪಂದ್ಯದಲ್ಲಿ ಇಬ್ಬರೂ ಚೆಂಡನ್ನು ಹಿಂತಿರುಗಿಸುತ್ತಿದ್ದರೂ ಸಿನ್ನರ್ ಆಟದಲ್ಲಿ ಶ್ರೇಷ್ಠತೆ ಕಾಣಿಸಿತು. ಹೊಡೆತಗಳಿಗೆ ಎಟಕುವಲ್ಲಿ ಸಿನ್ನರ್ ಮೇಲುಗೈ ಸಾಧಿಸಿದರು. ಅಲ್ಕರಾಜ್ ಆಟದಲ್ಲಿ ಸೊಬಗು ಇತ್ತು. ಸಿನ್ನರ್ ಹೊಡೆತಗಳಲ್ಲಿ ಸ್ಥಿರತೆ ಇತ್ತು.

ಕಸ್ಟಮ್ಸ್ ಬೆಂಗಳೂರು ಚಾಂಪಿಯನ್


ಕಸ್ಟಮ್ಸ್ ಬೆಂಗಳೂರು ತಂಡವು ಪದ್ಮನಾಭನಗರದ ವಾಜಪೇಯಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಕೆ. ರಾಮಯ್ಯ ಸ್ಮಾರಕ ರಾಜ್ಯಮಟ್ಟದ ಕಬಡ್ಡಿ ಟೂರ್ನಿಯಲ್ಲಿ ಪುರುಷರ ವಿಭಾಗದ ಪ್ರಶಸ್ತಿಯನ್ನು ಗೆದ್ದುಕೊಂಡಿತು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಬಹುಮಾನ ವಿತರಿಸಿದರು

ಸ್ನೂಕರ್: ಜಯದ್ ಸೇರಿ ಐವರು ಸ್ಪರ್ಧೆ

ಬೆಂಗಳೂರು: ಕರ್ನಾಟಕದ ಜಯದ್ ಆರವ್ ಸೇರಿದಂತೆ ಐವರು ಆಟಗಾರರು ಬಹರೇನ್‌ನಲ್ಲಿ ಮಂಗಳವಾರ ಆರಂಭವಾಗಲಿರುವ ಐಬಿಎಸ್‌ಎಫ್ ವಿಶ್ವ 17 ವರ್ಷದೊಳ-ಗಿನವರ ಸ್ನೂಕರ್ ಚಾಂಪಿಯನ್‌ಷಿಪ್ ಭಾರತವನ್ನು ಪ್ರತಿನಿಧಿಸಲಿದ್ದಾರೆ.


ಜಯದ್ ಆರವ್

ಸಬ್ ಜೂನಿಯರ್ ವಿಭಾಗದ ರಾಷ್ಟ್ರೀಯ ಚಾಂಪಿಯನ್ ಆರವ್ ಸಂಚೇತಿ (ಮಹಾರಾಷ್ಟ್ರ), ರಾಹುಲ್ ವಿಲಿಯಮ್ಸ್ (ತಮಿಳುನಾಡು), ವೈಭವ್ ಛಡ್ಡಾ (ತೆಲಂಗಾಣ) ಹಾಗೂ ಭವ್ಯಾ ಪಿ. (ಗುಜರಾತ್) ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವರು. ಅವರಿಗೆ ಅಶೋಕ್ ಶಾಂಡಿಲ್ಯ ಮಾರ್ಗದರ್ಶನ ನೀಡುವರು.

ಫಿಡೆ ಮಹಿಳಾ ವಿಶ್ವಕಪ್ ಚೆಸ್ ಟೂರ್ನಿ: ವಂತಿಕಾ ಅಗರವಾಲ್ ನಿರ್ಗಮನ

ಪ್ರಿಕ್ವಾರ್ಟರ್‌ಗೆ ದಿವ್ಯಾ, ಹಂಪಿ, ವೈಶಾಲಿ

ಬಟುಮಿ (ಜಾರ್ಜಿಯಾ) (ಪಿಟಿಐ): ಭಾರತದ ದಿವ್ಯಾ ದೇಶಮುಖ್, ಕೋನೇರು ಹಂಪಿ, ಡಿ. ಹಾರಿಕಾ ಮತ್ತು ಆರ್.ವೈಶಾಲಿ ಅವರು ಫಿಡೆ ಮಹಿಳಾ ವಿಶ್ವಕಪ್ ಚೆಸ್ ಟೂರ್ನಿಯ ಅಂತಿಮ 16ರ ಘಟ್ಟ ಪ್ರವೇಶಿಸಿದರು.

ವಿಮೆನ್ ಗ್ರ್ಯಾಂಡ್‌ಮಾಸ್ಟರ್ ದಿವ್ಯಾ ಅವರು ಸರ್ಬಿಯಾದ ಥಿಯೊಡೊರ ಇಂಜಾಕ್ ವಿರುದ್ಧ ಮೊದಲ ಪಂದ್ಯ ಗೆದ್ದಿದ್ದು, ಮುಂದಿನ ಹಂತಕ್ಕೆ ಮುನ್ನಡೆಯಲು ಡ್ರಾ ಅಗತ್ಯವಿತ್ತು. ಅದನ್ನು ಸಾಧಿಸಿದರು.

ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೇರಿದ ದೇಶದ ಮೊದಲ ಆಟಗಾರ್ತಿ ಕೋನೇರು ಹಂಪಿ ಇನ್ನೊಂದು ಪಂದ್ಯದಲ್ಲಿ ಪೋಲೆಂಡ್‌ನ ಕುಲೊನ್ ಕ್ಲಾಡಿಯಾ ಅವರನ್ನು ಸೋಲಿಸಲು ಹೆಚ್ಚು ಶ್ರಮ ಹಾಕಬೇಕಾಯಿತು.


ಕೋನೇರು ಹಂಪಿ

ಇವರಿಬ್ಬರ ನಡುವಣ ಮೊದಲ ಪಂದ್ಯ ಡ್ರಾ ಆಗಿತ್ತು. ಪ್ರತಿ ಸುತ್ತಿನಲ್ಲಿ ಎರಡು ಕ್ಲಾಸಿಕಲ್ ಪಂದ್ಯಗಳನ್ನು ಆಡಬೇಕಾಗುತ್ತದೆ. 1–1 ಡ್ರಾ ಆದಲ್ಲಿ ಅಲ್ಪಾವಧಿಯ ಪಂದ್ಯ ಆಡಬೇಕಾಗುತ್ತದೆ.

ಹಾರಿಕಾ ಅವರು ಗ್ರೀಸ್‌ನ ಸೊಲಾಕಿಡೊ ಸ್ಟಾವ್ರೊಲಾ ವಿರುದ್ಧ ಎರಡೂ ಪಂದ್ಯಗಳನ್ನು ಡ್ರಾ ಮಾಡಿಕೊಂಡು, ಟೈಬ್ರೇಕರ್‌ನಲ್ಲಿ ಗೆಲುವು ಸಾಧಿಸಿದರು. ವೈಶಾಲಿ ಅವರೂ ಅಮೆರಿಕದ ಕ್ಯಾರಿಸ್ಸಾ ಯಿಪ್ ವಿರುದ್ಧದ ಪಂದ್ಯದಲ್ಲಿ ಗೆದ್ದು, ಮುನ್ನಡೆದರು.


ದಿವ್ಯಾ ದೇಶಮುಖ್

ಆದರೆ, ವಂತಿಕಾ ಅಗರವಾಲ್ ನಿರಾಸೆ ಮೂಡಿಸಿದರು. ಅವರು ರಷ್ಯಾದ ಕ್ಯಾತರಿನಾ ಲಾಗ್ನೊ ಅವರಿಗೆ ಶರಣಾಗಿ ಹೊರಬಿದ್ದರು.

ಟೂರ್ನಿಯು ₹6 ಕೋಟಿ ಬಹುಮಾನ ಮೊತ್ತ ಹೊಂದಿದ್ದು, ಪ್ರಶಸ್ತಿ ಗೆಲ್ಲುವ ಆಟಗಾರ್ತಿ ₹43 ಲಕ್ಷ ತಮ್ಮದಾಗಿಸಿಕೊಳ್ಳಲಿದ್ದಾರೆ.

ಈ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನ ಪಡೆದವರು ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆದುಕೊಳ್ಳಲಿದ್ದಾರೆ. ಒಟ್ಟು ಎಂಟು ಆಟಗಾರ್ತಿಯರು ಪಾಲ್ಗೊಳ್ಳುವ ಕ್ಯಾಂಡಿಡೇಟ್ಸ್ ಟೂರ್ನಿಯ ವಿಜೇತರು ವಿಶ್ವ ಚಾಂಪಿಯನ್ (ಪ್ರಸ್ತುತ ಚೀನಾದ ಜು ವೆನ್ಜುನ್) ಅವರಿಗೆ ಸವಾಲು ಹಾಕುವ ಅವಕಾಶ ಪಡೆಯುತ್ತಾರೆ.